UNIVERSAL LIBRARY
OU_198622
UNIVERSAL LIBRARY

# ಪಚ್ಚೆಯ ತೆನೆ

ಬರೆದವರು:
**ಸಂಘದ ಸದಸ್ಯರು**

ಸಂಪಾದಕರು:
**ಜಿ. ಪಿ. ರಾಜರತ್ನಂ**

**ಕರ್ಣಾಟಕ ಸಂಘ**
ಸೆಂಟ್ರಲ್ ಕಾಲೇಜ್, ಬೆಂಗಳೂರು

# ಒಳಪಿಡಿ


| | | ಪುಟ |
|---|---|---|
| ವಿಜ್ಞಾಪನೆ | .... .... | ೩ |
| ಹರಕೆ | .... | ೫ |
| ಕಾಲೆಜ್ ಬರವಣಿಗೆ | | |
| ೧. | ಕನ್ನಡಿಯ ಮುಂದೆ .... .... | ೯ |
| ೨. | ಒಂದು ಕೆಟ್ಟ ಕನಸು .... .... | ೧೬ |
| ೩. | ಹಳೆಯ ಚಪ್ಪಲಿ ಹೊಲಿಯುವವನು .... | ೨೧ |
| ೪. | ನಾನು ತಿಂದಿರುವ ಹಣ್ಣುಗಳು .... | ೨೬ |
| ೫. | ಪೆನ್ಸಿಲಿನ ಆಶೆ .... .... | ೩೪ |
| ೬. | ಮೂಗಿನ ಮಹತ್ತ್ವ .... .... | ೪೧ |
| ೭. | ನಾನು ಕಂಡಿರುವ ಕಣ್ಣುಗಳು .... | ೪೯ |
| ೮. | ಸಸ್ಯ ಸೌಂದರ್ಯ .... .... | ೫೪ |
| ೯. | ಸಸ್ಯಶಾಸ್ತ್ರ ಪ್ರದರ್ಶನ .... .... | ೫೮ |
| ೧೦. | ಸಸ್ಯವೈಭವ .... .... | ೬೮ |
| 'ಕಾಲೆಜ್ ಬರವಣಿಗೆ'ಯನ್ನು ಕುರಿತು | .... | ೭೪ |

# ವಿಜ್ಞಾಪನೆ

ನಮ್ಮ ಸೆಂಟ್ರಲ್ ಕಾಲೆಜ್ ಕರ್ಣಾಟಕ ಸಂಘದಿಂದ 'ಕಾಲೆಜ್ ಬರವಣಿಗೆ'ಯನ್ನು ಪ್ರಕಟಿಸಬೇಕೆಂದು ಸೂಚನೆ ಮಾಡಿದಾಗ, ನಾವು ಮೊದಲು ನಿಯಮಿಸಿದ್ದ ಹತ್ತು ವಿಷಯಗಳನ್ನು ಕುರಿತು 70 ಎಸ್ಸೆಗಳು ಬಂದವು. ಈಗ ಎರಡನೆಯ ಆವರ್ತಕ್ಕೆ ನಿಯಮಿಸಿದ ಹತ್ತು ವಿಷಯಗಳ ಮೇಲೆ 90 ಎಸ್ಸೆಗಳು* ಬಂದವು! ನಮ್ಮ ಕಾಲೇಜಿನ ಸಸ್ಯಶಾಸ್ತ್ರಪ್ರದರ್ಶನವನ್ನು ಕುರಿತು 8 ಲೇಖನಗಳು, 'ಕಾಲೆಜ್ ಬರವಣಿಗೆ'ಯನ್ನು ಕುರಿತ ಒಂದು ವಿಮರ್ಶೆ, ನಾವು ಕೇಳದ ಇತರ ಮೂರು ಲೇಖ—ಒಟ್ಟು 102 ಲೇಖಗಳು ಪ್ರಕಟನೆಗೆ ಬಂದವು. ಅವುಗಳಲ್ಲಿ ಆರಿಸಿದ 10 ಇಲ್ಲಿದೆ. ಉತ್ತಮವಾಗಿರುವ ಇನ್ನೂ ಕೆಲವನ್ನು 'ಮೂರನೆಯ ಆವರ್ತ'ವಾಗಿ ಪ್ರಕಟಿಸುವ ಪ್ರಯತ್ನ ನಡೆದಿದೆ. ಈ ಪ್ರಯತ್ನಗಳಿಗೆ ಲೇಖಗಳನ್ನು ಕಳಿಸಿದ್ದಲ್ಲದೆ, ಅಚ್ಚಾದ ಪುಸ್ತಕಗಳನ್ನು ಕೊಂಡುಕೊಂಡ ನಮ್ಮ ವಿದ್ಯಾರ್ಥಿವೃಂದಕ್ಕೂ, ಈ ಚಿರಂಜೀವಿಗಳ ಕುಶಲ ಕೃತ್ಯಗಳಿಗೆ ಮೆಚ್ಚಿ ಆಶೀರ್ವದಿಸಿರುವ ಹಿರಿಯರಿಗೂ (ಪುಟ ೭೪-೮೦ ನೋಡಿ) ಸಂಘವು ವಂದನೆಗಳನ್ನು ಸಲ್ಲಿಸುತ್ತದೆ.

ವಿದ್ಯಾರ್ಥಿಗಳು ನೀವು ಕೆಲವರು ಈ ವರ್ಷ ಸೀನಿಯರ್‌ನಲ್ಲಿರುವವರು; ಕಾಲೇಜಿನ ಜೀವನವನ್ನು ಮುಗಿಸಿ, ವಿಸ್ತಾರ ಜೀವನ ರಂಗದಲ್ಲಿ ಪ್ರವೇಶಿಸುವ ನಿಮಗೆ ಶ್ರೀ ದೇವರು ಎಲ್ಲಾ ಕ್ಷೇಮಗಳನ್ನೂ ಕರುಣಿಸಲಿ. ಜೂನಿಯರ್‌ನಿಂದ ಸೀನಿಯರ್‌ಗೆ ಬರುವವರು ನೀವು ಮುಂದಿನ ವರುಷಗಳಲ್ಲಿ ಕೂಡ 'ಕಾಲೆಜ್ ಬರವಣಿಗೆ'ಯನ್ನು ಇನ್ನೂ ಸಮರ್ಥವಾಗಿ ಮುಂದುವರಿಸಲು ಬೇಕಾದ ಮನಸ್ಸು, ಬುದ್ಧಿ, ಬರವಣಿಗೆ, ದ್ರವ್ಯಗಳನ್ನು ಸಂಗ್ರಹಿಸಿಕೊಂಡು ಬನ್ನಿ. ನಮ್ಮ ಕಾಲೇಜಿನ ಮೂರನೆಯ ಆನರ್ಸ್‌ಗೆ ಬರುವವರು "ಹಿಂದಿನ ವರುಷಗಳಲ್ಲಿ ನಾವೂ ಕನ್ನಡ ಕಲಿತವರು; ಎಲ್ಲಿಯ ವರೆಗೆ ನಾವು ಇಂಗ್ಲಿಷಿನಲ್ಲಿ

---

* ಹಳೆಯ ಚಪ್ಪಲಿ ಹೊಲಿಯುವವನು (13), ನಾನು ಕಂಡಿರುವ ಕಣ್ಣುಗಳು (15), ಪರೀಕ್ಷೆಯ ಹಿಂದಿನ ರಾತ್ರಿ (14), ನಮ್ಮ ಅಗಸ (7), ಕವಳಾ ತಾಯೀ (13), ಲಗ್ನಪತ್ರಿಕೆಗಳು (2), ಒಮ್ಮೆ ನನಗೆ ಕೋಪ ಬಂತು! (4), ನಾನು ತಿಂದಿರುವ ಹಣ್ಣುಗಳು (4), ಮೂಗಿನ ಮಹತ್ತ್ವ (13), ಕನ್ನಡಿಯ ಮುಂದೆ (5).

ಆಗಿದದ್ದು ಕನ್ನಡದ ಹಾಲಾಗಿ ಹರಿದುಬರುವುದಿಲ್ಲವೋ ಅಲ್ಲಿಯವರೆಗೆ ನಾವು ಕಲಿತದ್ದೆಲ್ಲ 'ಹೋತನಾ ಕೊರಳಲ್ಲಿ ಮೊಲೆಯಿದ್ದ' ಹಾಗೆ" ಎಂಬುದನ್ನು ಮರೆಯದೆ ಕಾಲೇಜಿನ ಈ ಕೆಲಸದಲ್ಲಿ ಭಾಗಿಗಳಾಗಿರಿ. ನಿಮಗೆ ಕಾಲೇಜು ಕೊಟ್ಟ ವಿಜ್ಞಾನದ ಲಾಭವನ್ನು ನೀವು ಇತರ ಕನ್ನಡಿಗರಿಗೂ ಕೊಡಿರಿ. ಇದರಿಂದ ಉಭಯತ್ರ ಲಾಭ.

ಈ ವರ್ಷದ ನಮ್ಮ ಈ ಪ್ರಯೋಗಗಳಲ್ಲಿ ನಾನಾ ಪ್ರಕಾರವಾಗಿ ನೆರವಾದವರೆಲ್ಲರಿಗೂ ಮತ್ತೊಮ್ಮೆ ವಂದಿಸಿ, ಸದ್ಯಕ್ಕೆ ವಿರಮಿಸುತ್ತೇನೆ.

15-2-1954
ಸೆಂಟ್ರಲ್ ಕಾಲೇಜ್

**ಜಿ. ಪಿ. ರಾಜರತ್ನಂ**
ಕರ್ಣಾಟಕ ಸಂಘದ ಪರವಾಗಿ

---

## ಲೇಖಕರ ಸೂಚಿ


| | | ಪುಟ |
|---|---|---|
| ಅಶ್ವತ್ಥನಾರಾಯಣರಾವ್, ಬಿ.ಟಿ. | .... | ೩೪ |
| ಚಂದ್ರಶೇಖರಯ್ಯ, ಎಂ. .... | .... | ೨೧, ೫೮ |
| ನಂಜಪ್ಪ, ಆರ್. ಪಿ. .... | .... | ೫೪ |
| ಲಿಂಗಪ್ಪ, ಎನ್. .... | .... | ೯, ೪೧ |
| ವಿಮಲಾ, ಎಂ. ಆರ್. .... | .... | ೨೬ |
| ವೆಂಕಟನಾರಾಯಣರಾವ್, ಎ. | .... | ೬೮ |
| ಶ್ರೀನಿವಾಸಮೂರ್ತಿ, ಜಿ. ಎಸ್. | .... | ೧೬, ೪೯ |

# ಹರಕೆ

ಶ್ರೀಯುತ ರಾಜರತ್ನಂ ಅವರಲ್ಲಿ ಸಪ್ರೇಮ ವಂದನೆಗಳು.

ತಾವು ಅಭಿಮಾನವಿಟ್ಟು ಕೊಟ್ಟ "ಕಾಲೆಜ್ ಬರವಣಿಗೆ" ಯನ್ನು ಓದುತ್ತಿದ್ದಾಗ, ಹಿರಿಯ ಅಧಿಕಾರದಲ್ಲಿರುವ ಸಹೋದ್ಯೋಗಿಗಳೊಬ್ಬರು ಮನೆಗೆ ಬಂದರು. ಪುಸ್ತಕವನ್ನು ನೋಡಿ, ಎರಡು ಹಾಳೆ ತಿರುವಿಹಾಕಿ, "ಸೆಂಟ್ರಲ್ ಕಾಲೆಜ್ ವಿಜ್ಞಾನ ಕಲಿಸಲಿಕ್ಕೆ ಮಿಾಸಲು. ಅಲ್ಲಿನ ವಿದ್ಯಾರ್ಥಿಗಳು ಈ ರೀತಿ ಲಘು ಬರಹಗಳಲ್ಲಿ ಕಾಲಹರಣಮಾಡುವುದು ತಪ್ಪಲ್ಲವೆ?" ಎಂದರು.

ಅರೆಕ್ಷಣ ಸುಮ್ಮನಿದ್ದು ಮಾತನ್ನೇ ಬದಲಾಯಿಸುವಂತೆ ನಟಿಸಿ, 'ಅಂದ ಹಾಗೆ, ಗೆಳೆಯಾ! ನೀನು ಆಸ್ಪತ್ರೆಯ ಪುರೋಭಿವೃದ್ಧಿಗಾಗಿ ಒಂದು ಯೋಜನೆ ತಯಾರುಮಾಡಿದ್ದೇನೆ ಅಂದಿದ್ದೆ. ಅದನ್ನು ಸರ್ಕಾರದವರು ಅನುಮೋದಿಸಾಯಿತೇ?' ಎಂದು ಕೇಳಿದೆ.

ಗೆಳೆಯ ಹಸನ್ಮುಖಿಯಾದ. ಭಗವಂತ, ಬೆನ್ನಿಗೆ ಪುಕ್ಕ ಕೊಟ್ಟಿದ್ದರೆ, ನವಿಲುಗರಿಯಂತೆ ಅದನ್ನು ಕೆದರಿಹಾರಿಸುತ್ತಿದ್ದ ಆಗ, ಎನ್ನಿಸಿತು. ಗಮ್ಮತ್ತಿನ ಮೇಲೆ ಹೇಳಿದ: "ಆ ಯೋಜನೆಯನ್ನು ಬರೆದಾಗ, ಕಾರಣಗಳನ್ನು ಸುಲಭವಾಗಿ ತಿಳಿಸಿ, ಬರಬಹುದಾದ ಆಕ್ಷೇಪಣೆಗಳಿಗೆ ಸಮಂಜಸವಾದ ಉತ್ತರಗಳನ್ನೂ ವಿಶದೀಕರಿಸಿ, ಕೇವಲ ಮಕ್ಕಳಿಗೂ ಅರ್ಥವಾಗುವಂತೆ ಬರೆದಿದ್ದೆ. ಅದನ್ನು ಓದಿದ ಕೂಡಲೆ ಸರ್ಕಾರದವರು 'ಅಸ್ತು' ಎಂದರು" ಎಂದು ವಿಜಯೋನ್ಮತ್ತನಂತೆ ಹೇಳಿದ.

ನಸುನಗುತಾ ನಾನು ಕೇಳಿದೆ: "ಮಿತ್ರಾ! ನಿನ್ನ ಮನಸ್ಸಿನ ಯೋಜನೆಯನ್ನು ಸುಲಭವಾಗಿ ಅರ್ಥವಾಗುವ ಶೈಲಿಯಲ್ಲಿ, ಸಕಾರಣವಾಗಿ, ಸುಭಾಷೆಯಲ್ಲಿ ಬರೆಯುವುದನ್ನು, ಮೆಡಿಕಲ್ ಕಾಲೇಜಿನಲ್ಲಿ ಪಾಠ ಹೇಳಿದರೇ? ಅಥವಾ ಸೆಂಟ್ರಲ್ ಕಾಲೇಜಿನ ವಿಜ್ಞಾನ ತರಗತಿಗಳಲ್ಲಿ ಹೇಳಿಕೊಟ್ಟರೇ? ಯೋಜನೆಯ ವಿಚಾರದ ನಿನ್ನ ಸೊಬಗಿನ ಬರವಣಿಗೆಯಿಂದಲೇ ಸರ್ಕಾರವು ಒಪ್ಪಿತು ಎಂದು ನಾನೇನೋ ನಂಬುತ್ತೇನೆ. ಅಲ್ಲವೇ?" ಎಂದು. ಹಾಗೇ ಕಾಲೇಜ್ ಬರವಣಿಗೆಯನ್ನು ಅವನ ಮುಖಕ್ಕೆ ಎತ್ತಿಹಿಡಿದೆ. 'ಈಗ ಅರ್ಥವಾಯಿತು' ಎಂದು ತಲೆ ತಗ್ಗಿಸಿದ.

* * * *

ಈ ರೀತಿಯ ಬರವಣಿಗೆಗಳಿಂದ, ಯಾವುದಾದರೂ ವಿಷಯವನ್ನು ಸಾಕಷ್ಟು ವಿಚಾರಮಾಡಿ, ತಿಳಿಯುವ ಶೈಲಿಯಲ್ಲಿ, ಈಗಿನ ಕಾಲಕ್ಕೆ ಸರಿ ಹೊಂದುವ ಭಾಷೆಯಲ್ಲಿ ಬರೆಯುವುದನ್ನು ಅಭ್ಯಾಸ ಮಾಡಬಹುದು. ಚೆನ್ನಾಗಿ ತಿಳಿದ ವಿಷಯವನ್ನು ಸುಲಭವಾಗಿ ತಿಳಿಯುವಂತೆ ಹೇಳುವುದಾಗಲಿ, ಬರೆಯುವುದಾಗಲಿ, ಸ್ವಾಭಾವಿಕವಾಗಿ ಬರುವುದಿಲ್ಲ. ಅದಕ್ಕೆ ಅಭ್ಯಾಸವು ಬೇಕೇಬೇಕು. ಇಂತಹ ಅಭ್ಯಾಸವು, ವಿದ್ಯಾಭ್ಯಾಸದ ಮುಖ್ಯವಾದ ಅಂಶವೇ ಅಲ್ಲವೆ?

ಸ್ವಾತಂತ್ರ್ಯ ನಮಗೆ ಹೊಸದಾಗಿ ಬಂದಿದೆ. ಮನೆಯಲ್ಲಿ ಕುಮಾರ ಕಂಠೀರವ ಹುಟ್ಟಿದಂತೆ. ಅಂದರೆ ಮೊದಲ ಬೆಡಗು ಸಂತೋಷ ಮುಗಿಯುವ ತನಕ ಮನೆಯೆಲ್ಲಾ ಅಸ್ತವ್ಯಸ್ತ; ಹೊತ್ತಿಗೆ ಸರಿಯಾಗಿ ಕಾಫಿ ಕೂಡ ಸಿಗುವುದಿಲ್ಲ. ಹಾಗಾಗಿ ನಾಳೆಗೆ ಹೇಗೆ ಎಂಬ ಯೋಚನೆಯೇ ಮುಕ್ಕಾಲು ಪಾಲು ಯುವಕರ ಗಾಯತ್ರಿಯಾಗಿದೆ. ಜೀವನ ನಡಸಲು ಯಾವ ಕಸುಬನ್ನು ಹಿಡಿದರೂ ಕೂಡ ಅದರಲ್ಲಿ ಯಶಸ್ಸು, ಸಿದ್ಧಿ, ಸೌಖ್ಯ ಪಡೆಯಬೇಕಾದರೆ, ತನಗೆ ತಿಳಿದ ವಿಷಯವನ್ನು ತನ್ನಲ್ಲಿಗೆ ಬಂದವರಿಗೆ ಸುಲಭವಾಗಿ ತಿಳಿಯುವಂತೆ ಹೇಳುವುದು ಮುಖ್ಯವಾದುದು. ಹೀಗೆ ಮಾಡಲಾದರೆ, ಜನರಿಗೆ ಇಂತಹವನು ಅರಿತವನು, ಪ್ರಾಜ್ಞ, ಎಂಬ ನಂಬಿಕೆ ಬರುತ್ತದೆ. ಅಂತಹ ಸಮಾಜದ ನಂಬಿಕೆಯೇ ಜನಜೀವನದ ಊರೆಗೋಲಲ್ಲವೆ?

ಇಂತಹ ಮೂಲಭೂತವಾದ ಅಭ್ಯಾಸವನ್ನು ನಮ್ಮ ಚಿರಂಜೀವಿಗಳಿಗೆ ನೀವು ಮಾಡಿಸುತ್ತಿರುವುದು ಬಲು ಸಂತೋಷದ ಸಂಗತಿ, ಹೆಮ್ಮೆಯ ವಿಷಯ. ಈ ಸಂತೋಷ, ಈ ಹೆಮ್ಮೆ ನಿಮಗೂ ಇರುವುದರಿಂದಲೇ ನೀವು ಈ ಕೆಲಸವನ್ನು ಸ್ವಯಂಪ್ರೇರಿತರಾಗಿ, ಬೇರೆ ಪ್ರತಿಫಲಾಪೇಕ್ಷೆಯಿಲ್ಲದೆ ಶ್ರದ್ಧೆಯಿಂದ ಮಾಡುತ್ತಿದ್ದೀರಿ, ಎಂದು ನಾನು ತಿಳಿದಿದ್ದೇನೆ.

ಕಾಲೇಜಿನ ಬರವಣಿಗೆಯಲ್ಲಿ, ಎಲ್ಲಾ ಲೇಖಕ ಲೇಖಕಿಯರೂ ತಾವು ಆಯ್ಕೆ ಮಾಡಿದ ವಿಷಯಗಳನ್ನು ಸಾಕಷ್ಟು ಚೆನ್ನಾಗಿ ಪ್ರತಿಪಾದಿಸಿದ್ದಾರೆ. ಬೇಸರವಿಲ್ಲದೆ ಓದಬಹುದಾದ ಲೇಖನಗಳಿವೆ. ಆಸೆಯಿಂದ ಓದುವಂತಹ ಲೇಖನಗಳೂ ಇವೆ. "ಲೋಕೋ ಭಿನ್ನರುಚಿಃ!" ಅಂತೆಯೇ ನನ್ನ ಅಭಿರುಚಿಗೆ ಮೆಚ್ಚಿಬಂದುವು: ನನ್ನ ಪುಸ್ತಕ ಸಂಗ್ರಹಣ, ಕಾಂಪೌಂಡ್ ಗೋಡೆ, ಮತ್ತು ತರಗತಿಯ ಕಿಟಕಿಯಿಂದಾಚೆ.

ಚಿ| ಚಿದಂಬರ ಮೂರ್ತಿಯವರ ವಿಮರ್ಶಕ ಲೇಖನವು ದೀರ್ಘಾಲೋಚನೆಯ ಕುರುಹನ್ನು ಪಡೆದು ಚೆನ್ನಾಗಿದೆ.

ಈ ಲೇಖಕ ಲೇಖಕಿಯರು, ಮುಂದೆ ಕನ್ನಡಸಾಹಿತ್ಯದಲ್ಲಿ ಇದೇ ರೀತಿ ಅಭಿರುಚಿ ಇಟ್ಟುಕೊಂಡು, ಸಾಹಿತಿಗಳಾಗುತ್ತಾರೋ ಇಲ್ಲವೋ ದೇವರೇ ಬಲ್ಲ. ಆದರೆ ಯಾವ ಜೀವನಮಾರ್ಗ ಅನುಸರಿಸಿದರೂ ಅದರಲ್ಲಿ ಯಶಸ್ಸು, ಸಿದ್ಧಿಗಳನ್ನು, ಅಭ್ಯಾಸಮಾಡಿದರೆ ಗಳಿಸುತ್ತಾರೆಂದು ನನ್ನ ದೃಢವಾದ ನಂಬಿಕೆ.

ವಯಸ್ಸಾಗುತ್ತ ಚಪಲವೂ ಹೆಚ್ಚುತ್ತೆ ಎಂದು ಹಿರಿಯರು ಹೇಳಿದ್ದನ್ನು ಕೇಳಿದ್ದೆ. ಈಗ ನನಗೆ ವಯಸ್ಸಾಗುತ್ತಾ ಬಂದಂತೆಲ್ಲಾ ಚಪಲವೂ ಹೆಚ್ಚಾಗುತ್ತಿರುವುದನ್ನು ಸಾಕ್ಷಾತ್ತಾಗಿ ಅನುಭವಿಸುತ್ತಿದ್ದೇನೆ. ಒಂದು ಅಂತಹ ಚಪಲ ಏನೆಂದರೆ: ವೈಜ್ಞಾನಿಕ ವಿಷಯಗಳನ್ನು ಈ ರೀತಿಯ ಬರವಣಿಗೆಗೆ ಆಯ್ಕೆ ಮಾಡಿಕೊಳ್ಳುವುದು; ಅಂತಹ ವಿಷಯಗಳನ್ನು ರಂಗಿನ ಭಾಷೆಯಲ್ಲಿ ಡಂಗು ಬಡಿಸುವ ಉಪಮಾನಗಳಿಂದ ಬರೆಯುವುದು.

ಉದಾಹರಣೆಗೆ: ಪ್ರಾಣಿಶಾಸ್ತ್ರದ ವಿದ್ಯಾರ್ಥಿಗಳು "ಅಮೀಬಾ" ವಿಷಯ ಬರೆಯಬೇಕಾದರೆ, "ಇದೊಂದು ಸ್ವತಂತ್ರ, ಸಾವನ್ನರಿಯದ ಜೀವಿ. ಜೀವವು ಚಿರಂಜೀವಿ ಎಂದು ಉಪದೇಶಿಸುವ ಮೊದಲ ಜೀವ."

"ಮೆಂಡಲೀಫನು ಎಲಿಮೆಂಟುಗಳ ಜಾತಕವನ್ನು ಬರೆದ. ಅವನು ಹೇಳಿದ ಭವಿಷ್ಯವು ಇಂದಿಗೂ ಸಾರ್ಥಕವಾಗುತ್ತಿದೆ."

"ಚರಿತ್ರೆಯು ಮರಕಳಿಸುತ್ತದೆ, ಮಲೇರಿಯಾದಂತೆ. ಇಂದಿನ ಆಟಂನಲ್ಲಿ ನಡೆವ ಸೋಜಿಗವೆ ಹಿರಿಯದಾಗಿ ಮರಕಳಿಸಿದರೆ ಸೂರ್ಯಮಂಡಲ ಎಂದೆನ್ನಬಹುದು."

"ಜೇಡರ ಹುಳುಗಳಲ್ಲಿ ನೋಡಿ, ಪ್ರೇಮದ ಪರಮಾವಧಿ ಕಾಣಬರುತ್ತದೆ. ಪ್ರೇಯಸಿಯು ತನ್ನ ಮೆಚ್ಚಿದವನನ್ನು ತನ್ನ ದೇಹದಲ್ಲಿ ದೇಹವಾಗುವಂತೆ ತಿಂದು ಜೀರ್ಣಿಸಿಕೊಳ್ಳುತ್ತಾಳೆ."

ಇತ್ಯಾದಿ ಇತ್ಯಾದಿ.

ಎಂದಾದರೂ ಒಂದು ದಿನ, ನಿಮ್ಮ ಸತತ ಪ್ರಯತ್ನಗಳಿಂದ ಇಂತಹ ವೈಜ್ಞಾನಿಕ ವಿಷಯಗಳ ಮೇಲಿನ, ಸ್ವಚ್ಛಂದ ಬರವಣಿಗೆಗಳ ಸಂಕಲನವೊಂದು ಹೊರಬೀಳಲೆಂದು ನನ್ನ ಚಪಲ.

ಈ ಚಪಲ ತೀರಿಸಿಕೊಳ್ಳಲು, ನನ್ನಿಂದ ಯಾವ ಸಹಾಯಬೇಕಾದರೂ ಅದನ್ನು ನೀವು ಆಜ್ಞೆಮಾಡಿ ಪಡೆಯಬಹುದು. ಅದು ಸ್ವಾರ್ಥ. ಹಾಗೂ ಪರಮಾರ್ಥ. ಈ ವಿಜ್ಞಾನಿಯ, ದಿವ್ಯಜ್ಞಾನಿಯ ಸಮರಸತ್ವವನ್ನು ಅರಸುವುದೇ ನನ್ನ ಹಾಗೂ ಎಲ್ಲರ ಧ್ಯೇಯವೆಂದೇ ನಂಬಿದ್ದೇನೆ.

ಸರ್ವಶಕ್ತಿ ಸ್ವರೂಪಿಯಾದವನು ನಿಮ್ಮ ಕಾರ್ಯದಲ್ಲಿ ಬೆಂಬಲವೀಯಲಿ, ಎಂಬುದೇ ನನ್ನ ಪ್ರಾರ್ಥನೆ ಆತನಲ್ಲಿ,

10-2-54<br>ಮಲ್ಲೇಶ್ವರಂ

ಇತಿ, ತಮ್ಮವನೇ ಆದ<br>**ಎಂ. ಶಿವರಾಂ**

# ಕನ್ನಡಿಯ ಮುಂದೆ

'ಹೋಟಲು' ಎಂದ ಕ್ಷಣ 'ದೋಸೆ' ಎಂದು ಜ್ಞಾಪಕ ಬರುವಂತೆ, 'ಚಂದ್ರ' ಎಂದೊಡನೆ 'ಪ್ರೇಮಿ' ಎಂದು ಜ್ಞಾಪಕ ಬರುವಂತೆ, 'ಕನ್ನಡಿಯ ಮುಂದೆ' ಎಂದರೆ ಸಾಕು—'ಕುಂಕುಮ' ಎಂದು ಜ್ಞಾಪಕವಾಗುತ್ತದೆ: ಕಿಟಕಿಯೊಂದರ ಒಳಗೋಡೆಗೆ ನೇತುಹಾಕಿದ ಕನ್ನಡಿ; ಬೆಳ್ಳಗೆ ಬೆಳಕು ಹೊಡೆಯುತ್ತಿರುವ ಕಿಟಕಿಯಲ್ಲಿ ಕನ್ನಡಿಯ ಎದುರಿಗೆ ತರುಣಿಯೊಬ್ಬಳು ತನ್ನ ಅಲೆ ಅಲೆಯಾದ ಕೇಶರಾಶಿಯನ್ನು ಎರಡುಕಡೆ ಹರವಿ ಬಾಹುಲತೆಯ ಕುಡಿಯೊಂದರಿಂದ ಕುಂಕುಮ ಹಚ್ಚಿಕೊಳ್ಳುತ್ತಿರುವ ದೃಶ್ಯ; ಪಕ್ಕದಲ್ಲಿ ಕಿರುಬೆರಳು ಕೊಂಚ ಮೇಲೆದ್ದು, ಹಚ್ಚಿದ ತಿಲಕ ಸರಿಯಾಗಿದೆಯೋ ಇಲ್ಲವೋ ಎಂದು ಪರೀಕ್ಷಿಸುತ್ತಿರುವ ನೋಟ; ಮೇಜಿನ ಮೇಲೆ ಸ್ನೋ ಡಬ್ಬಿಗಳು ಹತ್ತೋ ಹದಿನೈದೋ; ಹೇರ್ ಆಯಿಲ್ ಮುಗಿದುಹೋದ ಸೀಸೆಗಳು ಒಂದಿಪ್ಪತ್ತು; ಬಾಚಣಿಗೆ, ಹೇರ್ ಡ್ರೆಸ್ಸರ್ಸ್ ಇತ್ಯಾದಿ.

ಹೌದು, ಸ್ತ್ರೀಯರೇನೋ ಸೌಂದರ್ಯೋಪಾಸಕರೇ. ಕನ್ನಡಿಯ ಮುಂದೆ ಕುಳಿತುಬಿಟ್ಟರೆ ಆಯಿತು. ಹತ್ತಾರು ವಿಧಗಳಲ್ಲಿ ತಿರುಗಿ ತಿರುಗಿ ತಿದ್ದಿಕೊಂಡರೂ ಅವರಿಗೆ ತೃಪ್ತಿಯಾಗುವುದಿಲ್ಲ. ಪಕ್ಕದಲ್ಲೆ ಭೂಮಿ ಕಂಪವಾದರೂ ಇಲ್ಲ. ಒಂದೊಂದು ವೇಳೆ ಅದೇ ಜೀವಕ್ಕಿಂತ ಶ್ರೇಷ್ಠವಸ್ತು. 'ಮದಾಂ ಬಾವರಿ' ಯಲ್ಲಿನ ಕಥಾನಾಯಕಿ 'ಎಮ್ಮಾ' ತಾನು ಮೃತ್ಯುಶಯ್ಯೆಯಲ್ಲಿರುವಾಗ ಕೂಡ ಚಾರಲ್ಸನ್ನು ಕನ್ನಡಿಕೊಡೆಂದು ಕೇಳುತ್ತಾಳೆ; ದಿಂಬಿನ ಮೇಲೆ ಕನ್ನಡಿಯಿಟ್ಟು, ತನ್ನ ಮುಖ ನೋಡಿಕೊಂಡು ಪ್ರಾಣಬಿಡುತ್ತಾಳೆ.

ನಮ್ಮ ಸಾಧಾರಣ ಅಭಿಪ್ರಾಯ: ಹೆಂಗಸು ಕನ್ನಡಿಯ ಮುಂದೆ ತುಂಬ ಕಾಲವ್ಯಯ ಮಾಡುತ್ತಾಳೆಂದು. ಆದರೆ ನಾನು ಕಂಡಂತೆ, ಇನ್ನೂ ಕೆಲವರು ಕಂಡಿರುವಂತೆ, ಕನ್ನಡಿಯ ಮುಂದೆ ಗಂಡಸು ವ್ಯಯಮಾಡುವಷ್ಟು ಹೊತ್ತನ್ನು ಹೆಂಗಸು ಕೂಡ ವ್ಯಯಮಾಡುವುದಿಲ್ಲ. ಹೆಂಗಸು ಮನೆಯಲ್ಲಿ ಒಂದು ಘಂಟೆ ಕಾಲ ಅಲಂಕಾರಕ್ಕಾಗಿ ಕನ್ನಡಿಯ ಮುಂದೆ ನಿಂತರೆ, ಗಂಡಸು ಒಂದೇ ಸಮನೆ ಹಾಗೆ ನಿಲ್ಲದಿದ್ದರೂ, ದಿನದಲ್ಲಿ ಕನ್ನಡಿಯ ಮುಂದೆ ಅವನು ನಿಲ್ಲುವ ಕಾಲದ

ಒಟ್ಟು ಹೊತ್ತು ಸುಮಾರು ಎರಡು ಮೂರು ಘಂಟೆಗಳಾಗುತ್ತವೆ. ಕಾಲೇಜು ವಿದ್ಯಾರ್ಥಿಗಳಂತೂ—ಅವರೂ ಗಂಡಸರಲ್ಲವೆ!

ಊಟ ಗೀಟ ಮುಗಿಸಿ ಕಾಲೇಜಿಗೆ ಹೊರಡುವಾಗ ಕನ್ನಡಿಯ ಮುಂದೆ ನಿಂತು ಚಿಗುರು ಮೀಸೆಯನ್ನೂ ಅದು ಹಬ್ಬಿರುವ ರೀತಿಯನ್ನೂ ಕಂಡು ಮೆಲ್ಲಗೆ ಅದರ ಮೇಲೆ ಬೆರಳು ಆಡಿಸುವುದರಿಂದ ನಮ್ಮ ಮುಖಕ್ಕೂ ಕನ್ನಡಿಗಳಿಗೂ ಮಧುರಬಾಂಧವ್ಯ ವೊದಲಾಗುತ್ತದೆ. ನಮ್ಮ ರೂಪು 'ವಿಕಾರ ಮನ್ಮಥ'ರನ್ನು ಅಣಕಿಸುವಂತಿದ್ದರೂ (ನಮ್ಮಂಥವರೇ ಹೆಚ್ಚಾಗಿ ಕನ್ನಡಿಯ ಮುಂದೆ ನಿಲ್ಲುವ ಅಭ್ಯಾಸವಿಟ್ಟಿರುವುದು) ಸಾಮಾನ್ಯವಾಗಿ ಒಂದು ಭಂಗಿಯಲ್ಲಿ ನಿಂತರೇನೇ ನಮ್ಮ ಕುರೂಪ ಕಾಣುವುದೇನೋ ಎಂಬ ಶಂಕೆಯಿಂದ ಮುಖ ಮೈಗಳನ್ನು ಹಲವಾರು ಭಂಗಿ ಭಾವಗಳಲ್ಲಿ ತಿರುಗಿಸಿ ತಿರುಗಿಸಿ, ಎತ್ತ ಕಡೆಯಾದರೂ ಚೆಲುವಿನ ಶತಾಂಶವೊಂದಾದರೂ ಇರಬಹುದೇನೋ ಎಂದು ಆಸೆಯಿಂದ ನೋಡುತ್ತೇವೆ. ಕೆಲವರು ಹಲ್ಲುಕಿರಿದು, ನಕ್ಕಾಗ ತಾವು ಹೇಗೆ ಕಾಣುತ್ತೇವೋ ಎಂದೂ ನೋಡುತ್ತಾರೆ. ನನ್ನ ವಿಷಯದಲ್ಲಿ ನಾಚಿಕೆ ಬಿಟ್ಟು ಹೇಳಿಕೊಳ್ಳುವುದಾದರೆ, ನಿಟ್ಟುಸಿರೊಂದನ್ನು ದೀರ್ಘವಾಗಿ ಬಿಟ್ಟು, ಆ ಕನ್ನಡಿಯನ್ನು ಹಾಗೆಯೇ ಮೇಜಿನ ಮೇಲೆ ಹಾಕಿ ಕ್ಲಾಸಿಗೆ ಬರುತ್ತೇನೆ . . .

ಕಾಲೇಜಿನ ಶೌಚಕೂಪದಲ್ಲಿರುವ ಕನ್ನಡಿಯ ಹತ್ತಿರ ಹೋಗಿ ನೋಡಿ: ವೇಳೆಯಾಯಿತೆಂದು ಸೂಚಿಸುವ ಬೆಲ್ಲು ಹೊಡೆದರೂ ಅದರ ಮುಂದೆ ಆತ್ಮಾವಲೋಕನಕ್ಕಾಗಿ ಹಾತೊರೆಯುತ್ತ ಹತ್ತಾರು ಹುಡುಗರು 'ಕ್ಯೂ' ನಿಂತಿರುತ್ತಾರೆ. ಒಬ್ಬೊಬ್ಬನಿಗೂ ಎಷ್ಟು ಹೊತ್ತು ಕನ್ನಡಿಯ ಮುಂದೆ ನಿಂತರೂ ತೃಪ್ತಿ ಇಲ್ಲ. ಎಷ್ಟು ಸಾರಿ ಕ್ರಾಪು ತೀಡಿ ಮುಖ ನೋಡಿಕೊಂಡರೂ ತೃಪ್ತಿ ಇಲ್ಲ. ಕರ್ಚೀಫಿನ ತುದಿಯೊಂದನ್ನು ತೆಗೆದು, ಜೇಬಿನಿಂದ ಹೊರಗೆ ನೇತಾಡುವಂತೆ ಇಟ್ಟುಕೊಳ್ಳುತ್ತಾನೆ. ಹಲವಾರು ಕಡೆ ಬೈತಲೆ ತೆಗೆದು, ಯಾವ ರೀತಿಯದು ತನಗೆ ಸೌಂದರ್ಯವೀಯುತ್ತದೆಯೋ ಎಂದು ನೋಡುತ್ತಾನೆ. ಕಾಲರ್ ಸರಿ ಮಾಡಿಕೊಳ್ಳುತ್ತಾನೆ. ಗುಂಡಿ ಸರಿಯಾಗಿದ್ದರೂ ಅದರ ಮೇಲೆ ಕೈ ಆಡಿಸುತ್ತಾನೆ. ಹೋಗುವ ಮುನ್ನ ಒಂದು ಸಾರಿ ಬಗ್ಗಿ, ಆ ಭಂಗಿಯನ್ನಿನ್ನೊಮ್ಮೆ ನೋಡಿಕೊಂಡು, ಪಕ್ಕದಲ್ಲಿರುವವನ ಕಡೆ ಅವನ ಬೇಸರದ ಮುಖದೆಡೆಗೆ ತನ್ನ ತುಟಿ ಎಳೆದು ಹಿಗ್ಗಲಿಸಿ ಆಚೆಗೆ ಹೊರಡುತ್ತಾನೆ. ನನ್ನ ಸ್ನೇಹಿತ ಒಬ್ಬ,

ನಿದಾನಬಣ್ಣದ ರೊಮಿಯೋ ತನ್ನ ಒಣಗಿದ ಮುಖವನ್ನು ಕನ್ನಡಿಯ ಮುಂದೆ ಕರ್ಚೀಫಿನಲ್ಲಿ ತಿಕ್ಕಿ ತಿಕ್ಕಿ ಕೆಂಪಗೆ ಮಾಡಿಕೊಂಡು ಹೊರಗೆ ಬಂದು ಸ್ನೇಹಿತ ಸ್ನೇಹಿತೆಯರ ಮುಂದೆ ಹಲ್ಲುಕಿರಿಯುತ್ತಾನೆ . . .

ಹೋಟಲಿಗೆ ಹೋದರೆ ಕನ್ನಡಿಯ ಮುಂದೆ ಕುಳಿತು ಕಾಫಿಯ ರುಚಿ ನೋಡುತ್ತೇವೆ. ಮನೆಗೆ ಬಂದರೆ ಟೆನ್ನಿಸ್ ರ್‍ಯಾಕೆಟ್ ಹಿಡಿದು ಆಚೆ ಹೊರಡುವ ಮುಂಚೆ ಒಂದು ಸಾರಿ ಕನ್ನಡಿಯ ಮುಂದೆ . . . ಹೀಗೇ ಒಟ್ಟು ಲೆಕ್ಕಹಾಕಿದರೆ ಹೆಂಗಸರು ನಿಂತುಕೊಳ್ಳುವ ವೇಳೆಗಿಂತ ಹೆಚ್ಚಾಗಿಯೇ ಆಗುತ್ತದೆ.

'ಕನ್ನಡಿಯ ಮುಂದೆ' ಎಂಬ ಜಾಗ ಇಂಥವರಿಗೇ ಎಂದು ಮೀಸಲಲ್ಲ. ('ಹಿಂದಿನ' ಜಾಗ ಮಾತ್ರ ಸಿನಿಮಾ ನಟಿಯರಿಗೇ ಮೀಸಲು. ಅವು ಇಲ್ಲದಿದ್ದರೆ ಹಾಳು ಕನ್ನಡಿಗಳಿಗೆ ಗಿರಾಕಿಗಳೇ ಇಲ್ಲ. ನಗರದ ಭವ್ಯಕಟ್ಟಡಗಳ ಗೋಡೆಯ ಮೇಲೆ, ಕಕ್ಕಸುಗೋಡೆಗಳ ಮೇಲೂ, ರಸ್ತೆಯ ಎಲ್ಲೆಲ್ಲೂ ಸ್ಥಾನವನ್ನು ಆಕ್ರಮಿಸಿದ ಇವರಿಗೆ ಕನ್ನಡಿಯ ಹಿಂದೂ 'ಸೀಟು' ಕೊಡದಿರುವುದು ನ್ಯಾಯವೇ ಅಲ್ಲ. ಇರಲಿ.) ಅದು ಎಲ್ಲ ವರ್ಗಕ್ಕೂ ಎಲ್ಲಾ ಕಾಲಗಳಲ್ಲಿಯೂ ಎಲ್ಲ ಕಸಬಿನವರಿಗೂ ಸ್ವತಃಸಿದ್ಧವಾದ ಹಕ್ಕು. ಯಾವ ಕಾನೂನು ಕಾಯಿದೆಗಳಾಗಲಿ ಈ ನಿಯಮಕ್ಕೆ ಅಡ್ಡಿ ತರಲಾರವು. ಯಾವ ಸಮಯದಲ್ಲಿ ಬೇಕಾದರೂ ನಾವು ಅದರ ಮುಂದೆ ನಿಲ್ಲಬಹುದು. ವರ್ತಕರಾದರೆ ಸಾಧಾರಣವಾಗಿ ತಮ್ಮ ನಾಮವನ್ನು ಸರಿಯಾಗಿ ಇಟ್ಟುಕೊಳ್ಳಲು ಮಾತ್ರ ಕನ್ನಡಿಯ ಮುಂದೆ ನಿಲ್ಲುವ ಅವಶ್ಯಕತೆಯಿರುತ್ತದೆ. ಇನ್ನೇತಕ್ಕೂ ಅದು ಅವರಿಗೆ ಬೇಕಾಗಿರುವುದಿಲ್ಲ. ಅವರ ಕಾಲ, ಜೀವನ, ಯೋಚನೆ, ಸಮಸ್ಯೆಗಳೆಲ್ಲಾ ಗಲ್ಲಪೆಟ್ಟಿಗೆಯ ಮುಂದೆ ಹೊಟ್ಟೆಯನ್ನು ಹರಡಿ ಕುಳಿತುಕೊಳ್ಳುವುದರಲ್ಲಿಯೇ ಕಳೆದುಹೋಗುತ್ತದೆ. ಮಂಡಿಯ ಎಣ್ಣೆ, ಬೇಳೆ, ತೊಗರಿ, ಕಡಲೆಗಳ ಮಧ್ಯೆ 'ವರುಣ' ದೇವರೋಪಾದಿಯಲ್ಲಿ ವಿಜೃಂಭಿಸುವ ಅವರ ಯೋಚನೆಗಳು ಗಲ್ಲದ ಅಭಿವೃದ್ಧಿ, ಅದರ ಸಂತಾನಗಳ ವಿಷಯದಲ್ಲಿ ಹರಿಯುವಷ್ಟು ಕನ್ನಡಿಯ ಮೇಲೆ ಹರಿಯುವುದಿಲ್ಲ. ಪೈಲ್ವಾನ್ ಕುಂಟನಕೆರೆ ಗರಡಿಯ ತಿಮ್ಮನಿಗಾದರೆ ಕನ್ನಡಿಯ ಮುಂದೆ ನಿಂತು ತನ್ನ ತೋಳಿನ ಮಾಂಸವನ್ನು ಬಿಗಿಮಾಡಿ, ಸಡಿಲಮಾಡಿ, ನೋಡುವುದೇ ಕೆಲಸ. ಆಗ ಪಕ್ಕದಲ್ಲಿರುವ ಜನಗಳನ್ನು ಕೇಳುವುದೊಂದೇ ಪ್ರಶ್ನೆ: 'ಎನ್ರೀ? ಎಂಗಿದೀನಿ!' ಎಂದು.

ಆಫೀಸು (ಕೆಲವು ಆಫೀಸು) ಹೆಡ್‌ಗುಮಾಸ್ತೆಗಳು ಕೆಲವರು ಕನ್ನಡಿಯ ಮುಂದೆ ನಿಂತು, ತಾವು ಬೆಳಗ್ಗೆ ಮಾಡಿಸಿದ 'ಫ್ರೆಂಚ್‌ಕಟ್' ಮೀಸೆಯ ವೈಖರಿಯನ್ನು ಕಂಡು ಆನಂದಿಸುತ್ತ, ಈ ದಿನ ಬೇಕಾದಷ್ಟು ಗಿರಾಕಿಗಳನ್ನು ತಮ್ಮ ಕಡೆಗೆ ಎಳೆಯಬಹುದೆಂಬ ಆಶಾಭಾವನೆಯಲ್ಲಿ ಮಗ್ನರಾಗಿರುತ್ತಾರೆ.

ಉಪಾಧ್ಯಾಯರ ವಿಷಯ ಮರೆತೆ. ಎಲ್ಲ ವರ್ಗದವರಿಗೂ ಕಸಬಿನವರಿಗೂ ಕನ್ನಡಿಯ ಮುಂದೆ ಜಾಗವುಂಟು ಎಂದ ಮೇಲೆ ಇವರಿಗೂ ಇದ್ದೇ ಇರಬೇಕು. (ಕಂಡದ್ದನ್ನು ಹೇಳಿದರೆ—ಅವರು ಕೋಪಮಾಡಿಕೊಳ್ಳುವುದಿಲ್ಲವೆಂದು ನಂಬಿದ್ದೇನೆ.) ಇವರೂ ಕನ್ನಡಿಯ ಮುಂದೆ ವಿದ್ಯಾರ್ಥಿಗಳಂತೆ ಹೆಚ್ಚು ಹೊತ್ತು ಕಳೆಯದಿದ್ದರೂ ಸ್ವಲ್ಪ ಹೊತ್ತಾದರೂ ಕಳೆಯುತ್ತಾರೆ. ಪ್ರತಿ ಪೀರಿಯಡ್ಡೂ ಕ್ಲಾಸಿಗೆ ಬರುವ ಮುಂಚೆ ಠೀವಿಯಿಂದ ಕನ್ನಡಿಯ ಮುಂದೆ ಒಂದು ಸಾರಿ ನಿಂತು, 'ಸಿಂಕ್'ನಲ್ಲಿ ಕೈತೊಳೆದು, ಹೋದ ಪೀರಿಯಡ್ ಮುಖದ ಮೇಲೆ ಅರಿವಿಲ್ಲದೆ ಹೊತ್ತುಕೊಂಡಿದ್ದ ಚಾಕ್‌ಪೀಸಿನ ಕರೆಯೊಂದನ್ನು ಕಂಡು ಚಕಿತರಾಗಿ ಅದನ್ನು ತತ್‌ಕ್ಷಣ ಅಳಿಸುತ್ತಾರೆ. ತಮ್ಮ ಕಾಲರ್ ಸ್ವಲ್ಪ ಸರಿಮಾಡಿ, 'ಟೈ'ನ ಮೇಲುಭಾಗವನ್ನು ಉಬ್ಬಿದಂತೆ ಕಟ್ಟಿ, ಯಾವ ಭಂಗಿಯಲ್ಲಿ ನಿಂತರೆ ಹುಡುಗರನ್ನು ಆಕರ್ಷಿಸಬಹುದೋ (ಅಥವಾ ಹುಡುಗರನ್ನು ಹೆದರಿಸಿ ತಮ್ಮ ದಿಗಿಲಿನಲ್ಲಿಟ್ಟುಕೊಳ್ಳಬಹುದೋ) ಅಂತಹ ಭಂಗಿಯಲ್ಲಿ ಮುಖ ತಿರುವಿಕೊಂಡು, ಕೈಹಿಡಿಯನ್ನು ಬಾಯಮೇಲಿಟ್ಟುಕೊಂಡು, ಕೆಮ್ಮು ಬರದಿದ್ದರೂ ಎರಡು ಸಾರೆ ಕೆಮ್ಮಿ ಕ್ಲಾಸಿನ ಕಡೆಗೆ ಗಂಭೀರವಾಗಿ ದಯಮಾಡಿಸುತ್ತಾರೆ.

ನನಗೇನೋ ಕನ್ನಡಿಯ ಮುಂದೆ ನಿಲ್ಲುವುದು ತುಂಬ ಪ್ರೀತಿಯ ಕೆಲಸ. ದೇವರ ಮೇಲೆ ಹೂವು ತಪ್ಪಿದರೂ ನಾನು ಕನ್ನಡಿಯ ಮುಂದೆ ನಿಲ್ಲುವುದು ತಪ್ಪುವುದಿಲ್ಲ. ನನ್ನ ಅಣ್ಣ ಏನು ಮಾಡಿದ ಒಂದು ಸಾರಿ ಎಂದರೆ, ತನ್ನ ರೂಮಿನ ಕನ್ನಡಿ ಒಡೆದು, ನನ್ನ ರೂಮಿನ ಬೆಲ್ಜಿಯಂ ಗ್ಲಾಸಿನ ಕನ್ನಡಿಯನ್ನು ಅಪಹರಿಸಿ, ತನ್ನ ರೂಮಿನಲ್ಲಿ ಹಾಕಿಕೊಂಡು, ತಾನೇ ತಂದದ್ದೆಂದು ದಬಾಯಿಸಿದ. ಸ್ವಲ್ಪ ದಿವಸ ಸುಮ್ಮನಿದ್ದೆ. ಆದರೆ ಸ್ವಭಾವತಃ ಸ್ವಸೌಂದರ್ಯಾರಾಧಕನಾದ ನನಗೆ ಆರಾಧನೆಯ ಅವಕಾಶ ತಪ್ಪಿ ಕೆಲವು ದಿನ ಬಹಳ ಕಸಿವಿಸಿಯಾಯಿತು. ಅವನು ಆಫೀಸಿನಿಂದ ಮನೆಗೆ ಬಂದಾಗ ರೇಗಿಬಿದ್ದೆ. ಹೇಗೋ ನನ್ನನ್ನು ಶಾಂತಮಾಡಿ, ಮಾರನೆಯ ದಿನ ಹತ್ತು ಆಣೆಗಳಿಗೆ ಸುಲಭದಲ್ಲಿ ಸಿಕ್ಕಿದ ದೊಡ್ಡ ಅಷ್ಟಾವಕ್ರದ

ಕನ್ನಡಿಯೊಂದನ್ನು ತಂದು, ನಾನಿಲ್ಲದ ವೇಳೆ ನೇತುಹಾಕಿ ಹೊರಟುಹೋದ. ಅವನು ನನಗಿಂತ ಚಂಡಿ; ಎಷ್ಟಾದರೂ ಅಣ್ಣ! ಆದ್ದರಿಂದ ಪಾಲಿಗೆ ಬಂದದ್ದು ಪರಮಾನ್ನವೆಂದು ಸುಮ್ಮನಾದೆ. ಎಂತಹ ಸಪ್ತಲೋಕ ಸುರಸುಂದರಿಯ ರಾದರೂ, ಅದರ ಮುಂದೆ ಒಂದು ಕ್ಷಣ ನಿಂತರೆ ಸಾಕು—ತಮ್ಮ ಸೌಂದರ್ಯದ ವಿಷಯದಲ್ಲಿ ಅವರಿಗಿರುವ ಹೆಮ್ಮೆಯನ್ನು ಹೋಗಲಾಡಿಸಿ ಹೇಯಭಾವನೆ ಯುಂಟುಮಾಡುವಂಥದು. ಉದ್ದಕ್ಕಿರುವ ಮೂಗು ವಿಕಾರವಾಗಿ ತಿರುಗಿ, ಮುಖದ ಮೂಳೆಗಳೆಲ್ಲ ಒಂದೊಂದೂ ಒಂದೊಂದು ಕಡೆಗೆ ಹಿಗ್ಗಿ, ಉದ್ದವಾದ ತಲೆ ಕುಬ್ಜವಾಗಿ ಪೆಡಂಭೂತವೊಂದು ಕಾಣಿಸುತ್ತದೆ. ಅಷ್ಟೇ ಅಲ್ಲ. ಸ್ವಲ್ಪ ಪಕ್ಕಕ್ಕೆ ತಿರುಗಿದರೆ ಇನ್ನೊಂದು ಅದಕ್ಕಿಂತ ವಿಕಾರವಾದ ರೂಪ ಕಾಣಿ ಸುತ್ತದೆ. ಹೀಗೇ ನೂರಾರು ವಕ್ರಾಕೃತಿಗಳನ್ನು ಅದರಲ್ಲಿ ಕಂಡು ಮನತಣಿಯ ಬಹುದು. ನನ್ನ ತಮ್ಮ ರಾಮುವನ್ನು ಅವನು ಹೆಚ್ಚು ಗಲಾಟೆಮಾಡಿದಾಗ ಅದರ ಮುಂದೆ ತಂದು ಎತ್ತಿಕೊಳ್ಳುತ್ತೇನೆ; 'ಗೊಗ್ಗಯ್ಯ ನೋಡು, ನಿನ್ನನ್ನು ತಿಂದುಬಿಡಲು ಬಂದಿದ್ದಾನೆ' ಎಂದು ಬೆದರಿಸಿ ಅವನನ್ನು ತೆಪ್ಪಗೆ ಮಾಡಿ ಮಲಗಿಸುತ್ತೇನೆ.

ನಾನು ಸುರೂಪಿಯಲ್ಲದಿದ್ದರೂ ನನಗೆ ಹಲವರು ಸುಂದರ ಸ್ನೇಹಿತ ರಿದ್ದಾರೆ. ಅವರ ಮಧ್ಯೆ ಕರಿಯ ಗ್ರಹದಂತೆ ಕಂಗೊಳಿಸುತ್ತಿದ್ದ ನನ್ನನ್ನು ಕಂಡು ನಾನೇ ಜುಗುಪ್ಸೆಪಟ್ಟುಕೊಳ್ಳುತ್ತಿದ್ದೆ. ಈಗ ಅದೆಲ್ಲವನ್ನೂ ಮರೆತು ಬಿಟ್ಟಿದ್ದೇನೆ. ಪ್ರಕೃತಿ ನನ್ನ ಮೇಲೆ ನಡಸಿದ ಅನ್ಯಾಯವನ್ನು ಕುರಿತು ಮೊದಲಿನಂತೆ ವ್ಯಸನಪಡುವುದನ್ನು ಬಿಟ್ಟುಬಿಟ್ಟಿದ್ದೇನೆ. ಇದಕ್ಕೆಲ್ಲಾ ನನ್ನ ಅಣ್ಣ ತಂದ ಆ ಕನ್ನಡಿಯೇ ಕಾರಣ. ನನ್ನ ಸುಂದರ ಸ್ನೇಹಿತರನ್ನು ಕರೆದು, ಅವರ ಮಧ್ಯೆ ನಾನೂ ನಿಂತು ಆ ಕನ್ನಡಿಯಲ್ಲಿ ನೋಡಿಕೊಂಡು, 'ನೋಡ್ರೋ! ಈಗ ನಾನೂ ನೀವೂ ಎಲ್ಲ ಒಂದೇ!' ಎಂದು ಹೇಳುತ್ತೇನೆ.

ನನಗೆ ಒಂದು ಸಲ ಗಡ್ಡ ಬಿಡಬೇಕೆಂಬ ಖಯಾಲಿ ಉಂಟಾಯಿತು. ಬಿಟ್ಟೆ, ಜೋರಾಗಿ ಬೆಳೆಯಿತು. ನನ್ನ ಅಜ್ಜಿ ತಾತ ಎಲ್ಲರೂ ಇದನ್ನು ನೋಡಿ ನನಗೆ ಛೀಮಾರಿ ಹಾಕಿದರು. ನಾನು ಅಷ್ಟಾಗಿ ಅದಕ್ಕೆ ಗಮನಕೊಡಲಿಲ್ಲ. ಸ್ವಲ್ಪ ದಿನದ ವೇಳೆಗೆ ಕ್ಲಾಸಿನ ಜೊತೆಯ ಹುಡುಗರು ಗೇಲಿಮಾಡಲಿಕ್ಕಾರಂಭಿ ಸಿದರು. ಕೆಲವರು 'ಭಕ್ತ ರಾಮದಾಸ್' ಎಂದು ಅಡ್ಡಹೆಸರಿಟ್ಟರು. ಇನ್ನು

ಕೆಲವು ವಿಮರ್ಶಕರು 'ಇವನಿಗೆ ಎರಡಾಣೆಗೆ ಇಲ್ಲ' ಎಂದರು. ಕಪಾಲಕ್ಕೆರಡು ತಟ್ಟಿದೆ. ದೊಡ್ಡ ಜಗಳವೇ ಆಯಿತು. 'ಮಾರ್ಕ್ಸ್‌ವಾದಿ' ಎಂದು ಮೇಲಿನವರು ಸಂಶಯಪಟ್ಟು, ಬರುತ್ತಿದ್ದ ಫ್ರೀಷಿಪ್ ನಿಲ್ಲಿಸಿದರು. ಇಷ್ಟೆಲ್ಲ ಅವಸ್ಥೆಯಾದ ಮೇಲೆ ಬೋಳಿಸಲು ಮನಸ್ಸುಮಾಡಿದೆ. ಅಂದಿನಿಂದ ಕನ್ನಡಿ ನನಗೆ ಹೆಚ್ಚು ಪ್ರಿಯವಾಯಿತು.

ಭಾನುವಾರ ಬೆಳಗ್ಗೆ ಅದರ ಮುಂದೆ ಕುಳಿತು, ಕುರುಚಲು ಗಿಡಗಳಂತೆ (ಅಥವಾ ನಿತ್ಯಹರಿದ್ವರ್ಣದ ಕಾಡುಗಳಂತೆ ಎನ್ನೋಣವೋ!) ಸೊಂಪಾಗಿ ಬೆಳೆದ ಆ ನನ್ನ ಗಡ್ಡದ ಮೇಲೆ ಕೈಯಾಡಿಸುತ್ತಾ, ಇಲ್ಲದಿದ್ದರೆ ಕೆಲವು ವೇಳೆ ಕುಯಿಲು ಆದ ಮೇಲೆ ಹೊಲದಲ್ಲಿ ಒಣಗಿ ನಿಂತಿರುವ ಕೂಳೆಗಳಂತೆ ಎದ್ದು ನಿಂತ ಕೂದಲುಗಳ ಮೇಲೆ ಬೆರಳಾಡಿಸುತ್ತಾ ಅಮ್ಮನಿಗೆ ಒಂದು ಕೂಗು ಹಾಕುತ್ತೇನೆ: 'ಅಮ್ಮ, ನನ್ನ ಷೇವಿಂಗ್ ಸೆಟ್ಟು, ಬ್ಲೇಡು, ಹಾಗೇ ಒಂದು ಕಪ್ಪು ಬಿಸಿನೀರು!' ಎಂದು. 'ನೀನೇ ಬಂದು ತೊಗೊಳ್ಳೋ. ನನಗೆ ಪುರುಸೊತ್ತಿಲ್ಲ. ಅಡಿಗೆ ಮಾಡಬೇಕು' ಎನ್ನುತ್ತಾಳೆ ಅಮ್ಮ. ಆಗ ನನ್ನ ತಮ್ಮ ಸೀನನನ್ನು ಓಡಿಸುತ್ತೇನೆ, ತಂದರೆ ಅವನಿಗೂ ಕ್ಷೌರಮಾಡುತ್ತೇನೆಂದು ಆಸೆ ಹುಟ್ಟಿಸಿ. ತಂದ ಮೇಲೆ ಸೋಪು ಹಚ್ಚಿ, ಬ್ರಷ್ಷು ತೀಡಿ, ಕನ್ನಡಿಯ ಮುಂದೆ ಆ ನೊರೆಯ ಸಾಗರದ ಮಧ್ಯೆ ಆನಂದದಿಂದೋಲಾಡುತ್ತೇನೆ. ಅಪ್ಪ ಸಿನಿಮಾಗೆ ದುಡ್ಡುಕೊಡದೆ ಗದರಿದುದರಿಂದ ಉಂಟಾದ ದುಃಖ, ಮ್ಯಾಥಮ್ಯಾಟಿಕ್ಸ್‌ನಲ್ಲಿ ಜ್ಹೀರೋ ತೆಗೆದುದರಿಂದ ಕ್ಲಾಸಿನಲ್ಲಿ ಎಲ್ಲರ ಮುಂದುಂಟಾದ ಅವಮಾನ, ರನ್ನಿಂಗ್ ರೇಸಿನಲ್ಲಿ ಸೋತು ಎಲ್ಲರಿಗೂ ಕಡೆಯವನಾಗಿ ಪ್ರೇಕ್ಷಕ ವೃಂದದಿಂದ ಅಣಕವಾಡಿಸಿಕೊಂಡದ್ದರಿಂದ ಉಂಟಾದ ರೋಷ ಎಲ್ಲವನ್ನೂ ಮರೆತು ಈ ಸುಖದಲ್ಲಿ ವಿಹರಿಸುತ್ತೇನೆ. ಚರ್ . . . ಚರ್ . . . ಎಂದು ಎಳೆಯುವ ಬ್ಲೇಡಿನ ಕೆಳಗೆ ನುಣ್ಣಗೆ ಬರುವ ಕೆನ್ನೆಯ ಮೇಲೆ ಕೈ ಆಡಿಸಿ, ಕೂದಲನ್ನು ಕಳೆದುಕೊಂಡು ಬೇವಾರ್ಸಿಯಂತೆ ಆದ ಚರ್ಮದ ಮೇಲೆ ಕನಿಕರ ಪಡುತ್ತೇನೆ. ಷೇವ್ ಮಾಡಿದ್ದರೂ, ಎಲ್ಲೋ ಒಂದು ಮೂಲೆಯಲ್ಲಿ ಅಂಟಿಬಂದ ಜಾಡ್ಯದಂತೆ ಬಿಡುವುದಿಲ್ಲವೆನ್ನುವ ಕೆಲವು ಕೂದಲುಗಳನ್ನು ಬಲವಂತವಾಗಿ ಕತ್ತರಿಸುತ್ತೇನೆ. ಅರ್ಧ ಷೇವ್ ಆಗುವ ಹೊತ್ತಿಗೆ ಹೊರಗಡೆ ರೆವಿನ್ಯೂ ಇನ್‌ಸ್ಪೆಕ್ಟರು ಅರಚುತ್ತಿರುತ್ತಾನೆ. ಅವನನ್ನು ನೋಡಲು ಅರ್ಧ ಕೆರೆದ

ಮುಖದಲ್ಲೇ ಹೋಗುತ್ತೇನೆ. ಅವನು ನನ್ನ ಮುಖವನ್ನು ಕಂಡು 'ಪರವಾ ಇಲ್ಲ, ನಾಳೆ ಬರುತ್ತೇನೆ' ಎಂದು ಪಲಾಯನಮಾಡುತ್ತಾನೆ. ಮತ್ತೆ ಒಳಗೆ ಬಂದು ಕನ್ನಡಿಯಲ್ಲಿ ನೋಡಿಕೊಂಡಾಗ ಈಕಡೆ ಹಚ್ಚಿದ ಸೋಪೆಲ್ಲಾ ಒಣಗಿ ತೆಕ್ಕೆಕಟ್ಟಿರುತ್ತದೆ. ಅದರ ಮೇಲೆ ಬ್ಲೇಡು ಎಳೆದರೆ ಚರ್ಮ ಕಿತ್ತು ರಕ್ತ ಬರುತ್ತದೆ!

ಮರೆಮಾಚದೆ ಹೇಳುವುದಾದರೆ ಕನ್ನಡಿಯ ಮುಂದೆ ಕುಳಿತಾಗ ದೊಡ್ಡ ಸಮಸ್ಯೆಯೇ ಉದ್ಭವಿಸುತ್ತದೆ. ಮೀಸೆಯನ್ನು ಯಾವ 'ಕಟ್' ಮಾಡುವುದು? ಎನ್ನುವುದು ಸಮಸ್ಯೆ. ಅದಕ್ಕೆ ಉತ್ತರ ಅವರವರ ವ್ಯಕ್ತಿತ್ವ ಸನ್ನಿವೇಶಗಳಂತೆ ಹೋಗುತ್ತದೆ. ಕತ್ತಿಕಾಳಗಗಳ ಸಿನಿಮಾಗಳಿಂದ ಸ್ಫೂರ್ತಿಗೊಂಡ ನವ ತರುಣರು 'ತಳವಾರ್‌ಕಟ್' ಅಲ್ಲದೆ ಬೇರೆ ಯಾವುದೂ ಒಪ್ಪುವುದೇ ಇಲ್ಲ. ವಿದ್ಯಾರ್ಥಿಗಳಿಗೂ ಅಷ್ಟೆ. ಆಫೀಸು ಸಾಹೇಬರು ನೌಕರರಿಗೆಲ್ಲ ಫ್ರೆಂಚ್‌ಕಟ್ ಮೇಲೇ ಮೋಹ. ಪೈಲ್ವಾನ್‌ಗಳಿಗೆ ಗಿರಿಜಾಮೀಸೆಯ ಮೇಲೆ. ಇದಂತಿರಲಿ. ಕನ್ನಡಿಯ ಮುಂದೆ ಕುಳಿತಾಗ ಈ ಕಟ್ಟುಗಳನ್ನು ಮಾಡುವುದು 'ಮೈಸೂರು ರುಮಾಲು' ಕಟ್ಟುವುದರಷ್ಟೇ ಕಷ್ಟಸಾಧ್ಯವಾದ ಕೆಲಸ. ರುಮಾಲಾದರೂ ಒಂದು ಸಲ ಕೆಟ್ಟುಹೋದರೆ, ಬಿಚ್ಚಿ ಮತ್ತೊಂದು ಸಲ ಕಟ್ಟಬಹುದು. ಇದು ಹಾಗಲ್ಲ; ಹೋಯಿತೆಂದರೆ ಹೋಗೇಹೋಯಿತು. ಈ ಕಡೆಯ ಮೀಸೆಯನ್ನು ಚೂಪಾಗಿ ಬರುವಂತೆ ಬ್ಲೇಡಿನಲ್ಲಿ ಮಾಡುವಾಗ ಕೈ ತಪ್ಪಿದರೆ ಪೂರ್ತಿ ಬೋಳಿಸಿಯೇ ಹೋಗುತ್ತದೆ. ಆಕಡೆ ಮೀಸೆಯ ಒಂದು ತುಂಡು ಇದೆ, ಈ ಕಡೆಬೋಳು. ಈಗ ಏನು ಮಾಡುವುದು? ತೆನಾಲಿ ರಾಮನಂತೆ ತಲೆಯ ಮೇಲೆ ಬಿಡೋಣವೇ ಉಳಿದರ್ಧವನ್ನು? ಆದರೆ ಕಾಲ ಕೆಟ್ಟದೆ, ಜನಗಳು ಏನು ಮಾಡುವುದಕ್ಕೂ ಹೇಸುವುದಿಲ್ಲ. ಆದರೂ ಪೂರ್ತಿ ಬೋಳಿಸಿಬಿಡುವುದೇ ಲೇಸು.

ಕನ್ನಡಿಯ ಮುಂದೆ ಜೀವನದ ಕಹಿ ಅನುಭವಗಳನ್ನು ಮರೆಯಬಹುದು ಗಡ್ಡ ಬೋಳಿಸುವಾಗ. ಅದರ ಮುಂದೆ ಆತ್ಮಾವಲೋಕನವಾಗುತ್ತದೆ. ಆದುದರಿಂದಲೇ ಎಲ್ಲರೂ ಅದರ ಮುಂದೆ ನಿಲ್ಲಲು ಇಚ್ಛೆಪಡುತ್ತಾರೆ, ಅದರ ಮುಂದೆ ನಿಂತು ತಮ್ಮ ಬಿಂಬದ ಮೋಹಕತೆಗೆ ತಾವೇ ಮಾರುಹೋಗುತ್ತಾರೆ. ಇದಕ್ಕೆ 'ನಾರ್ಸಿಸಸ್'ನಂತಹ ಮುಖ ಮನಸ್ಸುಗಳೇ ಬೇಕೆಂಬ ಅವಶ್ಯಕತೆ ಇಲ್ಲ.

**ಎನ್. ಲಿಂಗಪ್ಪ**

# ಒಂದು ಕೆಟ್ಟ ಕನಸು

ನೆನ್ನೆ ತಾನೆ ನನ್ನನ್ನ 'ತೋರಿಸುವುದಕ್ಕೆ' ಯಾರ ಮನೆಗೋ ನಮ್ಮ ತಾಯಿತಂದೆ ಕರೆದುಕೊಂಡುಹೋಗಿದ್ದರು. ಅವನು ತೀರ ಕಪ್ಪು. ನೋಡು ವುದಕ್ಕೆ ಭಯಂಕರನಾಗಿದ್ದ. ಅಂಥವನೊಡನೆ ನಾನು ನನ್ನ ಆಯುಷ್ಕಾಲ ವನ್ನೆಲ್ಲಾ ಕಳೆಯುವುದೆಂದರೆ ನನಗೆ ಭಯವಾಯಿತು. ಅವನ ಮುಖವನ್ನು ಒಂದು ಕ್ಷಣ ನೋಡಲೂ ಹೇಸಿಗೆಯಾಗುತ್ತಿತ್ತು. ಅವನು ನನ್ನನ್ನು ಒಪ್ಪದಿದ್ದರೆ ಸಾಕು ಎಂದು ತವಕಪಡುತ್ತಿದ್ದೆ. ಅವನ ಕಣ್ಣುಗಳಿಗೆ ನಾನು ಆದಷ್ಟು ಕುರೂಪಿ ಯಾಗಿ ಕಂಡರೆ, ಅವನು ನನಗೆ ಒಲಿಯಲಾರ ಎಂದುಕೊಂಡೆ. ಏನಾದರೂ ಅವನು ನನ್ನನ್ನು ಒಪ್ಪಿದರೆ, ನಾಚಿಕೆಯನ್ನು ತೊರೆದು, 'ನಾನು ಇವನನ್ನು ಮದುವೆಯಾಗುವುದಿಲ್ಲ' ಎಂದು ನಮ್ಮ ತಾಯಿತಂದೆಗೆ ಹೇಳೋಣ ಎಂದು ಧೈರ್ಯ ತಂದುಕೊಂಡೆ.

ಅವನು ನನ್ನನ್ನು ಒಪ್ಪಿಯೇಬಿಟ್ಟ. ನನಗೆ ದಿಕ್ಕು ತೋಚದಂತಾಯಿತು. ಸಾಕಷ್ಟು ವಿದ್ಯಾಭ್ಯಾಸವಿದ್ದರೂ ಹಳ್ಳಿಯವಳಾದ್ದರಿಂದ ನನಗೆ ಲಜ್ಜೆ ಬಹಳ ವಾಗಿತ್ತು. ಬಿಕ್ಕಳಿಸಿ ಬಿಕ್ಕಳಿಸಿ ಅಳುವಂತಾಯಿತು. ಬಾವಿಗೆ ನೀರು ಸೇದಲು ಹೋದಾಗ ಅಲ್ಲೇ ಅಳುತ್ತಾ ನಿಂತೆ. ಬಾವಿಗೆ ಬೀಳೋಣವೆಂದು ಯೋಚನೆ ಮಾಡಿದೆ. ಬಾವಿಗೆ ಬೀಳಲು ಹೋದಾಗ ಬಾವಿಯ ಹಗ್ಗ ಕಾಲಿಗೆ ಸಿಕ್ಕಿ ಬೀಳುವುದಕ್ಕೆ ಆಗಲಿಲ್ಲ. ಗಟ್ಟಿಯಾಗಿ ಅಳು ಬಂತು. ಬಿಕ್ಕಳಿಸಿ ಬಿಕ್ಕಳಿಸಿ ಅತ್ತೆ.

ಆ ಕಡೆಯಿಂದ ಆ ಕರಾಳರೂಪಿ ಬಂದ. ನಾನು ಅಳುತ್ತಿದ್ದುದನ್ನು ನೋಡಿ, ಸುಮ್ಮನಿರಲಾರದೆ ಹತ್ತಾರು ಏಟು ಹೊಡೆದ. ನನ್ನ ಅಳು ಮತ್ತಷ್ಟು ಹೆಚ್ಚಾಯಿತು. ಆತ ನನ್ನನ್ನು ತನ್ನ ಮನೆಗೆ ಎತ್ತಿಕೊಂಡು ಹೋದ.

ಆತ ಗಂಡ—ನಾನು ಹೆಂಡತಿ. ನನ್ನ ಜೀವನದ ಆರಂಭವಾಯಿತು. ಸ್ವಲ್ಪಹೊತ್ತು ಊಟ ತಡವಾದರೂ ಕೈಗೆ ಸಿಕ್ಕಿದ ಪದಾರ್ಥದಲ್ಲೇ ಹೊಡೆಯಲು ಪ್ರಾರಂಭಿಸಿದ. ನಾನು ಜೋರಾಗಿ ಅತ್ತಷ್ಟೂ ಜೋರಾಗಿ ಹೊಡೆಯುತ್ತಿದ್ದ. ಅವನ ಮೈಯಿಂದ ಒಂದು ವಿಧವಾದ ದುರ್ನಾತ ಬರುತ್ತಿತ್ತು. ಆ ದುರ್ನಾತ ನನಗೆ ಸಹಿಸುವುದಕ್ಕಾಗುತ್ತಿರಲಿಲ್ಲ. ಅವನ ಕಣ್ಣುಗಳಿಂದ ಯಾವಾಗಲೂ ಕೆಂಡ ಕಾರಿ ಬರುತ್ತಿತ್ತು. ನನಗೆ ಅವನು ಪಿಶಾಚನಂತೆ ಕಾಣುತ್ತಿದ್ದ.

ಇದ್ದಕ್ಕಿದ್ದಂತೆ ಕೈಗೆ ಒಂದು ಮಗು ಬಂತು. ಗಂಡು ಮಗು. ಅದೂ ಅಷ್ಟು ಸುಂದರವಲ್ಲ. ಅವನಿಗಿಂತ ಕೊಂಚ ವಾಸಿ. ಆ ಗಂಡು ಮಗು ಆದ ಮೇಲಂತೂ ಅವನಿಗೆ ನನ್ನ ಮೇಲೆ ಮತ್ತಷ್ಟು ಕೋಪ ಹೆಚ್ಚಾಯಿತು. ಕಾರಣ ಮಾತ್ರ ನನಗೆ ಗೊತ್ತಾಗಲಿಲ್ಲ.

ಒಂದು ದಿನ ಇದ್ದಕ್ಕಿದ್ದಂತೆ ಅವನು ನನ್ನನ್ನೂ ನನ್ನ ಮಗುವನ್ನೂ ಮನೆಯಿಂದ ಹೊರಕ್ಕೋಡಿಸಿ ಬಾಗಿಲು ಹಾಕಿದ. ಗಾಢಾಂಧಕಾರ ಕವಿದಿತ್ತು. ನಕ್ಷತ್ರಗಳನ್ನು ಬಿಟ್ಟು ಮತ್ತಾವುದೂ ಕಾಣುತ್ತಿರಲಿಲ್ಲ. ಮಗುವನ್ನು ಎದೆಗಪ್ಪಿ ಕೊಂಡೆ. ಗಟ್ಟಿಯಾಗಿ ರೋದಿಸತೊಡಗಿದೆ.

ಸುತ್ತಮುತ್ತಲೂ ಕಾಡು. ಮರದ ಕೆಳಗೆ ನಾನು ಅಳುತ್ತಿದ್ದೆ. ಮಗು ಮಾತ್ರ ನನ್ನ ಎದೆಯನ್ನಪ್ಪಿಕೊಂಡು ನಿದ್ದೆ ಹೋಗುತ್ತಿತ್ತು. ಸುತ್ತಮುತ್ತ ಹತ್ತಾರು ಚೇಳುಗಳು ಮರದ ಮೇಲಿಂದ "ತುಪ, ತುಪ" ಎಂದು ಬೀಳು ತ್ತಿದ್ದುವು. ಓಡಲು ಕೂಡ ಶಕ್ತಿ ಇರಲಿಲ್ಲ. ಮೆಲ್ಲಗೆ ಹಾಗೇ ತೆವಳುತ್ತಾ ದಾರಿ ಹುಡುಕಿಕೊಂಡು ಹೊರಟೆ.

ಮತ್ತೆ ಸುತ್ತಮುತ್ತ ಮನೆಗಳು ಕಾಣಿಸಿಕೊಂಡವು. ನನ್ನ ಅವಸ್ಥೆ ತೀರ ಶೋಚನೀಯವಾಗಿತ್ತು. ನಾನು ಉಟ್ಟ ಸೀರೆ ಹತ್ತಾರು ಕಡೆ ಹರಿದು, ಚಿಂದಿ ಚಿಂದಿಯಾಗಿ ಹೋಗಿತ್ತು. ಮಗುವಿಗೆ ಹಾಕಿದ್ದ ಅಂಗಿಯೂ ಚಿಂದಿಯಾಗಿ ಮಗು ಬೆತ್ತಲೆಯಾಗಿತ್ತು. ನನಗಾಗ ಮೈಮೇಲೆ ರವಿಕೆಯಿರಲಿಲ್ಲ. ನನ್ನ ಕೈಗೆ ನನ್ನ ಮೈ ಎಮ್ಮೆಯ ಚರ್ಮದಂತೆ ತೀರ ಒರಟಾಗಿತ್ತು. ಬೆವರಿನ ದುರ್ಗಂಧ ನನ್ನಿಂದಲೇ ಹೊರಡುತ್ತಿತ್ತು. ಏನು ಕೊಟ್ಟರೂ ತಿನ್ನುವಷ್ಟು ಹಸಿವು ಆಯಿತು. ಅಳು ಬಂತು. ನನ್ನ ಎದೆಯನ್ನು ಅಪ್ಪಿಕೊಂಡು ಮಲಗಿದ್ದ ಮಗು ಜೋರಾಗಿ ಅಳತೊಡಗಿತು.

ನನ್ನ ಅಳುವನ್ನು ಕೇಳಿ ಹತ್ತಾರು ನಾಯಿಗಳು ಬಗುಳತೊಡಗಿ ಸುತ್ತ ನನ್ನನ್ನು ಮುತ್ತಿಕೊಂಡವು. ಓಡುವುದಕ್ಕೂ ಶಕ್ತಿ ಇರಲಿಲ್ಲ. ನಾಯಿಗಳು ಬಗುಳುವುದನ್ನು ಬಿಡಲಿಲ್ಲ. ಮತ್ತೂ ಜೋರಾಗಿ ಕಿರಿಚಿದೆ. 'ಅಯ್ಯೋ, ಸತ್ತೆ! ಬಿಡಿಸಿರಪ್ಪ, ಬಿಡಿಸಿರಪ್ಪ!' ಎಂದು ಕೂಗಿಕೊಂಡೆ.

ನಾಯಿಗಳೆಲ್ಲ ಯಾವುದೋ ಮನೆಯ ಕಡೆ ಓಡತೊಡಗಿದವು. ಅಬ್ಬ, ಬದುಕಿದೆನಲ್ಲಾ ಎಂದುಕೊಂಡೆ. ಜೋರಾಗಿ ಅಳುತ್ತಿದ್ದ ಮಗುವಿಗೆ ಸಮಾಧಾನ

ಹೇಳಿ, ಮಲಗಿಕೊಳ್ಳುವುದಕ್ಕೆ ಅದನ್ನು ತಟ್ಟಿದೆ. ಬಹಳ ಹಸಿವಿದ್ದರೂ ತೆಪ್ಪಗೆ ಮಲಗಿಕೊಂಡಿತು. ಮಗುವನ್ನೇ ದಿಟ್ಟಿಸಿದೆ. ಇಷ್ಟು ಹೊತ್ತೂ ಸುಮ್ಮನೆ ಅತ್ತಿದ್ದರೂ ಕಣ್ಣೀರು ಇಂಗಿರಲಿಲ್ಲ. ಫಳಫಳನೆ ಕಣ್ಣಿನಿಂದ ನೀರು ತೊಟ್ಟಿಕ್ಕಿತು. ಕಿರಿಚಿ, ಕಿರಿಚಿ, ಸಾಕಾಗಿ ಗಂಟಲು ಸೋತಿತ್ತು.

ನಾಯಿಗಳು ಓಡಿದ ಮನೆಯ ಕಡೆ ನೋಡಿದೆ. ಜಗುಲಿಯ ಮೇಲೆ ಹೆಣ್ಣೊಬ್ಬಳು ಊಟಮಾಡಿದ ಕೈ ತೊಳೆಯುತ್ತಿದ್ದಳು. ಒಂದು ಕೈಯಲ್ಲಿ ಸಣ್ಣ ದೀವಿಗೆಯೊಂದನ್ನು ಹಿಡಿದಿದ್ದಳು. ಬಹಳ ಸಂತೋಷವಾಯಿತು. ಏನಾದರೂ ಸಿಕ್ಕಬಹುದು ಎಂದುಕೊಂಡು—ಅವಳ ಮನೆಯ ಕಡೆ ಹೊರಡಲು ಅನುವಾದೆ. ಹೆಜ್ಜೆಗಳನ್ನು ವೇಗವಾಗಿ ಇಡಲು ಸಾಧ್ಯವಾಗುತ್ತಿರಲಿಲ್ಲ.

ಮಳೆ ಬಂದು ರಸ್ತೆ ಕೊಚ್ಚೆಯಾಗಿತ್ತು. ದಾರಿ ಕಾಣದೆ ಕೊಚ್ಚೆಯಲ್ಲಿ ಬಿದ್ದೆ. ಮಲಗಿದ್ದ ಮಗು ಎದ್ದು ಜೋರಾಗಿ ಅಳತೊಡಗಿತು. ಮುಖವೆಲ್ಲ ಕೊಚ್ಚೆಯಾಗಿತ್ತು. ಮತ್ತೆ ಲೆಕ್ಕಿಸದೆ ಆ ಮನೆಯ ಕಡೆ ಹೊರಟೆ. ನಾನು ಆ ಮನೆಯನ್ನು ಮುಟ್ಟುವಷ್ಟರಲ್ಲಿ, ಹೊರಗೆ ಕೈ ತೊಳೆಯುತ್ತಿದ್ದ ಹೆಣ್ಣು ಒಳಕ್ಕೆ ಹೊರಟುಹೋದಳು. ಬಾಗಿಲು ಹಾಕಿಕೊಂಡಿತು. ಅವರ ಮನೆಯ ಮುಂದೆ ಎಂಜಲೆಲೆಯನ್ನು ತಿಂದುಮುಗಿಸಿದ್ದ ನಾಯಿಗಳು ಮತ್ತೆ ನನ್ನನ್ನು ಮುತ್ತಿದುವು. ಪುನಃ ಜೋರಾಗಿ ಕೂಗಿ ಅಳತೊಡಗಿದೆ.

ನಾಯಿಗಳು ಇನ್ನಾರ ಮನೆಯ ಕಡೆಗೋ ಓಡಿದುವು. ಬೆಳಕನ್ನು ಹಿಡಿದು ಕೊಂಡು ಇನ್ನೊಂದು ವ್ಯಕ್ತಿ ಅಲ್ಲೂ ಕೈ ತೊಳೆಯುತ್ತಿತ್ತು. ನಾನು ನಾಯಿ ಗಳನ್ನು ಹಿಂಬಾಲಿಸಿ, ಅವರ ಮನೆಯ ಕಡೆ ಹೊರಟೆ, ಹತ್ತಿರ ಹೋದೆ. ಆತ ಒಳಕ್ಕೆ ಹೋಗಬೇಕು ಎನ್ನುವಷ್ಟರಲ್ಲಿ, 'ಅಪ್ಪಾ . . .' ಎಂದು ಒರಲಿದೆ. ಆತ 'ತೊಲಗಾಚೆ. ಏನೂ ಮಿಕ್ಕಿಲ್ಲ. ಎಲ್ಲರಿಗೂ ಊಟವಾಯಿತು' ಎಂದು ಗದರಿಕೊಂಡು, ಒಳಗೆ ಹೋಗಿ ಬಾಗಿಲು ಹಾಕಿಕೊಂಡ.

ಗೂಬೆಯೊಂದು ಗೂಡಿನಿಂದ ಹೊರಕ್ಕೆ ಹಾರಿಬಂದಂತೆ, ನನ್ನನ್ನು ವರಿಸ ಬೇಕಾಗಿದ್ದ ಆ ವ್ಯಕ್ತಿ ರೂಮಿನಿಂದ ಹೊರಕ್ಕೆ ಎದ್ದು ಬಂದಂತೆ, ನನ್ನ ಬಾಯಿಂದ ಧ್ವನಿಯೊಂದು ಹೊರಟಿತು. ಯಾವ ಧ್ವನಿ ನನ್ನಲ್ಲಿ ರೋಮಾಂಚ ವನ್ನೆಬ್ಬಿಸಿ ಭಯಪಡಿಸುತ್ತಿತ್ತೋ, ಯಾವ ಧ್ವನಿಯನ್ನು ನಾನು ಎಂದಿಗೂ ಅನುಕರಿಸಿರಲಿಲ್ಲವೋ, ಅದೇ ಧ್ವನಿ ನನ್ನ ಬಾಯಿಂದಲೇ ಹೊರಟುಬಂತು.

ನಾನೇನನ್ನು ನುಡಿಯುತ್ತಿದ್ದೇನೆಂಬುದು ನನಗೇ ಗೊತ್ತಾಗದಂತೆ ಆ ಧ್ವನಿ ಹತ್ತಾರು ಕಡೆ ಪ್ರತಿಧ್ವನಿತವಾಗಿ ನನ್ನನ್ನೇ ಸುತ್ತುಹಾಕಿಕೊಂಡು, ಹೆದರಿಸ ತೊಡಗಿತು. ಆ ಧ್ವನಿ "ಕವಳ ತಾಯಿ!"

ಆ ಧ್ವನಿಯ ಜೊತೆಯಲ್ಲಿ ನಾಯಿಗಳು ನನ್ನನ್ನು ಮತ್ತೆ ಸುತ್ತು ಹಾಕಿಕೊಂಡವು. ಆ ನಾಯಿಗಳೊಡನೆ ಕೂಳಿಗಾಗಿ ನಾನು ಅವುಗಳ ಪ್ರತಿಸ್ಪರ್ಧಿಯಾಗಬೇಕಾಗಿಬಂತು.

ನಾಯಿಗಳು ಮತ್ತೆಲ್ಲಿಗೋ ಹೊರಟವು. ನಾನು ಮಾತ್ರ ಅವುಗಳನ್ನು ಹಿಂಬಾಲಿಸದೆ ಆ ಮನೆಯ ಮುಂದೆಯೇ ನಿಂತೆ. ಹಸಿವು ಹೊಟ್ಟೆಯಲ್ಲಿರದೆ ಮಾತಿನ ರೂಪನ್ನು ತಾಳಿ ನಾಲಗೆಯ ತುದಿಯ ವರೆಗೂ ಪ್ರಸರಿಸಿತು. ನನ್ನ ಅರಿವಿಲ್ಲದೆ ಉದ್ಗಾರ ಹೊರಟುಬಂತು: "ಕವಳ ತಾಯಿ, ಕವಳ ತಾಯಿ! ಮೂರು ದಿನದಿಂದ ನಾನು ಊಟಮಾಡಿಲ್ಲ. ಮಗು ಅಳುತ್ತಾ ಇದೆ. ಏನಾದರೂ ಇದ್ದರೆ ಕೊಡಿರಮ್ಮ. ಸತ್ತುಹೋಗುತ್ತಿದ್ದೇನಮ್ಮ, ಬಹಳ ಹಸಿವು. ದಮ್ಮಯ್ಯ, ದತ್ತಯ್ಯ, ಮಿಕ್ಕ ತುತ್ತನ್ನು ಇಲ್ಲಿಗೆ ಎಸೆಯಿರಮ್ಮ!"

ಮನೆಯ ಒಳಗಿಂದಲೆ ಗರ್ಜನೆಯ ಧ್ವನಿಯೊಂದು ನನ್ನ ಕಿವಿಗೆ ಬಂದು ಬಡಿಯಿತು: "ಇಲ್ಲ, ಹೋಗು. ಮನೆಯಲ್ಲಿ ಮಕ್ಕಳು ಮಲಗಿವೆ. ದುಡಿದು ಸಂಪಾದಿಸು ಹೋಗು. ಅನ್ನ ಮಿಕ್ಕರೆ ನಮ್ಮ ನಾಯಿ ಟೈಗರ್‌ಗೆ ಹಾಕುತ್ತೇವೆ." ನಾನು ಗಟ್ಟಿಯಾಗಿ ಕೂಗಿದೆ: "ಸ್ವಾಮೀ, ಇವೊತ್ತು ಹೊಟ್ಟೆಗಾದರೆ, ನಾಳೆ ದುಡಿಯುತ್ತೇನೆ. ಬುದ್ಧಿ, ಒಂದು ಗುಕ್ಕು ಕೊಡಿ, ನಾಳೆ ಬೇಡೋದಿಲ್ಲ" ಮನೆಯ ಒಳಗಡೆ ನಿಶ್ಶಬ್ದವಿತ್ತು. ನಾನು ಹೇಳಿದ ಮಾತುಗಳನ್ನು ಗಾಳಿಯೊಂದು ಕೇಳಿತೇನೋ. ಸ್ವಲ್ಪ ಜೋರಾಗಿ ಬೀಸತೊಡಗಿತು. ಎಷ್ಟು ಕುಡಿದರೇನು ಗಾಳಿಯನ್ನು, ಹೊಟ್ಟೆ ತುಂಬುತ್ತದೆಯೆ?

ಪಕ್ಕದ ಮನೆಯಿಂದ ಹುಡುಗನೊಬ್ಬ ದೀವಿಗೆಯನ್ನು ತಂದ. ಹೊರಕ್ಕೆ ಬಂದು, ಚರಂಡಿಯ ಹತ್ತಿರ 'ಉಮ್ಮೆನ್ನಲು' ಕುಳಿತ. ನಾನು ಅವರ ಮನೆಯ ಮುಂದೆ 'ಕವಳ ತಾಯಿೂ!' ಎಂದು ಕೂಗಿದೆ. ಹುಡುಗ ಗಟ್ಟಿಯಾಗಿ ಕಿರಿಚಿಕೊಂಡು, 'ಅಮ್ಮಾ!' ಎಂದು ಮನೆಯೊಳಕ್ಕೆ ಓಡಿಹೋದ. ನಾನೂ ಒಂದು ದಿನ 'ಕವಳ ತಾಯಿ'ಗಳ ರೂಪಕ್ಕೆ ಏಕೆ, ನನ್ನಗಂಡನ ರೂಪಕ್ಕೇನೆ, ಹೆದರುತ್ತಿದ್ದೆ. ಅಂಥ ನನ್ನ ರೂಪ ಈಗ ಇತರರಿಗೆ ಭಯಂಕರವಾಯಿತು.

ಹತ್ತಾರು ಮನೆಗಳಲ್ಲಿ 'ಕವಳ, ತಾಯಿ' ಎಂದೆ. ಒಂದು ಗುಕ್ಕು ಅನ್ನ ಕೂಡ ಸಿಗಲಿಲ್ಲ. ಸುತ್ತಮುತ್ತಿನ ಪ್ರಕೃತಿ 'ಕವಳ, ತಾಯಿ' ಎಂದು ಪ್ರತಿಧ್ವನಿಸುತ್ತಿತ್ತು. ಅದೊಂದು ನನ್ನ ಕಿವಿಗೆ ಕೇಳಿಬರುತ್ತಿತ್ತು.

ಊರ ತುದಿಯಲ್ಲಿದ್ದ ಗುಡಿಸಿಲ ಮುಂದೆ, 'ಕವಳ, ತಾಯಿ' ಎಂದೆ. ಮನೆಯೊಳಗಿಂದ ನನ್ನ ತಾಯಿ ನನಗೆ ಒಂದು ಎಲೆಯ ಮೇಲೆ ಅನ್ನ ಹಾಕಲು ಬಂದರು. 'ಅಮ್ಮಾ . . . !' ಎಂದು ಕಿರಿಚಿಕೊಂಡೆ.

ಕನಸು ಒಡೆಯಿತು. ಕಣ್ಣುಬಿಟ್ಟಾಗ ಕಣ್ಣಿಂದ ಒಂದೇ ಸಮ ನೀರು ಸುರಿಯುತ್ತಿತ್ತು. ನನ್ನ ತಾಯಿ 'ಯಾಕಮ್ಮಾ? ಹಾಗೆ ಕಿರಿಚಿಕೊಂಡೆ? ಬೆಳಗಾಗಿದೆ ಏಳು!" ಎಂದು ನನ್ನ ಹತ್ತಿರ ಬಂದರು. 'ಯಾಕೆ ಮಗು, ಕಣ್ಣೆಲ್ಲಾ ನೆನೆದಿದೆ? ಕನವರಿಸಿದೆಯಾ? ಭಯವಾಯಿತೇನಮ್ಮಾ?' ಎಂದರು. ಕಣ್ಣೊರಸಿಕೊಂಡು ಕನಸನ್ನು ಹೇಳಿದೆ. ಅಮ್ಮನಿಗೂ ಭಯವಾಯಿತು. "ಹಾಗಾದರೆ ಬೇಡಮ್ಮ, ಇನ್ನೆಲ್ಲಾದರೂ ವರ ನೋಡಿದರಾಯಿತು" ಎಂದರು.

ಕನಸನ್ನು ನೆನೆಸಿಕೊಂಡರೆ, ಈಗಲೂ ಕಣ್ಣಿನಲ್ಲಿ ನೀರು ಇಳಿಯುತ್ತದೆ ನನಗೆ.

ಜಿ. ಎಸ್. ಶ್ರೀನಿವಾಸಮೂರ್ತಿ

# ಹಳೆಯ ಚಪ್ಪಲಿ ಹೊಲಿಯುವವನು

ಚಿಕ್ಕಪೇಟೆ ಬಳೇಪೇಟೆಗಳು ಸಂಧಿಸುವುದೇ ಬಳೇಪೇಟೆ ಚೌಕ, ಕಾಶೀ ವಿಶ್ವೇಶ್ವರ ದೇವಾಲಯದ ಹತ್ತಿರ. ಆ ಚೌಕದಲ್ಲಿ ಪೊಲೀಸ್ ಒಬ್ಬ ನಿಂತು ವಾಹನಗಳಿಗೆ ದಾರಿ ತೋರಿಸುತ್ತಿರುತ್ತಾನೆ. ಅಂಗಡಿಗಳು ಸದಾ ಗಿರಾಕಿ ಗಳಿಂದ ತುಂಬಿರುತ್ತವೆ. ಅಂಗಡಿ ಕಟ್ಟೆಗಳ ಮೇಲೆ ಕೂಡ ಕಿರಾಣಿ ಅಂಗಡಿ ಗಳು. ಎಲ್ಲೆಲ್ಲೂ ಜನಗಳ ನೂಕುನುಗ್ಗಲು. ಚಿಕ್ಕಪೇಟೆಯಿಂದ ಬಳೇ ಪೇಟೆ ಕಡೆಗೆ ಬಂದರೆ, ಚೌಕದ ಸಮೀಪದಲ್ಲೆ ಒಂದು ಹೋಟೆಲ್, ಚೌಕದ ಕಡೆಗೆ ಬರುವವರ ಎಡಭಾಗಕ್ಕೆ. ಈ ಹೋಟೆಲ್ ಎದುರಿಗೆ ಒಂದು ವ್ಯಕ್ತಿ ಕುಳಿತಿರುತ್ತದೆ, ರಸ್ತೆಯ ಇನ್ನೊಂದು ಬದಿಯಲ್ಲಿ. ವ್ಯಕ್ತಿ ತೆಳ್ಳಗೆ ಇದ್ದರೂ ಕುಳ್ಳಗಿಲ್ಲದೆ ಸಾಕಷ್ಟು ಎತ್ತರವಾಗಿದ್ದಾನೆ. ಸದಾ ನಗುಮುಖ, ನಗೆ ಮಿಂಚು ತ್ತಿರುವ ಕಣ್ಣು.

ಆತನ ಸುತ್ತಮುತ್ತ ಹಲವಾರು ಸಾಮುಗ್ರಿಗಳು ಬಿದ್ದಿವೆ. ಹಳೆಯ ತೊಗಲು, ಹಳೆಯ ಮೋಟಾರು ಟೈರುಗಳು; ಒಂದು ಕಬ್ಬಿಣದ Stand; ಪಿಕಾಸಿಯಂತಿರುವ ಸಣ್ಣ ಹಾರೆ, ಅದೇ ಆತ ಉಪಯೋಗಿಸುವ ಸುತ್ತಿಗೆ; ಚರ್ಮ ಕೊಯ್ಯಲು, ಕತ್ತರಿಸಲು ಉಪಯೋಗಿಸುವ ಮಸೆದ ಮಚ್ಚು ಅಥವಾ ಕತ್ತಿ, ಕತ್ತರಿ; ಪಕ್ಕದಲ್ಲೇ ನೀರಿನ Ovaltine ಹಳೆಯ ಡಬ್ಬ; ದಾರದ ತುಂಡುಗಳು, ಹೊಲಿಯುವ ಸೂಜಿ ದಬ್ಬಣ, ಒಂದೆರಡು ಹಳೆಯ ಹರಕು ಮುರುಕು ಚಪ್ಪಲಿಗಳು. ಅವನೇ ಹಳೆಯ ಚಪ್ಪಲಿ ಹೊಲಿಯುವವನು. ಹೆಸರು ಕೆಂಚಪ್ಪ. ಬಣ್ಣವೂ ಹೆಸರಿಗೆ ತಕ್ಕ ಹಾಗೆ ಸ್ವಲ್ಪ ಕೆಂಚೆ!

ಅವನಿಗೆ ನಾನು ಹಳೆಯ ಗಿರಾಕಿ, ಈಗೆರಡು ವರ್ಷಗಳಿಂದ. ವಾರ ಕ್ಕೊಮ್ಮೆ ನನಗವನ ಸಾನ್ನಿಧ್ಯ. ಆ ಹತ್ತು ನಿಮಿಷಗಳಲ್ಲಿ ಅವನಾಡದ ಮಾತು ಗಳಿಲ್ಲ, ಕೇಳದ ಪ್ರಶ್ನೆಗಳಿಲ್ಲ. ಅವನ ಕಥೆಯೋ ದುರಂತಪೂರ್ಣ! ಆದರೆ ಅವನ ನಡತೆ, ಅವನ ಮಾತು ಹಾಸ್ಯಪರಿಪೂರ್ಣ.

ಅವನು ಬಯಲನಾಡವನಂತೆ, ಚಿತ್ರದುರ್ಗದ ಕಡೆಯ ಸಿದ್ದಾಪುರದ ಹತ್ತಿರದ ಹಳ್ಳಿಯವನಂತೆ. ಅವನದು ತುಂಬಿದ ಸಂಸಾರವಾಗಿತ್ತಂತೆ. ಅಪ್ಪ, ಅವ್ವ, ಅಕ್ಕ, ಎಲ್ಲರೂ ಇದ್ದರಂತೆ. ಅಪ್ಪನು ಮನೆಯಲ್ಲಿ ಕುಳಿತು ಮೆಟ್ಟು

ಹೊಲಿದರೆ, ತಾನೂ ತನ್ನಕ್ಕನೊಂದಿಗೆ ಕೂಲಿ ಮಾಡುತ್ತಿದ್ದನಂತೆ. ಸ್ವಲ್ಪ ದಿನಗಳಲ್ಲಿ ಮದುವೆಯಾಯಿತಂತೆ. ಇನ್ನೊಂದು ಹಳ್ಳಿಯ ಸಜಾತಿಯ ಚೌಡಮ್ಮ ಅವನ ಪತ್ನಿ. ಒಂದು ಗಂಡುಮಗುವೂ ಆಗಿ ಸುಖವಾಗಿ ಸಂತೋಷವಾಗಿ ಇದ್ದರಂತೆ. ಇದ್ದಕ್ಕಿದ್ದಂತೆ 'ಮಾರಿಬ್ಯಾನೆ' ಬಂದು, ಒಂದೆರಡು ದಿನಗಳಲ್ಲಿ ಅವನ ಅವ್ವ, ಅಪ್ಪ, ಅಕ್ಕ, ಹೆಂಡತಿ, ಮಗ ಎಲ್ಲರೂ ಸತ್ತರಂತೆ. ತಬ್ಬಲಿಯಾಗಿ ದುಃಖಪಡುತ್ತಿದ್ದಾಗ ಯಾರೋ ಒಬ್ಬ ಗೆಳೆಯನ ಜೊತೆಗೆ ಇತ್ತ ಬಂದನಂತೆ.

ಈ ಕಥೆಯನ್ನೆಲ್ಲಾ ಅವನು ಒಟ್ಟಿಗೆ ಹೇಳಲಿಲ್ಲ, ಆಗಾಗ ಹೇಳಿದ್ದು. ತನ್ನ ದುಃಖ ತಡೆಯಲಾರದೆ ಅತ್ತು ಅಲ್ಲಿಗೇ ನಿಲ್ಲಿಸಿ, "ಬಿಡು, ಸ್ವಾಮಿ, ಎಲ್ಲಿ ಕತೆ? ನಿಂಗೂ ಒತ್ತಾಯ್ತು" ಎಂದು ಹೇಳಿ ರಿಪೇರಿಮಾಡಿ ಕೊಡುತ್ತಿದ್ದ. ಅವನನ್ನು ಇಲ್ಲಿಗೆ ಕರೆತಂದ ಗೆಳೆಯನೂ ಇದೇ ಕಸಬಿನವನು. ಅವನು ಕುಳಿತು ಕೊಳ್ಳುವ ಜಾಗ ಅವೆನ್ಯೂ ರೋಡಿನಲ್ಲಿ. ಸಂಜೆಗೆ ಅಂಗಡಿ ಎತ್ತಿ, 'ಸೆಕೆಂಡ್ ಸುರುವ್' (ಸೆಕೆಂಡ್ ಷೋ) ಸಿನಿಮಾ ಬಿಟ್ಟ ಮೇಲೆ ಯಾವುದಾದರೂ ಅಂಗಡಿ ಕಟ್ಟೆಯ ಮೇಲೆ ಮಲಗುತ್ತಾರಂತೆ ಈ ಇಬ್ಬರೂ.

ಹೀಗೆ ರಾತ್ರಿ ಇಬ್ಬರೂ ಸೇರುವುದು, ಬೆಳಗ್ಗೆ ಅಗಲುವುದಂತೆ. ಬೆಳಗ್ಗೆ ಎದ್ದು ನಲ್ಲಿಯಲ್ಲಿ ಮುಖ ತೊಳೆದು, ಕಾಸಿದ್ದರೆ ಕಾಫೀ ಕುಡಿದು, (ಹೊಟೇಲಲ್ಲಲ್ಲ! ಮಾರ್ಕೆಟ್ಟಿನ ಮುಂದೆ ಪಶ್ಚಿಮ ದಿಕ್ಕಿನಲ್ಲಿ ಮಾರುವ ಇಡ್ಲಿ, ಕಾಫಿ. ಇಡ್ಲಿ ಆಣೆಗೆರಡಂತೆ, ಕಾಫೀ ಒಂದಾಣೆಯಂತೆ!) ತಮ್ಮತಮ್ಮ ಸ್ಥಳಗಳಿಗೆ ಬಂದು ಕುಳಿತುಕೊಳ್ಳುತ್ತಾರೆ. ಹೀಗೆ ಜೀವನ ಸಾಗುತ್ತಾ ಎಂಟು ವರ್ಷಗಳಾದುವಂತೆ!

ನಮ್ಮ ಕೆಂಚ ಮಾಡುವ ಕೆಲಸವನ್ನು ಕೈಮುಟ್ಟಿ ಮಾಡುತ್ತಾನೆ, ಮನ ಮುಟ್ಟಿ ಮಾಡುತ್ತಾನೆ. ಎಲ್ಲರಂತೆ ನಾಲ್ಕು ಮೊಳೆ ಕುಕ್ಕಿ ನಾಲ್ಕಾಣೆ ಕೇಳುವುದಿಲ್ಲ. ಎಲ್ಲ ರಿಪೇರಿ ಆದ ಮೇಲೆ ಎಷ್ಟು ಕೊಡಬೇಕೆಂದು ಕೇಳಿದರೆ—ಎರಡಾಣೆ, ತಪ್ಪಿದರೆ ಮೂರಾಣೆ (ಜಾಸ್ತಿ ರಿಪೇರಿ ಇದ್ದರೆ) ಕೇಳುತ್ತಾನೆ. ಇರುವುದೇ ಇಷ್ಟೆಂದು ಎರಡಾಣೆ ಕೊಟ್ಟರೂ ಸುಮ್ಮನಾಗುತ್ತಾನೆ. ಬೆಂಗಳೂರಿನ ವ್ಯಾಪಾರಸ್ಥರೆಲ್ಲ ಒಂದಲ್ಲ ಒಂದು ರೀತಿ ದುಡ್ಡು ಎಳೆಯುವವರೇ ಎನ್ನಿಸಿದ ನಮಗೆ ಇವನೊಬ್ಬನಿಗಾದರೂ ದುಡ್ಡಿನ ಬೆಲೆ ಗೊತ್ತಿದೆಯಲ್ಲಾ ಎನ್ನಿಸುತ್ತದೆ. ಅಷ್ಟು ಕೆಲಸ ಮಾಡಿದ್ದಕ್ಕೆ ಎಷ್ಟೋ ಅಷ್ಟೇ ಹಣ ಕೇಳುತ್ತಾನೆ.

ಕೆಂಚ ಸರಸಿ, ರಸಿಕ. ಗಿರಾಕಿಗಳೊಂದಿಗೆ ನಗುಮುಖದಿಂದ ವರ್ತಿಸುತ್ತಾನೆ. ಸದಾ ಹಸನ್ಮುಖಿ. ಆ ಸುದ್ದಿ ಈ ಸುದ್ದಿ ಹೇಳುತ್ತಾನೆ. ನಮ್ಮ ವಿಚಾರ ವಿಚಾರಿಸುತ್ತಾನೆ. (ಅವನೊಂದಿಗೆ ಸಲಿಗೆಯಿಂದಿರುವವರೊಡನೆ ಮಾತ್ರ.) ಸಿನಿಮಾ ಸುದ್ದಿ ಹೇಳಿ ನಗಿಸುತ್ತಾನೆ. ಅಲ್ಪಸ್ವಲ್ಪ ತಮಿಳು ಉರ್ದು ಹಿಂದಿ ಮಿಶ್ರ ಕಲಿತಿದ್ದಾನೆ. ಗಿರಾಕಿಗಳು ಹಣಕೊಟ್ಟ ಮೇಲೆ 'ಥ್ಯಾಂಕ್ ಯು ಸಾರ್' ಎಂದು ಇಂಗ್ಲೀಷಿನಲ್ಲೂ ಹೇಳುತ್ತಾನೆ.

ನಾನು ವಿದ್ಯಾರ್ಥಿ ಎಂದು ಅವನಿಗೆ ಗೊತ್ತಾದಂದಿನಿಂದ ನನಗೆ ಅನೇಕ ಬುದ್ಧಿಮಾತುಗಳನ್ನು ಹೇಳತೊಡಗಿದ: "ಕಷ್ಟಪಟ್ಟು ಓದಿ. ದೊಡ್ಡ ನೋಕರಿ ಮಾಡಿ. ಮನೆಯಿಂದ ಎಷ್ಟು ಹೊಟ್ಟೆ ಬಟ್ಟೆ ಕಟ್ಟಿ ಕಳಿಸುತ್ತಾರೋ! ಪೋಲಿ ಹುಡುಗರ ಜತೆ ಸೇರಬೇಡಿ; ಸಿನಿಮಾಗಳನ್ನ ದಿನಾಲೂ ನೋಡಬೇಡಿ; ಸಿಕ್ಕ ಸಿಕ್ಕದ್ದನ್ನು ತಿನ್ನಬೇಡಿ" ಇತ್ಯಾದಿ ಇತ್ಯಾದಿ.

ನನ್ನೊಡನೆ ಏಕೆ ಇಷ್ಟೊಂದು ವಿಶ್ವಾಸದಿಂದ ಮಾತಾಡುತ್ತಾನೆ ಎಂದು ಅವನನ್ನು ಕೇಳಿದರೆ, ಹೇಳುತ್ತಾನೆ: ಅವನ ಮಗನ ಹೆಸರು ಗೋಯಿಂದನಂತೆ. ಅವನನ್ನ ದೊಡ್ಡವನಾದ ಮೇಲೆ ಓದಲು ಹಾಕಿ, ದೊಡ್ಡ ನೋಕರಿ ಮಾಡಿಸಿ, ಮದುವೆಮಾಡಿ ಮನೆಮಾಡಿ, ಮೊಮ್ಮಕ್ಕಳನ್ನು ನೋಡಿ ಸಂತೋಷಪಡಬೇಕೆಂದಿದ್ದನಂತೆ. ಆದರೆ ದೈವ . . . ! ಇದನ್ನೆಲ್ಲಾ ಕೇಳಿದರೆ ಸಂಕಟವಾಗುತ್ತದೆ. ಅದಕ್ಕೇ ನಮ್ಮಂಥವರು ಓದಿ ನೋಕರಿ ಮಾಡಲಿ ಅಂತ ತನಗೆ ಆಶೆ ಎಂದು ಹಂಬಲದಿಂದ ಹೇಳುತ್ತಾನೆ.

ಎಷ್ಟು ವಿಧದಲ್ಲಿ ನನಗೆ ಗೆಳೆಯನಾಗಿ ಬುದ್ಧಿಮಾತು ಹೇಳುತ್ತಾನೊ! ಆಗಾಗ ಅವನ ಬಾಯಿಂದ ಬರುವ ಮಾತುಗಳೆಲ್ಲ ಅವನ ಜೀವನದ ದುರಂತಾನುಭವಗಳ ಸಾರವೆನ್ನಿಸುತ್ತವೆ. ಒಂದು ಸಾರಿ ನಡೆದ ಘಟನೆ: ಅಂದಿನಿಂದ ಅವನು ನನಗೆ ಗುರುವಾದ.

ಒಮ್ಮೆ ನನ್ನ ಮೆಟ್ಟುಗಳನ್ನು ರಿಪೇರಿಗೆಂದು ಅವನಲ್ಲಿಗೆ ಎತ್ತಿಕೊಂಡು ಹೋದೆ. ನನ್ನ ಚಪ್ಪಲಿಯ ಉಂಗುಟಗಳು ಕಿತ್ತುಹೋಗಿದ್ದವು. ನಿತ್ಯದಂತೆ ಅಂದೂ ಹಸನ್ಮುಖಿಯಾಗಿ ಸ್ವಾಗತಿಸಿದ. ನನ್ನ ಚಪ್ಪಲಿಯನ್ನೆಲ್ಲಾ ಒಮ್ಮೆ ಪೂರ್ಣ ಪರೀಕ್ಷಿಸಿ ನೋಡಿ, "ಒಂದು ಜತೆ ಹೊಸವಾರ ತಗಾಳಿ, ಸ್ವಾಮಿ. ಇವಕ್ಕೇ ಏಸು ದಿನ ತ್ಯಾಪೆ ಹಾಕಿಸ್ತೀರ?" ಎಂದ. ದುಡ್ಡು ಸಿಕ್ಕರೆ ಸಾಕೆಂದು

ಅವಕ್ಕೇ ತೇಪೆಹಾಕುವವರೆಷ್ಟು ಮಂದಿಯಿಲ್ಲ! ನಾನು ಬೇರೆ ಚಪ್ಪಲಿ ಕೊಂಡರೆ ತನಗೆ ಗಿರಾಕಿ ತಪ್ಪುತ್ತೆಂಬುದೂ ತಿಳಿಯಲಿಲ್ಲ ಅವನಿಗೆ!

"ಆ ಉಂಗುಟವನ್ನೇ ತೆಗೆದುಬಿಡು. ಹಾಗೇ ಇನ್ನೂ ಸ್ವಲ್ಪ ದಿವಸ ಉಪಯೋಗಿಸುತ್ತೇನೆ" ಎಂದೆ.

ಅವನು ನನ್ನ ಮುಖ ನೋಡಿ ಹೇಳಿದ: "ಸ್ವಾಮಿ, ಮೆಟ್ಟಿಗೆ ಉಂಗುಟ ಇಲ್ಲದಿರೋದು, ಗಂಡಸಿಗೆ ಉಡಿದಾರ ಇಲ್ಲದೆ ಇರೋದು ಒಳ್ಳೇದಲ್ಲ, ಬಾಳ ಕೆಟ್ಟದ್ದು."

ನನಗೆ ಕುತೂಹಲವಾಯಿತು. ಕೇಳಿದೆ: "ಏಕಯ್ಯಾ?"

"ಇದೇನ್ ಸ್ವಾಮಿ, ಇಂಗೆ ಕೇಳ್ತೀರಿ?" ಎಂದು ಹೇಳಿದ: "ಉಂಗುಟ ಇಲ್ಲದ ಮೆಟ್ಟು ನೆಚ್ಚಿಕಿಲ್ಲ. ಯಾವಾಗ ಕೈಕೊಡ್ತಾವೆ ಅಂತ ಗೊತ್ತಿರಲ್ಲ. ನಡಿ ಯಾಕೆ ಹಿಡಿತ ಸಿಗಲ್ಲ, ಬಿಗಿ ಬರಲ್ಲ, ಸರಸರ ಓಗಾಕೆಬರಲ್ಲ, ಎಬ್ಬಟ್ಟ ಊರಿ ನಡಿಯಾಕೆ ಆಗಲ್ಲ. ಅದೇ ಉಂಗಟ ಇದ್ರೆ, ನಿಮಗೆ ಎಂಗೆಬೇಕೋ ಅಂಗೆ ನೆಡಿಬೈದು. ಮನೀಗೆ ಬಾಕ್ಲಿದ್ದಂಗೆ ಉಂಗುಟ ಮೆಟ್ಟಗೆ. ಅಂಗೆ ಮನಸರೂವ! ಉಡದಾರ ಇದ್ರೆ ಒಂದು ಕಟ್ಟು ಇದ್ದಂಗೆ. ಗಾದೀ ಕೇಳಿಲ್ಲವಾ—ಬಡವಾ ಗೋರೆಲ್ಲ ಬಡಿವಾರದ ಉಡದಾರ ಕಟ್ಟಿಕೊಂತಾರೆ, ಪುಣ್ಯಮಂತರಾಗರೆಲ್ಲ ಪುಂಡಿ ಉಡ್ದಾರ ಆಕ್ಕೊಂತಾರೆ. ಹೀಗೇ, ಬಾಗ್ಯವಂತರಾಗೋದು, ಬಾಳೋದು" ಎಂದು ಹೇಳಿ ಮೆಟ್ಟಿಗೆ ಉಂಗುಟಹಾಕಲು ಬೇರೆ ಚರ್ಮ ಎತ್ತಿಕೊಂಡು ನೀರಿನ ಡಬ್ಬಕ್ಕೆ ಅದ್ದಿದ.

ನಾನು ಚೇಷ್ಟೆಗೋಸ್ಕರ ಕೇಳಿದೆ: "ಹಂಗಾದರೆ ಹೆಂಗಸರಿಗೆ?"

ಅವನ ಮುಖ ಇದ್ದಕ್ಕಿದ್ದಂತೆ ಗಂಭೀರವಾಯಿತು. ನನ್ನನ್ನ ಒಂದು ಅರೆಗಳಿಗೆ ದುರುಗುಟ್ಟಿ ನೋಡಿದ! ಏನೋ ತಪ್ಪುಮಾಡಿದಂತೆ ಆಯಿತು. ಹೇಳಿದ: "ನೀವು ಇಂಗೆ ಕೇಳತೀರಾ ಅಂತ ನನಗೆ ಗೊತ್ತಿರಲಿಲ್ಲ. ಎಂಗಸರೂ ಅಂದ್ರೆ ಏನೂ ಅಂತ ತಿಳಕೊಂಡೀರ!" ಸ್ವಲ್ಪಹೊತ್ತು ಸುಮ್ಮನಿದ್ದು, "ನಮ್ಮೂರಾಗ ದುರ್ಗ್ಗವ್ವನ ಗುಡಿ, ಅದ್ರಾಗದಾಳಲ್ಲ ಆಕೆ ಎಂಗಸಲ್ಲವ? ಆಕೆ ನಮಗೆಲ್ಲ 'ಅವ್ವ' ಅಲ್ಲವಾ ಸ್ವಾಮಿ? ಈ ಎಂಗಸರೂವೇ ಆ ಅವ್ವನ ಕುಲದೋರು. ನಮ್ಮಜ್ಜ ಹೇಳ್ತಿದ್ದ ಸ್ವಾಮಿ: ಅವರಪ್ಪನ ಕಾಲದಾಗೆ ಯಾರೂ ಎಂಗಸರೂ ಅಂತ ಬಾಯಾಗೇ ಅಂತಿರಲಿಲ್ಲವಂತೆ! ಅವರ ಎಸರಿನ ಮುಂದೆ

ಅವ್ವ, ಅಮ್ಮಣ್ಣಿ, ತಾಯೀ ಅಂತ ಕರೀತಿದ್ದರಂತೆ. ಆವಾಗ ಅವರಿಗಿದ್ದ ಮರ್ವ್ಯಾದೆನ ಈಗ ಯಾರು ಕೊಡತಾರೆ! ಬೂಮಿತಾಯಿ ಯಾರ ಸ್ವಾಮಿ? ಕಾಳಿಕಾ ಅಮ್ಮ ಯಾರು? ಇವರೆಲ್ಲ ಎಂಗಸರಲ್ಲವ? ಬೂಮಿತಾಯಿ ನಕ್ಕರೇ ಅಲ್ವ ನಮಗೆ ಒಂದು ಇಡಿ ಅನ್ನ? ಅಂತಾ ಅವ್ವನ ಕುಲದೋರನ ಏಟು ಸರ್ರನ 'ಎಂಗಸರು' ಅಂದುಬಿಟ್ಟಿರಿ ಸ್ವಾಮಿ! ಬಿಡ್ತು ಅನ್ನಿ. ಎಣ್ಣುಮಕ್ಕಳು ಅನ್ನಿ ಇನ್ನ . . . ದೇವೀಮಾತ್ಮೆ ಕೇಳಿಲ್ವ ಸ್ವಾಮಿ? . . . ಅಯ್ಯಯ್ಯ! ಏನ ಸ್ವಾಮಿ, ನಿಮ್ಮಂಥ ಓದ್ದೋರು ಮುಂಚೇ ತಿಳಕಬೇಕದನ. ಇಂತ ತಾಯೀ ಸೊರೂಪದ ಎಣ್ಣುಮಕ್ಕಳಿಗೆ ಯಾಕೆ ಸ್ವಾಮಿ ಕಟ್ಟು? ನಮಗೆಲ್ಲ ದಾರೀ ತೋರಸೋರೆ ಅವರು. ಅವರ ಸತ್ತ್ರೇವದಿಂದಲೇ ಮಳೆ ಬೆಳೆ, ಅನ್ನ ನೀರು. ಇಂದೆ ಅವರಿಗೆ ಬಾಳ ಗೋರವ ಕೊಡತಿದ್ದರಂತೆ. ಅವರೂ ಅಂಗೇ ನಡಕಣ ತಿದ್ದರಂತೆ. ಈಗ ಎಲ್ಲ ಎತ್ವಾಸ ಆಗೋಗೀತೆ . . . ಇನ್ನಮ್ಯಾಲೆ ಅಂಗೆಲ್ಲ ಎಂಗ್ಸು ಪಂಗ್ಸು ಅಂತ ಉಚಾಯ್ಸಿ ಕರೀಬ್ಯಾಡ, ಸ್ವಾಮಿ. ಅನ್ನ ಕೊಡೋ ಬೂಮಿತಾಯಿ, ನೀರು ಕೊಡೊ ಗಂಗೆತಾಯಿ ಕುಲದೋರನ್ನ! ನಿಮ್ಮವ್ವನ ಕುಲದವರಲ್ಲವ ಅವರೆಲ್ಲ?" ಎಂದು ಹೇಳಿ ಮುಗಿಸಿದ.

ಅವನ ಮುಂದೆ ನಾನು ಅತ್ಯಲ್ಪನಾಗಿ ನಿಂತೆ! ನಾಚಿಕೆಯಾಯಿತು! ಅವನ ದೃಷ್ಟಿಗೂ ನನ್ನ ದೃಷ್ಟಿಗೂ ಎಷ್ಟು ಅಂತರ! ಹಿಂದಿನ ಕಾಲದಲ್ಲಿ—ಬಸವಣ್ಣ, ಅಲ್ಲಮ ಇವರ ಜೊತೆಗೆ ಮಡಿವಾಳ ಕಸಬಿನ ಮಾಚಯ್ಯ ಮುಂತಾದ ಪುಣ್ಯ ಪುರುಷರ ನೆನಪಾಯಿತು. ಕಸಬಿನಲ್ಲಿ ಯಾವನಾದರೇನು, ಅಂತರಂಗ ಶುದ್ಧಿ ಅಲ್ಲವೆ ಮುಖ್ಯ!

'ಜಾತಿಹೀನನ ಮನೆಯ ಜ್ಯೋತಿ ತಾ ಹೀನವೇ?' ಎಂದರು ಬಸವಣ್ಣನವರು. ನಾನು ಅದನ್ನೇ 'ಜಾತಿಹೀನನ ಮನದ ಜ್ಯೋತಿ ತಾ ಹೀನವೇ?' ಎಂದುಕೊಳ್ಳುತ್ತ, ಕೆಂಚಪ್ಪನ ಕೈಗೆ ಎರಡಾಣೆ ಇರಿಸಿ, ನಮಸ್ಕಾರ ಹೇಳಿ ಹೊರಟೆ. ಕೆಂಚಪ್ಪ ತನ್ನ ಎಂದಿನ ನಗು ನಗುತ್ತ, 'ಥ್ಯಾಂಕು ಯು ಸಾರ್' ಎಂದ.

**ಎಂ. ಚಂದ್ರಶೇಖರಯ್ಯ**

# ನಾನು ತಿಂದಿರುವ ಹಣ್ಣುಗಳು

ಹಣ್ಣು, ಸಸ್ಯದ ನಾನಾ ರಸಗಳಿಂದ ಸೂರ್ಯನ ಶಾಖದ ಮೂಲಕ ತಯಾರಾದ ಪಕ್ವಪದಾರ್ಥ; ಪ್ರಕೃತಿಯ ನಳಪಾಕ. ಶಿಶುಗಳಿಂದ ಹಿಡಿದು ವೃದ್ಧರ ವರೆವಿಗೂ ಹಣ್ಣು ಆರೋಗ್ಯಕ್ಕೆ ಅತ್ಯಗತ್ಯ. "An apple a day, keeps the doctor away" ಎಂಬ ನಾಣ್ಣುಡಿಯನ್ನು ಎಲ್ಲ ಹಣ್ಣುಗಳಿಗೂ ಅನ್ವಯಿಸಬಹುದು. ಮನುಷ್ಯರಿಗೆ ಮಾತ್ರವಲ್ಲ, ಪ್ರಾಣಿಗಳಿಗೂ ಪಕ್ಷಿಗಳಿಗೂ ಹಣ್ಣು ಅವಶ್ಯಕ. ಅದರಲ್ಲಿಯೂ ಪಕ್ಷಿಗಳು ಹಣ್ಣಿಲ್ಲದಿದ್ದರೆ ಜೀವಿಸಲು ಸಾಧ್ಯವೇ ಇಲ್ಲ. ಅದಕ್ಕಾಗಿಯೇ ಅವು ಕಾಲಕಾಲಕ್ಕೆ ಸ್ಥಳ ಬದಲಾಯಿಸುತ್ತ ಹಣ್ಣು ಸಮೃದ್ಧಿಯಾಗಿರುವ ಕಡೆಗೆ ಹೋಗುತ್ತವೆ. ದುಂಬಿ ಹೇಗೆ ಹೂವು ಎಲ್ಲಿದ್ದರೂ ಬಿಡದೆ ಬಂದು ಎರಗುವುದೋ ಹಾಗೆ ಪಕ್ಷಿಗಳು ಹಣ್ಣು ಯಾವ ಮರದಲ್ಲಿದ್ದರೂ ಬಿಡದೆ ಬಂದು ಮುತ್ತಿಗೆ ಹಾಕುತ್ತವೆ. ಇವುಗಳ ಹಾವಳಿಯನ್ನು ತಡೆಯಲಾರದೆ, ಮಾಗಲು ಬಂದ ದಾಳಿಂಬೆ, ಒಳ್ಳೆಯ ಜಾತಿ ಕಿತ್ತಿಳೆ ಮುಂತಾದವಕ್ಕೆ ಕೆಲವರು ಚಿಕ್ಕ ಚೀಲಗಳನ್ನು ಹೊಲಿಸಿ ಪ್ರತಿಯೊಂದು ಹಣ್ಣಿಗೂ ಕಟ್ಟಿಸುವುದುಂಟು.

ಹಕ್ಕಿಗಳ ಹಾಗೆಯೇ ನನಗೂ ಹಣ್ಣೆಂದರೆ ಪ್ರಾಣ. ನನ್ನ ಪುಣ್ಯಕ್ಕೆ ನಾನು ಹುಟ್ಟಿ ಬೆಳೆದದ್ದು ಹಣ್ಣಿನ ತೌರುಮನೆಯಾದ, ಸೊಬಗಿನ ಬೀಡಾದ ಮಲೆನಾಡಿನಲ್ಲಿ. ಅಲ್ಲಿ ಯಾವ ಕಾಲದಲ್ಲಿ ನೋಡಲಿ, ಒಂದಲ್ಲ ಒಂದು ತರಹ ಹಣ್ಣು ಸಮೃದ್ಧಿಯಾಗಿ ದೊರೆಯುತ್ತದೆ. ಪಟ್ಟಣಗಳಲ್ಲಿರುವ ಹಾಗೆ ಮಾತೆತ್ತಿದರೆ ಒಂದು ಡಜ಼ನ್ನಿಗೆ ಇಷ್ಟು, ಒಂದು ಪೌಂಡಿಗೆ ಇಷ್ಟು, ಒಂದು ಸೇರಿಗೆ ಇಷ್ಟು ಎಂದು ನಿಗದಿ ಹೇಳುವ ವ್ಯಾಪಾರಿಗಳಾಗಲಿ, ಅದನ್ನು ತೆಗಳಿ ಚೌಕಾಶಿ ಮಾಡಿ ಗೋಣಗಿಕೊಂಡು ತಿನ್ನುವ ಗಿರಾಕಿಗಳಾಗಲಿ ಅಲ್ಲಿ ಇಲ್ಲ. ಅಲ್ಲಿ ಪ್ರತಿಯೊಂದು ಗಿಡ, ಮರ, ಬಳ್ಳಿಯೂ ಬಣ್ಣಬಣ್ಣದ, ರಸವತ್ತಾದ, ನಾವು ಕನಸಿನಲ್ಲಿಯೂ ಕಂಡರಿಯದಂತಹ ಹಣ್ಣುಗಳನ್ನು ಮೈತುಂಬ ಹೊತ್ತು, ಬಂದವರಿಗೆಲ್ಲ ನೀಡಿ, 'ನಿಮ್ಮ ಮನಸ್ತೃಪ್ತಿಯಾಗಿ ತಿಂದು ತಣಿಯಿರಿ' ಎನ್ನುವ ಹಾಗೆ ಫಲದ ಭಾರದಿಂದ ಬಾಗಿ ನಿಂತಿರುತ್ತವೆ. ಆ ನಿಸರ್ಗ ಸೌಂದರ್ಯವನ್ನು

ನೋಡಿದರೇ ಸಾಕು—ಮನಸ್ಸು ತಣಿದು, ಆನಂದವೂ ತೃಪ್ತಿಯೂ ಉಂಟಾಗುತ್ತದೆ. ಇದರಲ್ಲಿ ಇನ್ನೊಂದು ವಿಶೇಷ: ನಾವು ಪರೀಕ್ಷೆ ಮುಗಿದು ಬೇಸಿಗೆಯ ರಜಕ್ಕೆ ಮನೆಗೆ ಹೋದಾಗಲೇ ಹೆಚ್ಚು ತರಹ ಹಣ್ಣುಗಳು ದೊರೆಯುವುದು. ಅವಕ್ಕೂ ಕೂಡ, ಪಾಪ, ವ್ಯಾಸಂಗ ಮಾಡಿ ವಿಶ್ರಾಂತಿಗೆ ಬಂದ ವಿದ್ಯಾರ್ಥಿಗಳ ಮೇಲೆ ಕರುಣೆಯೆನೋ!

ಅದರಲ್ಲಿಯೂ ನಾನು ನಮ್ಮ ಮನೆಯ ಎಲ್ಲರಿಗಿಂತ ದೂರದ ಊರಿನಲ್ಲಿ ಓದುವೆನೆಂದು, ಮನೆಯ ಹಿರಿಯರಿಂದ ಹಿಡಿದು ಕಿರಿಯರ ವರೆಗೂ ನನ್ನ ಮೇಲೆ ಬಹಳ ಅಕ್ಕರೆ. ಬೇಸಿಗೆ ರಜದಲ್ಲಿ ನಾನು ಮನೆಗೆ ಹೋದ ಕ್ಷಣವೇ, ನನ್ನ ಚಿಕ್ಕ ತಮ್ಮ ತಂಗಿಯರು ತಾವು ತಿನ್ನದೆ ನನಗಾಗಿ ಶೇಖರಿಸಿದ್ದ ಹಣ್ಣುಗಳನ್ನು ಕೊಡುತ್ತಾರೆ. ನನ್ನ ಪುಟ್ಟ ತಮ್ಮನಂತೂ "ಅಕ್ಕ, ಈಗ ಯಾರು ಒಳ್ಳೆಯವರು? ಶಾಂತು ಹೆಚ್ಚಿಗೆ ಕೊಟ್ಟತೋ, ನಾನು ಹೆಚ್ಚಿಗೆ ಕೊಟ್ಟೆನೋ? ಇನ್ನೂ ಬೇಕಾದಷ್ಟಿದೆ; ನೀನಿದನ್ನೆಲ್ಲಾ ತಿನ್ನು. ಆಮೇಲೆ ತರುತ್ತೇನೆ. ಇನ್ನೊಂದು ಕಡೆ, ಯಾರಿಗೂ ಗೊತ್ತಿಲ್ಲದ ಕಡೆ, ಕೆಲವು ಗಿಡಗಳನ್ನು ನೋಡಿದ್ದೇನೆ. ನಿನ್ನ ಒಂದನ್ನೆ ಅಲ್ಲಿಗೆ ಕರೆದುಕೊಂಡು ಹೋಗ್ತೀನಿ. ನೀನು ಬರೋ ವರೆವಿಗೂ ಅದನ್ನ ಹಣ್ಣಾಗಿಸ್ಬೇಡಪ್ಪಾ ದೇವರೆ, ಅಂತಿದ್ದೆ" ಎಂದು ಒಂದೇ ಉಸಿರಿಗೆ ಹೇಳಿ, ನನ್ನಿಂದ ಶಭಾಸ್‌ಗಿರಿ ಪಡೆಯುವ ವರೆಗೂ ಅವನಿಗೆ ಸಮಾಧಾನವಿರುವುದಿಲ್ಲ. ನನ್ನ ತಮ್ಮ ತಂಗಿಯರ ಗಲಾಟೆ ಮುಗಿದ ಮೇಲೆ ಭದ್ರನ ಕಾಣಿಕೆ. ಭದ್ರ ನಮ್ಮ ಮನೆಯ ದನ ಕಾಯುವ ಹುಡುಗ. ಇವನು ತಂದು ಕೊಡುವ ಹಣ್ಣು ಎಲ್ಲರದಕ್ಕಿಂತಲೂ ಉತ್ತಮ. ಇವನು ಒಳ್ಳೆಯ ಮಾಗಿದ ಹಣ್ಣುಗಳನ್ನೆ ಆರಿಸಿ ಕಿತ್ತು, ಮುತ್ತುಗದೆಲೆಯ ಚೀಲ ಹೊಲಿದು, ಅದರಲ್ಲಿ ಆ ಹಣ್ಣುಗಳನ್ನು ತುಂಬಿ 'ಪ್ಯಾಕ್' ಮಾಡಿ ತಂದುಕೊಡುತ್ತಾನೆ. ಇವನು ಆರಿಸಿ ತಂದ ಹಣ್ಣು ತಿನ್ನುವುದಕ್ಕೂ ಪುಣ್ಯ ಬೇಕು.

ಮನೆಗೆ ಹೋದ ಮಾರನೆಯ ದಿವಸದಿಂದ ಬೆಳಗ್ಗೆ ವ್ಯಾಯಾಮಕ್ಕಾಗಿ ಓಡುವುದಕ್ಕೆ ಹೋಗುತ್ತೇವೆಂದೂ, ಸಾಯಂಕಾಲ ಹಾಗೇ ತಿರುಗಾಡಲು ಹೋಗುತ್ತೇವೆಂದೂ ಹೇಳಿ, ಹಣ್ಣುಗಳು ಬಿಡುವ ಸ್ಥಳಕ್ಕೆ ಹೋಗುವುದುಂಟು. ಒಂದೊಂದು ಹಣ್ಣಿಗೂ ಒಂದೊಂದು ಸ್ಥಳ ಪ್ರಸಿದ್ಧಿ. ಆ ಸ್ಥಳಗಳಿಗೆ—ಅಲ್ಲಿಯ ಮಾತಿನಲ್ಲೇ ಹೇಳುವುದಾದರೆ 'ಬಾರೆ' ಅಥವಾ 'ದಿಬ್ಬ' ಎಂದು ಕರೆಯು

ತ್ತಾರೆ. ಅಲ್ಲಿ ದೊರಕುವ ಕಾಡುಹಣ್ಣುಗಳಲ್ಲಿ ಒಂದು ವೈಚಿತ್ರ್ಯ: ಹೆಚ್ಚು ಕಡಮೆ ಎಲ್ಲಾ ಹಣ್ಣುಗಳ ಬಳ್ಳಿಗಳೂ ಗಿಡಗಳೂ ಮರಗಳೂ ಮುಳ್ಳಿನಿಂದ ತುಂಬಿರುತ್ತವೆ. ಹುಷಾರಿಂದ ಹಣ್ಣುಗಳನ್ನು ಬಿಡಿಸಿಕೊಳ್ಳಬೇಕು.

ನಾನು ತಿಂದಿರುವ ಕಾಡುಹಣ್ಣುಗಳಲ್ಲಿ ಬಹಳ ಪ್ರಸಿದ್ಧಿ ಪಡೆದಿರುವುದು 'ಚೊಟ್ಟೆಹಣ್ಣು.' ಇದು ಕೆಂಪು ಮಿಶ್ರವಾದ ಬಿಳುಪಿನ ಚಿಕ್ಕ ಗುಂಡುಗುಂಡಾದ ಸಿಹಿ ಹಣ್ಣು. ಇದನ್ನು ಬಹಳ ತಿಂದರೆ ಬಾಯಾರಿಕೆ ಆಗುತ್ತದೆ. ಅದಕ್ಕೆ ಪರಿಹಾರವೆಂಬಂತೆ ಮತ್ತೊಂದು ತರಹ ಕೆಂಪುಮಿಶ್ರವಾದ ಕಂದು ಬಣ್ಣದ 'ಮರಕ್ಲ್‌ಹಣ್ಣು' ಎನ್ನುವ ಸಿಹಿ ಬೆರೆತ ಹುಳಿ ಹಣ್ಣು ದೊರೆಯುತ್ತದೆ. 'ಅಬುಲ್‌ಹಣ್ಣು' ಎನ್ನುವುದು ಇನ್ನೊಂದು: ಸ್ವಲ್ಪ ಕಪ್ಪಗೆ ಸಣ್ಣ ನೇರಳೇ ಹಣ್ಣಿನ ಹಾಗೆ ಇರುತ್ತದೆ; ಬಹು ಸಿಹಿಯಾದ ಹಣ್ಣು. 'ಕವಳಿ ಹಣ್ಣು' ಜೀರಿಗೆ ಪೆಪ್ಪರ್‌ಮಿಂಟ್ ಹಾಗೆ, ಅದಕ್ಕಿಂತ ಸ್ವಲ್ಪ ದಪ್ಪಗೆ, ಕಪ್ಪಗೆ, ಸಿಹಿಯಾಗಿರುತ್ತದೆ. ಇದನ್ನು ಒಂದೊಂದಾಗಿ ಮುಳ್ಳಿನ ಗಿಡದಿಂದ ಕಿತ್ತು ತಿನ್ನುವುದು ಸ್ವಲ್ಪ ಕಷ್ಟ. ಇನ್ನೊಂದು 'ಗರ್ಜಿಗೆ' ಹಣ್ಣು; ಇದರಲ್ಲಿ ಸಣ್ಣ ಗರ್ಜಿಗೆ, ದಪ್ಪ ಗರ್ಜಿಗೆ ಎಂದು ಎರಡು ವಿಧ. ಇವು 'ಪ್ಲಮ್' ಹಣ್ಣಿನ ಮಾದರಿ ಇರುತ್ತವೆ; ಬಹಳ ಸಿಹಿ, ಬಹಳ ರುಚಿ. ದೊಡ್ಡ ದೊಡ್ಡ ಮುಳ್ಳಿನ ಬಳ್ಳಿಗಳು ಮರಕ್ಕೆ ಸುತ್ತಿಕೊಂಡು ಮೈತುಂಬ ಈ ಹಣ್ಣು ಕಾಯಿಗಳನ್ನು ಹೊತ್ತಿರುತ್ತವೆ.

'ಬಿಕ್ಕೆ ಹಣ್ಣು'—ಇದು ದಪ್ಪ ಅಡಿಕೆಕಾಯಿ ಗಾತ್ರ ಇರುತ್ತದೆ. ಇದರ ಹಣ್ಣು ಆರಿಸುವುದೇ ಒಂದು ವಿಧಾನ. ಇದರ ಗಿಡ ಮೂರು ಅಡಿಯಿಂದ ಐದರ ವರೆಗೂ ಪೊದರು ಪೊದರಾಗಿ ಬೆಳೆಯುತ್ತದೆ. 'ಎಲೆಗೊಂದು ಕಾಯಿ' ಎನ್ನುವ ಹಾಗೆ ಮೈತುಂಬ ಕಾಯಿ. ಈ ಗಿಡವನ್ನು ಗಟ್ಟಿಯಾಗಿ ಅಲ್ಲಾಡಿಸಬೇಕು. ಆಗ ಹಣ್ಣಾದ ಕಾಯಿಗಳೆಲ್ಲಾ ಕೆಳಕ್ಕೆ ಉದುರುತ್ತವೆ. ಬಿದ್ದ ಕಾಯಿಗಳನ್ನು ಆರಿಸಿಕೊಂಡು, ಅದರ ತುದಿಯನ್ನು ಸ್ವಲ್ಪ ಕಡಿದು ತೂತು ಮಾಡಿ, ಒಳಗಿನ ತಿರುಳನ್ನು ತೆಗೆದು ತಿನ್ನಬೇಕು. ಬಹು ಸೊಗಸು. ಇನ್ನೊಂದು ಹಣ್ಣನ್ನು 'ಗೌರಿಹಣ್ಣು' ಎಂದು ಕರೆಯುತ್ತಾರೆ. ಇದು ಒಂದೂವರೆ ಅಂಗುಲ ಉದ್ದವಾಗಿಯೂ ಒಂದು ಸಣ್ಣ ಬಳಪದ ದಪ್ಪವಾಗಿಯೂ ಇರುತ್ತದೆ. ಈ ಹಣ್ಣು ತುಂಬ ರುಚಿ. ಮೇಲೆ ಹೇಳಿದ ಎರಡು ತರಹ ಹಣ್ಣುಗಳೂ ಗೌರೀಹಬ್ಬದ ಸಮಯದಲ್ಲಿ ದೊರೆಯುತ್ತವೆ.

ನಾನು ತಿಂದಿರುವ ಗೇರು ಹಣ್ಣುಗಳಲ್ಲಿ ಎರಡು ತರಹ: ಒಂದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರುವ, ಕೆಂಪು ಅಥವಾ ಹಳದಿ ಬಣ್ಣದ ದಪ್ಪ ಗೇರು ಹಣ್ಣು. ಇನ್ನೊಂದು ಸಾಧಾರಣ ನಿಂಬೆಹಣ್ಣಿನ ಗಾತ್ರದ್ದು. ಸಣ್ಣ ಗೇರು ಹಣ್ಣಿನ ತುದಿಯಲ್ಲಿ ದಪ್ಪ ಗೇರುಹಣ್ಣಿಗೆ ಇರುವ ಹಾಗೆಯೇ ಗೇರುಕಾಯಿ ಇರುತ್ತದೆ. ಆದರೆ ಆ ಕಾಯ ಒಳಗೆ ಪಪ್ಪು ಇರುವುದಿಲ್ಲ. ಆ ತರಹ ಚಿಕ್ಕ ಗೇರು ಹಣ್ಣುಗಳನ್ನು ತಂದು, ಅದರ ಬೀಜ ಅಥವಾ ಕಾಯನ್ನು ಕಿತ್ತೆಸೆದು, ಆ ಹಣ್ಣುಗಳನ್ನೆಲ್ಲಾ ಒಂದು ದಾರಕ್ಕೆ ಪೋಣಿಸಿ ಸರ ಮಾಡಿ, ಮನೆಯ ಹೆಂಚಿನ ಮೇಲೆ ಎಸೆಯಬೇಕು. ಅದು ಬಿಸಿಲಿನಲ್ಲಿ ಚೆನ್ನಾಗಿ ಒಣಗಿ, ಗಟ್ಟಿಯಾದ ಮೇಲೆ ಅದನ್ನು ತೆಗೆದು, ಒಣಗಿದ ಹಣ್ಣುಗಳನ್ನು ದಾರದಿಂದ ಬಿಡಿಸಿಕೊಂಡು ಹಾಲಿನಲ್ಲಿ ನೆನಸಿ ತಿನ್ನಬಹುದು; ಹಾಗೆಯೂ ತಿನ್ನಬಹುದು. ಒಂದು ತರಹ ರುಚಿಯಾಗಿರುತ್ತದೆ. ಹೀಗೆ ಹೆಂಚಿನ ಮೇಲೆ ಒಣಗಹಾಕಿದ್ದ ಸರಗಳನ್ನು ಒಂದೊಂದು ಸಲ ಕಾಗೆಯಾಗಲಿ, ಕೋತಿಯಾಗಲಿ, ಅಥವಾ ಮನೆಯ ಎರಡು ಕಾಲಿನ ಬೆಕ್ಕುಗಳೇ ಆಗಲಿ, ಒಣಗಹಾಕಿದವರಿಗೆ ತಿಳಿಸದೆಯೆ ಲಪಟಾಯಿಸುವುದೂ ಉಂಟು.

ಮತ್ತೆ ನಾನು ತಿಂದಿರುವುದು ಎರಡು ತರಹದ ಈಚಲು ಹಣ್ಣು: ಒಂದು —ಈಚಲಮರದಲ್ಲಿ ಬಿಡುವ ದಪ್ಪನಾದ ಹಣ್ಣು; ಮತ್ತೊಂದು—ಈಚಲಗಿಡವೆಂದು—ಅದು ಎರಡಡಿ ಎತ್ತರ ಬೆಳೆಯುತ್ತದೆ—ಅದರಲ್ಲಿ ಗೊನೆ ಹೊರಟು ಕಾಯಿ ಬಿಡುತ್ತದೆ. ಆ ಬಲಿತ ಗೊನೆಗಳನ್ನು ಕೊಯ್ದು ತಂದು, ರಾತ್ರೆ ಇಬ್ಬನಿಯಲ್ಲಿಟ್ಟರೆ ಬೆಳಗಿನ ಹೊತ್ತಿಗೆ ಗೊನೆ ತುಂಬಾ ಕಪ್ಪಗಿನ ಹಣ್ಣುಗಳಾಗಿರುತ್ತವೆ. ಈ ಹಣ್ಣುಗಳು ದಪ್ಪ ಈಚಲ ಹಣ್ಣಿಗಿಂತ ಚಿಕ್ಕವಾಗಿಯೂ ಸಿಹಿಯಾಗಿಯೂ ಇರುತ್ತವೆ.

ಇನ್ನು ನೇರಿಳೆ, ಮಾವು, ಸೀಬೆ, ಹಲಸಿನ ಮರಗಳು ಹಾದಿಬೀದಿಯಲ್ಲೆಲ್ಲಾ ಸಿಕ್ಕುತ್ತವೆ. ಪನ್ನೇರಳೆ ಹಣ್ಣು ಅಲ್ಲಲ್ಲಿ ಸಿಕ್ಕುತ್ತದೆ. ನೇರಿಳೆಯಲ್ಲಿ ನಾನಾ ವಿಧ. ಅದರಲ್ಲಿ ನಾನು ತಿಂದಿರುವುದು ಒಂದು ನಾಲ್ಕು ಬಗೆ: ಒಂದು ಅತಿ ಚಿಕ್ಕದಾಗಿ, ಬಹು ಸಿಹಿಯಾಗಿ ಇರುತ್ತದೆ. ಇದನ್ನು 'ನಾಯಿ ನೇರಳೆ' ಎಂದು ಕರೆಯುತ್ತಾರೆ. ಇನ್ನೊಂದು ದುಂಡುದುಂಡಗೆ, ಮತ್ತೊಂದು ಉದ್ದನಾಗಿ ಇರುತ್ತದೆ. ಮಗದೊಂದು ದಪ್ಪ ನಿಂಬೆಕಾಯ ಗಾತ್ರದಷ್ಟಿರುತ್ತದೆ.

ಇದನ್ನು 'ಜಮ್ಮುನೇರಿಳೆ' ಎನ್ನುತ್ತಾರೆ. ಇದನ್ನು ನಾಲ್ಕೈದು ತಿಂದರೆ, ಮಾರನೆಯ ದಿವಸವೇ ಜ್ವರ, ಕೆಮ್ಮುಲು ಬಂದು, ಡಾಕ್ಟರನ್ನು ಮನೆಗೆ ಬರಮಾಡಿಕೊಳ್ಳಬೇಕಾಗುತ್ತದೆ. ಮಾವಿನ ಹಣ್ಣಿನಲ್ಲಿ ನಾನಾಬಗೆಗಳಿದ್ದರೂ, ಒಂದೂ ಹೇಳಿಕೊಳ್ಳುವಷ್ಟು ರುಚಿಯಾದದ್ದಿಲ್ಲ. ಹೀಗೇ ಹಲಸಿನ ಹಣ್ಣಿನಲ್ಲಿ ನಾನಾ ವಿಧ: ಒಂದು ಹೆಬ್ಬಲಸು; ಇದು ಸುಲಿದ ದಪ್ಪ ತೆಂಗಿನ ಕಾಯಷ್ಟಿರುತ್ತದೆ. ಇದರ ಸಿಪ್ಪೆಯನ್ನು ಕೈಯಿಂದ ಸುಲಿದರೆ ಒಳಗೆ ಗೋಲಿಗಾತ್ರದ, ಕೆಂಡಸಂಪಿಗೆಯ ಬಣ್ಣದ, ಸಿಹಿಯಾದ ತೊಳೆಗಳಿರುತ್ತವೆ. ಇನ್ನೊಂದು ಜಾತಿ ಸಾಧಾರಣ ಒಂದು ಸಣ್ಣ ಹಂಡೆಯ ದಪ್ಪದಷ್ಟು. ಇದನ್ನು ನಾನಾಕಡೆಗಳಲ್ಲಿ ಕೊಚ್ಚಿ ಹಾಕಿದರೆ, ಅಲ್ಲೊಂದು ಇಲ್ಲೊಂದು, ಎರಡು ಮೂರು, ಚೊಂಬಿನ ಗಾತ್ರದ ತೊಳೆಗಳು ದೊರೆಯುತ್ತವೆ. ಇದು ಸಾಧಾರಣ ಸಿಹಿಯಾಗಿರುತ್ತದೆ. ಈ ಹಲಸಿನ ಹಣ್ಣನ್ನು 'ಹೋರಿಗ' ಎಂದು ಕರೆಯುತ್ತಾರೆ. ಇನ್ನೊಂದು ಜಾತಿಯಲ್ಲಿ, ಹಣ್ಣನ್ನು ಕುಯ್ಯುವ ಬದಲು, ಕಿತ್ತಳೆ ಹಣ್ಣನ್ನು ಸುಲಿಯುವ ಹಾಗೆ ಸಿಪ್ಪೆ ಸುಲಿದು ಒಳಗಿನ ತೊಳೆಗಳನ್ನು ಬಿಡಿಸುತ್ತಾರೆ. ಸಿಪ್ಪೆ ಬಹು ಮೃದು. ತೊಳೆಗಳು ಬಹಳ ಸಿಹಿಯಾಗಿ, ಮೃದುವಾಗಿ (ಲೋಳೆ ತರಹ) ಗಂಟಲಿಗೆ ಸಿಕ್ಕಿಕೊಳ್ಳುವ ಹಾಗೆ ಇರುತ್ತವೆ. ಇದರಿಂದ ಹಲವು ಬಗೆಯ ತಿಂಡಿಗಳನ್ನು ಮಾಡುತ್ತಾರೆ. ಈ ಹಣ್ಣಿಗೆ 'ಬಿಳುವ' ಎಂದು ಹೆಸರು. ಎಲ್ಲಾ ಕಡೆಯೂ ದೊರೆಯುವಂತಹದಕ್ಕೆ 'ಬಕ್ಕೆ' ಎನ್ನುತ್ತಾರೆ. ಅದರಲ್ಲಿಯೂ ನಾನಾ ವಿಧ. ಕೆಲವು ಹಣ್ಣಿನ ತೊಳೆಗಳು ಕೆಂಪಗೆ ಸಿಹಿಯಾಗಿ, ಕೆಲವು ಬೆಳ್ಳಗೆ ಸಪ್ಪೆಯಾಗಿ ಇರುತ್ತವೆ. ಈ ಮೇಲೆ ಹೇಳಿದವುಗಳೆಲ್ಲಾ ನಮ್ಮ ಮಲೆನಾಡಿನ ಕಾಡಿನಲ್ಲಿ ದೊರೆಯುವ ಹಣ್ಣುಗಳು.

ಇನ್ನು, ವ್ಯವಸಾಯ ಮಾಡಿ ಬೆಳೆಸಿದ ಹಣ್ಣುಗಳ ವಿಷಯ. ಕಿತ್ತಳೆ, ಚಕ್ಕೋತ, ಮೂಸಂಬಿ, ಸಾತುಗುಡಿ, ಮಾದಲ ಹಣ್ಣು, ಅನಾನಸ್, ಇವನ್ನು ಮಲೆನಾಡಿನಲ್ಲಿ ಎಲ್ಲರೂ ಬೆಳೆದು ಸಂತೃಪ್ತಿಯಾಗಿ ತಿನ್ನುತ್ತಾರೆ. ಮತ್ತೆ ಬಾಳೆಹಣ್ಣು: ಬಾಳೆಯನ್ನು ಪ್ರತಿಯೊಬ್ಬರೂ ತಮ್ಮ ಮನೆಯ ಹಿತ್ತಲಿನಲ್ಲಿ ಬೆಳಸುತ್ತಾರೆ. ಅವುಗಳಲ್ಲಿ ಪುಟ್ಟಬಾಳೆ, ರಸಬಾಳೆ, ಚಂದ್ರಬಾಳೆ, ಕರಿ ಬಾಳೆ ಇವು ಬಹು ಸಿಹಿಯಾಗಿ ಬಾಯಲ್ಲಿ ಕರಗುವ ಹಾಗೆ ಇರುತ್ತವೆ. ಕಲ್ಲು ಬಾಳೆ—ತಿನ್ನಲು ಅಷ್ಟು ಚೆನ್ನಾಗಿರುವುದಿಲ್ಲ; ಸೀಬೆಹಣ್ಣಿನ ಬೀಜದ ಹಾಗೆ,

ಮಧ್ಯೆ ಗಟ್ಟಿಯಾದ ಬೀಜಗಳಿರುತ್ತವೆ. ದೆವ್ವಬಾಳೆ—ಇದು ತಿನ್ನಲು ಸ್ವಲ್ಪವೂ ಚೆನ್ನಾಗಿರುವುದಿಲ್ಲ. ಪಚ್ಚಬಾಳೆ, ಸೇಲಂಬಾಳೆ, ಇವನ್ನು ಬೆಂಗಳೂರಿನಲ್ಲಿ ತಿಂದಿದ್ದೇನೆ. ಏನೋ ಇವೆ.

ಒಂದು ಸಲ ಮಂಗಳೂರಿಗೆ ಹೋಗಿದ್ದಾಗ 'ತಾಟಿನುಂಗು' ಎಂಬ ಒಂದು ಬಗೆಯ ಹಣ್ಣನ್ನು ತಿಂದೆವು. ಇದು ಬಾಳೆಯ ಹಣ್ಣಿನ ಹಾಗೆ ಗೊನೆ ಗೊನೆಗಳಾಗಿ ಬಿಡುತ್ತದೆ. ಗೊನೆಯಿಂದ ಕಾಯನ್ನು ಕಿತ್ತು, ಚಾಕಿನಿಂದ ಮೇಲಿನ ಸಿಪ್ಪೆಯನ್ನು ಹೆರೆದರೆ, ಒಳಗೆ ಬಿಳಿಯ ತೊಳೆಗಳಿರುತ್ತವೆ. ಇದು ಸೆಕೆಕಾಲದಲ್ಲಿ ತಿನ್ನಲು ಹಿತವಾಗಿರುತ್ತದೆ. ಒಂದು ಗೊನೆಯಲ್ಲಿ ನೂರಾರು ಕಾಯಿಗಳಿರುವುದುಂಟು.

ನೀಲಗಿರಿಗೆ ಹೋದಾಗ ಕೆಲವು ಹಣ್ಣು ತಿಂದಿದ್ದೇನೆ. ಇಂಡಿಯಾದಲ್ಲಿ ಕಾಶ್ಮೀರವನ್ನು ಬಿಟ್ಟರೆ ಹಣ್ಣಿಗೆ ಪ್ರಸಿದ್ಧಿ ಹೊಂದಿರುವುದು ನೀಲಗಿರೀನೆ. ಇಲ್ಲಿಯ ತಂಪಾದ ವಾಯುಗುಣಕ್ಕೆ ಮುನ್ನೂರ ಅರುವತ್ತೈದು ದಿನವೂ ಹಣ್ಣು ದೊರಕುತ್ತದೆ. ಇಲ್ಲಿ ಬಹು ಪ್ರಸಿದ್ಧವಾದ, ಬಹು ಬೆಲೆಯಾದ ಹಣ್ಣೆಂದರೆ 'ಮ್ಯಾಂಗಿಸ್ಟನ್.' ಈ ಹಣ್ಣು ಮೇಲುನೋಟಕ್ಕೆ ದಾಳಿಂಬೆ ಹಣ್ಣಿನ ಹಾಗೆ ಕಾಣಿಸುತ್ತದೆ. ಇದನ್ನು - ಚಾಕಿನಿಂದ ಕೊಯ್ದರೆ, ಒಳಗೆ ಕಿತ್ತಿಳೆಹಣ್ಣಿನ ತೊಳೆಯ ಹಾಗೆ ಬಿಳಿಯ, ಸಿಹಿಯಾದ ತೊಳೆಗಳಿರುತ್ತವೆ. ಇದು ದೇಹಕ್ಕೆ ಪುಷ್ಟಿ ಕೊಡುತ್ತದೆ. ಇದರ ಸಿಪ್ಪೆಯನ್ನು ಒಣಗಿಸಿ ಔಷಧಿಗೆ ಉಪಯೋಗಿಸು ತ್ತಾರಂತೆ.

ಇನ್ನೊಂದು 'ಟೀ ಟೊಮೇಟೋ.' ಇದು ಬಣ್ಣದಲ್ಲಿ, ಆಕಾರದಲ್ಲಿ ಹಣ್ಣಾದ ಬಾದಾಮಿ ಕಾಯಿಯ ಹಾಗೆ ಇರುತ್ತದೆ. ಚೆನ್ನಾಗಿ ಹಣ್ಣಾದಾಗ ಅಚ್ಚ ಮೆರೂನ್ ಬಣ್ಣವಿರುತ್ತದೆ. ಅದನ್ನು ತೆಗೆದುಕೊಂಡು ಎರಡು ಹಸ್ತಗಳ ಮಧ್ಯದಲ್ಲಿಟ್ಟು ಚೆನ್ನಾಗಿ ಹೊಸಗಬೇಕು. ಆಗ ಹಣ್ಣು ಸ್ವಲ್ಪ ಮೆದುವಾಗು ತ್ತದೆ. ಆಮೇಲೆ, ಹಣ್ಣಿನ ಕೊನೆಯನ್ನು ಚಾಕುವಿನಿಂದ ಸ್ವಲ್ಪ ಕುಯ್ದು ಒಳಗಿನ ರಸಮಿಶ್ರ ತಿರುಳನ್ನು ಹೀರಿಕೊಳ್ಳಬೇಕು. ಸಿಹಿಯಾಗಿರುತ್ತದೆ. ಇದರ ಮೇಲಿನ ಸಿಪ್ಪೆ ಬಹಳ ದಪ್ಪ. ಅದು ತಿನ್ನಲು ಬಾರದು, ಬಹು ಕಹಿ. ಮತ್ತೊಂದು ಹಣ್ಣು 'ಪ್ಲಮ್ಸ್.' ಇದು ಇಂಗ್ಲಿಷ್ ಬೆರ್ರಿ ಹಣ್ಣಿನ ಜಾತಿಗೆ ಸೇರಿದ್ದು. ನಿಂಬೆ ಹಣ್ಣಿನ ಗಾತ್ರದಷ್ಟಿರುತ್ತದೆ. ಚೆನ್ನಾಗಿ ಪಕ್ವವಾದಾಗ

ಕೆಂಪಗೂ, ಬಹು ಸಿಹಿಯಾಗಿಯೂ ಇರುತ್ತದೆ. ಮತ್ತೊಂದು ತರಹದ್ದು 'ಪೇರಿ' ಹಣ್ಣು. ಇದರಲ್ಲಿ ಎರಡು ತರಹ: ಒಂದು 'ನೀರ್ ಪೇರಿ.' ಇದು ಬಹಳ ದಪ್ಪ, ತಿಂದರೆ 'ಕರಮ್, ಕರಮ್' ಎಂದು ಶಬ್ದವಾಗುತ್ತದೆ. ಅಷ್ಟೇನೂ ರುಚಿಯಾಗಿರುವುದಿಲ್ಲ. ಹೆಚ್ಚಿಗೆ ತಿಂದರೆ ಶೀತವಾಗುತ್ತದೆ. ಇನ್ನೊಂದು 'ವಾಲ್ ಪೇರಿ.' ಇದು ಬಹು ಮೃದು, ಬಾಯಲ್ಲಿಟ್ಟರೆ ಕರಗುವಂತಹ ಹಣ್ಣು. ಇನ್ನೊಂದು 'ಪೀಚಸ್.' ಇದು ಹಣ್ಣಾದಾಗ ಹಸಿರು ಮಿಶ್ರ ಹಳದಿ ಬಣ್ಣಕ್ಕಿರುತ್ತದೆ. ಸ್ವಲ್ಪ ಒಗರಾಗಿ, ಕಹಿಯಾಗಿ ಇರುತ್ತದೆ. ಈ ಹಣ್ಣಿನೊಳಗೆ ಒಂದು ಬೀಜ ಉಂಟು. ಅದನ್ನು ಚಚ್ಚಿದರೆ ಒಳಗೆ ಬಾದಾಮಿಯಂತಹ ತಿರುಳು ಸಿಕ್ಕುತ್ತದೆ. ಸಪೋಟಗಳಲ್ಲಿ ನೀಲಗಿರಿಯ ಸಪೋಟ ಬಹು ಚೆನ್ನ. ಮೇಲೆ ಹೇಳಿದ ಹಣ್ಣುಗಳನ್ನು ತಿನ್ನಬೇಕಾದರೆ ನೀಲಗಿರಿ, ಕೂನ್ನೂರು ಅಥವಾ ಊಟಿ ಮಾರ್ಕೆಟ್ಟಿಗೆ ಹೋಗಬೇಕು.

ಇನ್ನು ಮಾವಿನ ಹಣ್ಣಿನಲ್ಲಿ, ರಸಪುರಿ, ಬಾದಾಮಿ, ನೀಲಂ, ಮೀಸೆ ಮಾವು, ಗಿಣಿಮೂತಿ, ಮಲ್ಗೋವಾ; ಸೇಬಿನ ಹಣ್ಣಿನಲ್ಲಿ ಕಾಶ್ಮೀರ್ ಸೇಬು, ಕಾಬುಲ್ ಸೇಬು, ಬೆಂಗಳೂರು ಸೇಬು; ದ್ರಾಕ್ಷಿಯಲ್ಲಿ ಕಪ್ಪು ದ್ರಾಕ್ಷಿ, ಬಿಳಿ ದ್ರಾಕ್ಷಿ, ಕಾಬುಲ್ ದ್ರಾಕ್ಷಿ; ಸೀಬೆಹಣ್ಣಿನಲ್ಲಿ ಚಂದ್ರಸೀಬೆ, ತುಮಕೂರು ಸೀಬೆ, ಅಲಹಾಬಾದ್ ಸೀಬೆ; ಬಟರ್ ಫ್ರೂಟ್; ಅಂಜೂರ; ದಾಳಿಂಬೆ; ಟೊಮೆಟೋ; ಕರ್ಬೂಜ; ಕಲ್ಲಂಗಡಿ; ಸೀತಾಫಲ; ರಾಮಫಲ; ಪರಂಗಿಹಣ್ಣು; ಬೇಲದ ಹಣ್ಣು; ಎಲಚಿ ಹಣ್ಣು ಇವುಗಳನ್ನು ಬೆಂಗಳೂರು ಮೈಸೂರುಗಳಲ್ಲಿ ತಿಂದಿರುತ್ತೇನೆ.

ಕೆಲವು ಹಣ್ಣುಗಳನ್ನು ಡಬ್ಬಗಳಲ್ಲಿ ಶೇಖರಿಸಿ ಕಾಪಾಡುತ್ತಾರೆ. ಅವುಗಳಲ್ಲಿ ಕೆಲವು ಒಗರಾಗಿ, ಕೆಲವು ಹುಳಿಯಾಗಿ ಇರುತ್ತವೆ. ಇವುಗಳ ಹೆಸರು ಬಹು ವಿಚಿತ್ರ. ಡಬ್ಬದಲ್ಲಿ ಶೇಖರಿಸಿದ ಈ ಹಣ್ಣುಗಳಲ್ಲಿ 'ಫ್ರೂನ್ಸ್' ಒಂದು ಮಾತ್ರ ನನಗೆ ಇಷ್ಟ.

ಇಲ್ಲಿ ಹೇಳಿರುವ ಎಲ್ಲ ಹಣ್ಣುಗಳನ್ನೂ ನಾನು ತಿಂದಿದ್ದೇನೆ. ಆದರೂ ಹಣ್ಣಿನ ಆಸೆ ತೀರಿಲ್ಲ. ಹೇಗಿರುತ್ತದೋ ನೋಡೋಣವೆಂದು ಲಂಟಾನದ ಮತ್ತು ಕಾಫಿಯ ಹಣ್ಣನ್ನು ಸಹ ತಿಂದಿದ್ದೇನೆ. ಇದರಲ್ಲಿ ಅತಿಶಯೋಕ್ತಿ ಏನೂ ಇಲ್ಲ. ಇನ್ನೂ ಕೆಲವು ಹಣ್ಣುಗಳನ್ನು ತಿಂದಿದ್ದರೂ ಅವುಗಳ ಹೆಸರು ಮರೆತು

ಹೋಗಿದೆ. ಹಿಂದೆ ಹೇಳಿದ ಕಾಡು ಹಣ್ಣುಗಳಲ್ಲಿ ಇನ್ನೂ ಕೆಲವು ವಿಧಗಳಿವೆ. ಆದರೆ ಅವುಗಳ ನಿಜವಾದ ಹೆಸರು ನನಗೆ ಗೊತ್ತಿಲ್ಲದ್ದರಿಂದಲೂ, ನಾನೂ ನನ್ನ ತಮ್ಮಂದಿರೂ ಅವಕ್ಕೆ ಚಿತ್ರವಿಚಿತ್ರ ಹೆಸರು ಇಟ್ಟಿರುವುದರಿಂದಲೂ ಬರೆದರೆ ಯಾರಾದರೂ ತಿಳಿದವರು ನಕ್ಕಾರು ಎಂದು ಬರೆದಿಲ್ಲ. ಒಂದೊಂದು ಸಲ ನನಗೆ ಹಾಗೇ ಅನಿಸುತ್ತದೆ: ಹಕ್ಕಿಗಳಿಗೆ ಹೇಗೋ ಹಾಗೆಯೇ ಮನುಷ್ಯರಿಗೂ ಹಣ್ಣೇ ಸಹಜವಾದ ಆಹಾರವಾಗಿಬಿಟ್ಟರೆ ಎಷ್ಟು ಚೆನ್ನಾಗಿರುತ್ತದೆ ಎಂದು.

**ಎಂ. ಆರ್. ವಿಮಲಾ**

# ಪೆನ್ಸಿಲಿನ ಆಶೆ

"ರಜಾ ಕೊಡೋದು ಮಜಾ ಮಾಡೋಕೆ" ಅಂತ ಕೈ ಎತ್ತುವವರೆಲ್ಲಾ ಎತ್ತಲಿ. 'ರಜಾ ದಿವಸಾನೂ ಸಜ ಇಲ್ಲದೆ ಇದ್ದರೆ ಸಾಕಪ್ಪಾ' ಅಂತ ನಾನು ಹೇಳುತೇನೆ. ವೇಳಾಪತ್ರಿಕೆಯ ಅಧೀನಕ್ಕೆ ಅಗಪಟ್ಟಿದ್ದ ಈ ಶರೀರ ರಜಾದಿನದಲ್ಲಿ ಆರಾಮವಾಗಿ ಮನಸ್ಸು ಹೇಳಿದ ಹಾಗೆ (ಒಂದು ಮೇರೆಯಲ್ಲಿ) ನಡೆಯುವುದಕ್ಕೆ ಅವಕಾಶವಿದ್ದರೆ ಸಾಕೂಂತ ಅನ್ನಿಸುತ್ತದೆ. ರಜಾ ದಿನವೆಂದರೆ ಚಲನವಲನ, ನಡೆ ನುಡಿ, ಆಚಾರ ವ್ಯವಹಾರ—ಈ ಮೂರು ವಿಷಯಗಳಲ್ಲಿ ಅನಧೀನರಾಗಿ ವರ್ತಿಸುವ ಸದವಕಾಶ ದೊರೆತರೆ ಆ ರಜೆಯನ್ನು ಆನಂದಮಯವಾಗಿ ಕಳೆದೆವೆನ್ನಬಹುದು. ನಿತ್ಯ ಸವೆಸಿದ ದಾರಿಗೆ ನಮಸ್ಕಾರ ಹಾಕಿ, ಇಷ್ಟಬಂದ ಕಡೆ, ಕಾಲೆಳೆದ ಕಡೆ, ಗೆಳೆಯ ಕರೆದೆಡೆ ಸ್ವಚ್ಛಂದವಾಗಿ ವಿಹರಿಸುವುದಕ್ಕೂ ಹೆಚ್ಚಿನ ಸ್ವಾತಂತ್ರ್ಯ ಬೇಕೆ? ತನ್ನ ಕಾರ್ಯಕ್ಷೇತ್ರದಲ್ಲಿ ತನಗೆ ಮೇಲ್ಪಟ್ಟ ಅಧಿಕಾರಿಗಳಿಗೆ ನಮಸ್ಕರಿಸಿ, ಲೆಡ್ಜರು, ಪಾನು, ಲೆಟರು, ಪಾರ್ಟಿ ಇತ್ಯಾದಿ. ಆಫೀಸು ಭಾಷೆಯನ್ನು ಬಿಟ್ಟು, ಮನಸ್ಸಿಗೆ ಬಂದ ವಿಷಯವನ್ನು ಮರೆಮಾಚದ ಹಾಗೆ ಮಾತನಾಡುವುದಕ್ಕಿಂತ ಅತಿಶಯವಾದ ಸ್ವಾತಂತ್ರ್ಯ ಬೇಕೆ? ವಿದ್ಯಾರ್ಥಿಗಳಾದರೊ—"ಫಸ್ಟ್ hour ಯಾರು? ಲಾಸ್ಟ್ ಅವರ್ ಏನು? Physics ಏನಾಯ್ತು? Mathematics ಏನ್ಮಾಡ್ತಾರೆ?" ಈ "ಯಾರು? ಏನು?" ಬಿಟ್ಟು, ಇಷ್ಟಬಂದ ಕಾದಂಬರಿ, ರಸವತ್ತಾದ ಪದ್ಯ, ನಾಟಕ ಇವುಗಳನ್ನು ವಿಚಾರ ಮಾಡುತ್ತಾ ತಾನು ಬಯಸಿದ ಕಾವ್ಯಭಂಡಾರಕ್ಕೆ ನಿರಾತಂಕವಾಗಿ ಕೈಹಾಕಲು ಸ್ವಾತಂತ್ರ್ಯವಿರುವುದೂ ಆ ರಜಾದಿನದಲ್ಲೇ. ಪ್ರತಿನಿತ್ಯದ ವ್ಯವಹಾರದ ಪ್ರಪಂಚದಿಂದ ನಿವೃತ್ತನಾಗಿ, ತನ್ನದೇ ಆದ ಒಂದು ಲೋಕದಲ್ಲಿ ಸ್ವಚ್ಛಂದದಿಂದ, ಲವಲವಿಕೆಯಿಂದ, ಸಂತೋಷವಾಗಿ ಕಳೆದ ರಜೆಯ ದಿನ ತನ್ನ ದೇಹಶ್ರಮವನ್ನು ಪರಿಹರಿಸಿ, ಮಾನಸಿಕ ದಾಂಧಲೆಯನ್ನು ಶಾಂತಿಗೊಳಿಸಿದರೆ ರಜಾಕಳೆದ ಆನಂದ ದುಡಿಮೆಯಲ್ಲಿ ಉತ್ಸಾಹವನ್ನು ಕೆರಳಿಸೀತು ಎನಿಸುತ್ತದೆ.

ಇಂಥ ಒಂದು ರಜಾದಿನದಲ್ಲಿ ಬೇಸರ ಕಳೆಯಲೋಸುಗ ರಸ್ತೆಯಲ್ಲಿ

ನಡೆದು ಹೋಗುತ್ತಿದ್ದರೆ—"ನೀರಡಸಿರ್ದ ಹೊತ್ತಾಜ್ಯ ದೊರಕಿ ಫಲವೇನು?" ಎಂಬಂತೆ ಪುಸ್ತಕ ನೋಡುವುದಕ್ಕೇ ಬೇಜಾರಾದಾಗ ಪೆನ್ಸಿಲು ಸಿಕ್ಕಿತು. 'ಸಿಕ್ಕಿದ್ದು ದಕ್ಕುವುದಿಲ್ಲ' ಅಂತ ಗೊತ್ತಿದ್ದರೂ 'ಕಂಡದ್ದು ಬಿಡಬೇಡ' ಅಂತ ನೊಂಡ ಮನಸ್ಸು ಕಾಡಿತು. ಕೈಗೆತ್ತಿಕೊಂಡು ಕಣ್ಣಿಗೊತ್ತಿಕೊಳ್ಳೋಣಾಂತ ನೋಡಿದರೆ—ಪೆನ್ಸಿಲು ಉದ್ದದಲ್ಲಿ ಉದ್ದಿನಷ್ಟು ಸವೆಯದೆ ಮುದ್ದಾಗಿಯೂ ಇರಬೇಕೆ? 'ಎಷ್ಟೇ ದೊಡ್ಡವರಾದರೂ ಒಂದು ದಿನ, ಒಂದು ಸಮಯ ತಮ್ಮ ಸ್ಥಾನದಿಂದ ಬಿದ್ದುಹೋಗುವುದು ನಿಜ' ಎಂದು ಈ ಕೆಟ್ಟುಹೋಗಿರೋ ಪ್ರಪಂಚಕ್ಕೆ ತೋರಿಸುವುದಕ್ಕೆ ಬಿದ್ದುಹೋಯ್ತೋ ಏನೋ? ಎಂಥೆಂಥ ಮಹ ನೀಯರೋ ಪವಿತ್ರಾತ್ಮರೋ—ಜನ್ಮಗಳಲ್ಲೆಲ್ಲಾ ಮಾನವಜನ್ಮವೇ ಶ್ರೇಷ್ಠ ವಾದದ್ದು ಎಂದು ತಿಳಿದಿದ್ದರೂ—ಜೀವನವನ್ನೆಲ್ಲಾ ಸಾಧನೆಯಲ್ಲೇ ಕಳೆದು, ದೇಹವನ್ನೆಲ್ಲಾ ಸೇವೆಗೋಸ್ಕರ ತೇಯ್ದು, ಕಡೆಗೆ ಆದರ್ಶನಿರೂಪಣೆಯಲ್ಲೇ ಆತ್ಮಸಮರ್ಪಣೆ ಮಾಡಿಕೊಂಡವರಿಗೂ ಸತ್ಯ ಅನ್ನುವುದರ ಅರಿವನ್ನು ಜನಕ್ಕೆ ತಿಳಿಸಲು ಆಗದೆ ಇರುವಾಗ ಈ ಒಂದೂವರಾಣೆ ಪೆನ್ಸಿಲು ಆ ಕೆಲಸವನ್ನು ನಿರ್ವಹಿಸೀತೇ? 'ಬೆಳೆದೋನು ಬಿದ್ದಾನು' ಅನ್ನುವ ಧರ್ಮವನ್ನು ಜಗತ್ತಿಗೆ ಇದಂತೂ ಸಾರಲಾರದು.

ಆ ರಸ್ತೆ ಸ್ಕೂಲಿಗೆ ಹೋಗುವ ದಾರಿ. ಆಗ ಶಾಲೆ ತೆರೆಯುವ ಕಾಲ ಸ್ವಲ್ಪ ಮೀರಿತ್ತು. (ಆ ದಿನ ನನಗೆ ರಜವಿದ್ದರೂ ಆ ಶಾಲೆಗೆ ರಜವಿರ ಲಿಲ್ಲ—ಶನಿವಾರ). ಆದ್ದರಿಂದ ಯಾರೋ ಒಬ್ಬ ಆ ಶಾಲೆಯ ವಿದ್ಯಾರ್ಥಿಯೇ ಕಳೆದುಕೊಂಡಿರಬಹುದೆಂಬುದರಲ್ಲಿ ಸಂದೇಹವಿಲ್ಲ. ಆ ವಿದ್ಯಾರ್ಥಿ ಸಾಹು ಕಾರನಲ್ಲ ಎಂದು ಆ ಪೆನ್ಸಿಲೇ ಹೇಳುತ್ತಿತ್ತು. ಅವನು ಧನಿಕನಾಗಿದ್ದಿದ್ದರೆ ಸ್ಕ್ರೂ ಪೆನ್ಸಿಲೋ, ಷೀಫ್ಛರ್ ಪೆನ್ನೋ ಇಟ್ಟಿರುತ್ತಿದ್ದ. ಅಂಥ ಬೆಲೆ ಬಾಳುವ ಪದಾರ್ಥಗಳನ್ನು ದಾರಿಯಲ್ಲಿ ಕಳೆಯುತ್ತಿರಲಿಲ್ಲ. ಅಥವಾ ಇದನ್ನೇ ಇಟ್ಟು ಕೊಂಡಿದ್ದಿದ್ದರೆ, ತನ್ನ ಉಲ್ಲನ್ ಕೋಟಿನ ಜೇಬು ಕೊಳೆಯಾಗುತ್ತದೆಂದು ಖಂಡಿತ ಇದರ ತಲೆಗೊಂದು ಬಿಳೀ ಪ್ಲಾಸ್ಟಿಕ್ಕು ಟೋಪಿ ಹಾಕಿರಬೇಕಿತ್ತು. ಈಗಿನ ಕಾಲದಲ್ಲಿ ಟೋಪಿ ಹಾಕದೆ ಇದ್ದವರ ಗತಿಯೆಲ್ಲಾ ಅಧೋಗತಿಯೇ ಎಂದು ತೋರಿಸುವುದಕ್ಕೇನಾದರೂ ಬಿದ್ದುಹೋಯ್ತೋ? 'ಊರಿಗೆಲ್ಲ ತಿಳಿದ ವಿಷಯವನ್ನು ನನ್ನ ಕಿವೀಲಿ ಹೇಳು' ಅಂದ ಹಾಗೆ ಇದೇನು ಹೇಳೋದು

ಇದರ ತಲೆ! ಪಾಪ! ಈ ಬಡಪಾಯಿಗೆ ಅಷ್ಟೊಂದು ಅಧಿಕಪ್ರಸಂಗಿತನ ಎಲ್ಲಿ ಬರಬೇಕು. ಇರಲಾರದು—ಇರಲಾರದು.

ಮತ್ತೇನಿದ್ದೀತು? ಸ್ಕೂಲಿನಲ್ಲಿ ಸೀಸದ ಕಡ್ಡಿಯಲ್ಲಿ ಬರೆದುಕೊಂಡು, ಮನೆಯಲ್ಲಿ ಮಸಿಯಿಂದ 'ನೀಟ್' ಬರೆದುಕೊಳ್ಳುವ ಮಧ್ಯಮವರ್ಗದ ವಿದ್ಯಾರ್ಥಿಯ ಜೇಬೇ ಇದರ ಮೊದಲಿನ ಆವಾಸಸ್ಥಾನವಾಗಿದ್ದಿರಬೇಕು. ಕೆಲವು ದಿನ ಆ ಹುಡುಗನೊಂದಿಗೆ ಶಾಲೆಗೆ ಹೋಗಿ ಬಂದಿರಬೇಕು. ಉಪಾಧ್ಯಾಯರು ತರಗತಿಗೆ ಬಂದ ಒಡನೆ ಇದೂ ಹೊರಕ್ಕೆ ಬಂದು ನೋಡಿರಬೇಕು. ಆ ಹುಡುಗ—ಪಠ್ಯಪುಸ್ತಗಳಿಲ್ಲದ ವಿದ್ಯಾರ್ಥಿ—ಅಂದಿನ ತಾರೀಖು, ಪಾಠದ ಹೆಸರು ಮೊದಲುಗೊಂಡು ಉಪಾಧ್ಯಾಯರು ಆಚೆ ಹೋಗುವವರೆಗೂ ಹೇಳಿದ ಪ್ರತಿಯೊಂದು ಪದವನ್ನೂ ಬರೆದುಕೊಳ್ಳುವ ಭರದಲ್ಲಿ ಇದರ ಕೋರೆ ಆ ದಪ್ಪವಾದ ಸರ್ಕಾರೀ ಕಾಗದದ ಒರಟು ಮೋರೆಗೆ ತಿಕ್ಕಿ ತಿಕ್ಕಿ ನವೆದಿರಬೇಕು. ಆ ನೋವಿನಿಂದ ಇದು ಅವನನ್ನು ಶಪಿಸಿರಬೇಕು. ಆಗ ಕಂಬನಿದುಂಬಿದ ಕಣ್ಣಿನಿಂದ ಸುತ್ತಲೂ ನೋಡಿರಬೇಕು. ಉಲ್ಲನ್ ಕೋಟುಗಳ ಭದ್ರಭವನಗಳಿಂದ ಹೊರಗೂ ಸಹ ಬಾರದೆ, ಕಿರೀಟಗಳನ್ನು ಮಾತ್ರ ಪ್ರದರ್ಶಿಸುತ್ತಿದ್ದ ಹಲವು ಸ್ಕ್ರೂ ಪೆನ್ಸಿಲುಗಳ, ಷೀಫ್ಲರ್ ಪೆನ್ನುಗಳ ಮೇಲೆ ಇದರ ದೃಷ್ಟಿ ಬಿದ್ದಿರಬೇಕು. ಮನಸ್ಸಿನಲ್ಲಿ ಅಸೂಯೆಯೋ ಅನುರಾಗವೋ ಆವಿರ್ಭವಿಸಿರಬೇಕು. ತಾನೂ ಹಾಗಿರಬೇಕೆಂಬ ಆಶೆ ಅಂಕುರವಾಗಿರಬೇಕು. ಕಡಮೆ ಸಂಬಳ ಬರುವ ಕಡೆ ಕೆಲಸ ಬಿಟ್ಟು ಭಾರೀ ಕೆಲಸ ಹುಡುಕಲು ಹೊರಡುವ ಉದ್ಯೋಗಸ್ಥರಂತೆ ಮಧ್ಯಮ ವರ್ಗದ ಹುಡುಗನ ಜೇಬನ್ನು ಬಿಟ್ಟು ಉಲ್ಲನ್ ಕೋಟು ಹುಡುಕುವುದಕ್ಕಾಗಿ ಕೆಳಗೆ ಬಿದ್ದಿರಬೇಕು. ಕೆಲಸ ಹುಡುಕುವ ಉದ್ಯಮದಲ್ಲಿ ಕೆಲವರ ಕೋಪಕ್ಕೆ ತುತ್ತಾಗಿ, ಕೆಲವರ ಬಿರುನುಡಿಗಳನ್ನು ಸಹಿಸಬೇಕಾಗುವಂತೆ, ಪಾಪ, ಈ ಪೆನ್ಸಿಲನ್ನು ಸಹ ಹಲವು ಊರ್ಧ್ವ ದೃಷ್ಟಿಯಿದ್ದ ಮನುಷ್ಯರು ಯಾರೋ ತುಳಿದೂ ಇರಲೇಬೇಕೆಂಬುದೂ ಅದಕ್ಕೆ ಅಂಟಿಕೊಂಡಿರುವ ಮಣ್ಣಿನಿಂದ ಖಚಿತವಾಗುತ್ತಿದೆ. "ಪಾಪಿ ಸಮುದ್ರಕ್ಕೆ ಹೋದರೂ ಮೊಳಕಾಲುದ್ದ ನೀರೇ!" ಅಷ್ಟು ಕಷ್ಟ ಅನುಭವಿಸಿಯೂ ಕಡೆಗೆ ನನ್ನ ಕೈಗೆ ಸೇರಬೇಕೇ? 'ಅದೃಷ್ಟ ಇಲ್ಲದ್ದು ಅತ್ತರೆ ಬರುತ್ತೆಯೇ?' ಆದರೂ ನನಗೆ ಅದರೊಡನೆ ಅದರ ಆಶೆಯನ್ನು ಈಡೇರಿಸುವ ಕಾರ್ಯದಲ್ಲಿ ಸಹಕರಿಸಬೇಕೆನಿಸಿತು. ಅದರ ಹೆಬ್ಬಯಕೆ

ಯನ್ನು ಈಡೇರಿಸುವುದಾಗಿ ಪಣ ತೊಟ್ಟೆ. ಮನಸ್ಸಿನಲ್ಲೇನಾದರೂ ಬಯಕೆ ಇದ್ದು ಸತ್ತರೆ, ಅದನ್ನು ತೀರಿಸಿಕೊಳ್ಳುವುದಕ್ಕೋಸ್ಕರ ದೆವ್ವವೋ ಭೂತವೋ ಆಗುತ್ತಾರಂತೆ. ಇದುವರೆಗೆ ಹಾಗೆ ಸತ್ತಿರುವವರು ನನಗೆ ತಿಳಿದಂತೆ ಯಾರೂ ಇಲ್ಲ. ಅವರ ದೆವ್ವಗಳನ್ನೂ ನೋಡಿಲ್ಲ. ಏನೋ ಗ್ರಹಚಾರ! ಈ ಪೆನ್ಸಿಲು ಉಲ್ಲನ್ ಕೋಟು ಸೇರಬೇಕೆಂಬ ಬಯಕೆಯಲ್ಲೇ ಸಾಯುವುದೂ, ಅದರ ಆಸೆ ಯನ್ನು ತೀರಿಸೋಣ ಅನ್ನುವ ಆಸೆಯಲ್ಲೇ ನಾನೂ ಸಾಯುವುದೂ, ಇಬ್ಬರೂ—ಎಂದರೆ ನಾನು ಮತ್ತು ಪೆನ್ಸಿಲು—ಎರಡು ಭೂತಗಳಾಗಿಬಿಟ್ಟರೆ ಮುಂದೆ ಈ ಪ್ರಪಂಚದಲ್ಲಿ ಉಲ್ಲನ್ ಕೋಟು ಹಾಕುವವರ ಗತಿ ಏನೆಂದು ನನಗೇ ಭಯವಾಯಿತು. ನಾನು ಸುತ್ತಲೂ ನೋಡಿದೆ. ನನ್ನ ಪಕ್ಕದಲ್ಲಿದ್ದ ಗೆಳೆಯರು ಒಂದು ಉಲ್ಲನ್ ಕೋಟು ಹಾಕಿಕೊಂಡಿದ್ದರು. ನನಗಂತೂ ಸಂತೋಷದಿಂದ ಮೈ ಹಿಗ್ಗಿಹೋಯಿತು. ಅದು ನನ್ನ ಕಡೆ ಕೃತಜ್ಞತಾ ಪೂರ್ವಕವಾದ ದೃಷ್ಟಿಯಿಂದ ನೋಡಿತು. ನಾನು ಅಭಿನಂದನೆಯನ್ನು ಸೂಚಿ ಸುತ್ತಾ ಅದನ್ನು ಬೀಳ್ಕೊಟ್ಟೆ. ನನ್ನ ಕೈ ತಿಕ್ಕಾಟದಿಂದಲೋ ಅದರ ಸಂತೋಷ ದಿಂದಲೋ ಅದರ ಮೈಯೆಲ್ಲಾ ಬೆಚ್ಚಗಾದದ್ದು ಏನಾಶ್ಚರ್ಯ? ಜೀವನದಲ್ಲಿ ಪಡೆಯಲೆತ್ನಿಸಿದ ಸುಖವನ್ನು ಹೊಂದಿದ ಆನಂದಕ್ಕಿಂತ ಮಹತ್ತರವಾದು ದೇನು? ನನ್ನ ಗೆಳೆಯರ ಉಲ್ಲನ್ ಕೋಟಿನ ಜೇಬಿನೊಳಕ್ಕೆ ಅದನ್ನು ಸೇರಿಸಿದೆ. ಆಗಿನ ನಮ್ಮಿಬ್ಬರ ಸಂತೋಷ ಇಡೀ ಪ್ರಪಂಚದಲ್ಲಿ ಯಾರೂ ಪಟ್ಟಿಲ್ಲವೆಂದು ಹೇಳಿಬಿಡಬಹುದು. ಆದರೂ ಅದರ—ಆ ಪೆನ್ಸಿಲಿನ ನಗುವನ್ನು ನೋಡಿ ಪರೀಕ್ಷಿಸಿದರೆ ಒಂದು ವಿಲಕ್ಷಣ ಕಂಡುಬರುತ್ತಿತ್ತು. ತನ್ನ ಆನಂದವನ್ನು ತಾನು ಆಸ್ವಾದಿಸುತ್ತಿರುವ ನಗುವಿನಂತೆ ಕಂಡುಬರಲಿಲ್ಲ. ನನ್ನನ್ನು ನೋಡಿ ಅಪ ಹಾಸ್ಯಮಾಡಿ ನಗುತ್ತಿದ್ದಂತೆ ಭಾಸವಾಗುತ್ತಿತ್ತು. ಯಾರ ಮೂಲಕ ಅದು ಆ ಭವ್ಯ ಮಂದಿರವನ್ನು ಸೇರಿತೋ, ಆ ಉನ್ನತಸ್ಥಿತಿಗೆ ಬರಲು ಸರ್ವಕಾರಣನಾದ ನನ್ನನ್ನೇ ಅಣಕಮಾಡುವುದೆ? ಇನ್ನೂ ಅದಕ್ಕೆ ಟೋಪಿಯೊಂದು ಬೇರೆ ಇಲ್ಲ. ಇದ್ದಿದ್ದರೆ ಮತ್ತೆಷ್ಟು 'ರೋಫ್' ಮಾಡುತ್ತಿತ್ತೋ ಅನ್ನಿಸುತ್ತೆ. ಅಂತೂ ತುಂಬ ಕುಹಕ ಬುದ್ಧಿಯದು, ಉಪಕಾರವನ್ನು ಸ್ಮರಿಸುವ ಜಾತಿಯಲ್ಲ—ಕೃತಘ್ನತೆ.

ಅಲ್ಲ, ಆ ಹುಡುಗ ಒಂದೂವರಾಣೆ (ಒಂದು ಕಾಸು ಸಂಪಾದನೆ ಕೂಡ ಕಷ್ಟವಾಗಿರುವ ಈ ಕಾಲದಲ್ಲಿ) ಕೊಟ್ಟು, ಏನೋ ಕೈಗೆ ಕೈಯಾಗಿರುತ್ತೆ

ಅಂತ ಕೊಂಡುಕೊಂಡರೆ— ಪಾಪ! ಕೈ ಕೊಟ್ಟುಬಿಡಬಹುದೇ ಈ ಚೋಟುದ್ದದ ನೋಟು? ಎಂಥವನೇ ಆಗಲಿ, ದುಡ್ಡು ಕೊಟ್ಟು ಕೊಂಡ ಮೇಲೆ ಯಜಮಾನ ನಾದ—ತಾಳಿ ಕಟ್ಟಿ ಕೈ ಹಿಡಿದವನು ಗಂಡನಾದ ಹಾಗೆ. ಇಂಥ ದ್ರೋಹ ವನ್ನು ಬಗೆಯುಬಹುದೆ? ಈ ದ್ರೋಹಿಗೆ ತನ್ನ ಮನೋಭಿಲಾಷೆ ಕೈಗೂಡ ಬಹುದೆ? ಹೀಗೆ ನೋಡಿದರೆ 'ಕೆಟ್ಟವರಿಗೇ ಕಾಲ' ಎನ್ನುವುದು ಸತ್ಯಾಂಶವೇ ಇರಬಹುದು.

ಹಾಗಾದರೆ ಒಳ್ಳೆಯವರಿಗೆ ಕಾಲವಲ್ಲವೇ ಇದು? ಎಲ್ಲಿಯದು? ಆ ಹುಡುಗ—ಆ ಮಧ್ಯಮ ವರ್ಗದ ವಿದ್ಯಾರ್ಥಿಯ ಗತಿ ಏನಾಗಿರಬಹುದು? ಮನೆಯಲ್ಲಿ ಆ ಹೊತ್ತು ರೇಷ್ಠ ತಂದು, ಆಗ ಪಾಲಿಷ್ ಮಾಡಿಸಿ, ಆಗ ಸೌದೆ ತಂದು ಅದನ್ನು ಒಡಸಿ, ಆ ಹಸಿಸೌದೆಯಲ್ಲಿ ಅರೆಬೆಂದ ಅನ್ನ ಊಟಮಾಡಿ, ಪೆನ್ಸಿಲ್ ಜೇಬಿನಲ್ಲಿಟ್ಟುಕೊಂಡು ಎಡವುತ್ತಾ ಬೀಳುತ್ತಾ ಓಡುತ್ತಾ ಇದ್ದರೆ, ಶಾಲೆಗೆ ಹೋಗುವ ಹೊತ್ತಿಗೆ ಹತ್ತು ನಿಮಿಷ ತಡ. ಉಪಾಧ್ಯಾಯರು ಬಂದುಬಿಟ್ಟಿದ್ದಾರೆ. ಹಾಜರಿ ತೆಗೆದುಕೊಂಡು ಮುಗಿದುಹೋಗಿದೆ. ಪದ್ಯದಲ್ಲಿ ನಾಲ್ಕು ಪಾದ ಮಾಡಿಬಿಟ್ಟಿದ್ದಾರೆ. ಯಾವ ಪದ್ಯ ಮಾಡುತ್ತಿದ್ದಾರೋ ತಿಳಿಯದು. ಇನ್ನು ಮುಂದಿನದನ್ನಾದರೂ ಬರೆದುಕೊಳ್ಳೋಣಾಂತ ನೋಡಿದರೆ —ಪೆನ್ಸಿಲು ಪರಾರಿ. ಎದೆಯ ಡವಡವ ಶಬ್ದ ಮುಮ್ಮಡಿಸಿದೆ. ಊಟ ಅರ್ಧ ವಾಗಿ ಓಡಿಬಂದರೂ ಶಾಲೆಯಲ್ಲಿ ಪಾಠವೂ ಅರ್ಧವಾಗಿರೋದು ಮೊದಲನೆ ಯದು, ಗೈರುಹಾಜರಿ ಬಿದ್ದಿರುವುದು ಎರಡನೆಯದು, ಪೆನ್ಸಿಲು ಕಳೆದು ಹೋದದ್ದು ಮೂರನೆಯದು. ಹಣೆಯಲ್ಲಿದ್ದ ಬೆವರಿನ ಜೊತೆಗೆ ಕಣ್ಣೀರಿನ ಹೊನಲೂ ಸೇರುತ್ತಿದೆ. ತಂದೆಯವರ ಖತಿಗೊಂಡ ರೂಪ ನಿಂತಿದೆ. ಆದರೂ ಉಪಾಧ್ಯಾಯರ ವಾಗ್ಝರಿ ಬಿರುಸಾಗಿ ಸಾಗುತ್ತಿದೆ. 'ಉಂ! ಆಮೇಲೆ ಎಲ್ಲಾ ಯೋಚನೆ. ನೋಟ್ಸು ಬರೆದುಕೊಳ್ಳುವುದು ಮೊದಲ ಕರ್ತವ್ಯ'ವೆಂದು ತೀರ್ಮಾನಿಸಿ, ಅಕ್ಕಪಕ್ಕದವರನ್ನು 'ಪೆನ್ಸಿಲ್ಲೋ ಪೆನ್ನೋ ಕೊಡಿ' ಎಂದು ಬೇಡುತ್ತಿದ್ದಾನೆ. ಇಷ್ಟು ಹೊತ್ತೂ ಮೌನವಾಗಿದ್ದ ತರಗತಿಯಲ್ಲಿ ಇವನ ಪಿಸು ಮಾತು ಎದ್ದು ಕೇಳುತ್ತದೆ. ಎತ್ತರದಲ್ಲಿ ಕುಳಿತಿದ್ದ ಉಪಾಧ್ಯಾಯರಿಗೆ ಇವನು ಗೋಚರವಾಗುತ್ತಾನೆ. ಅವರ ಅಭಿಪ್ರಾಯಗಳನ್ನು ಹಲವಾರು ರೀತಿಗಳಲ್ಲಿ ಹೇಳುತ್ತಿದ್ದುದೆಲ್ಲವನ್ನೂ ಮರೆಸಿ ಇವನ ಗಲಾಟೆ ಅವರ ಗಮನವನ್ನು ಸೆಳೆಯು

ತ್ತದೆ. ಅವರ ಮನಸ್ಸಿನಲ್ಲಿದ್ದ ವಿಷಯ, ಮಾತು ಎಲ್ಲಾ ಮರೆತು, ಆ ಸ್ಥಳದಲ್ಲಿ ಕೋಪವು ಕಾಡುಗಿಚ್ಚಿನಂತೆ ತುಂಬಿಕೊಳ್ಳುತ್ತದೆ. ಕಣ್ಣು ಕಿಡಿ ಸೂಸುತ್ತದೆ. ಕೈಯಲ್ಲಿದ್ದ ಪುಸ್ತಕ ಮೇಜಿನ ಮೇಲೆ ಆರ್ಭಟಿಸುತ್ತಾ ಬೀಳುತ್ತದೆ. ಕೋಪ ಗಿಚ್ಚು ಭುಗಿಲೆಂದು, ವಿದ್ಯಾರ್ಥಿಗೆ 'ಹೊರಗೆ ನಡೆಯಲು' ಆಜ್ಞೆಯಾಗುತ್ತದೆ. ಆಚೆ ಹೋದರೆ ಮುಖ್ಯೋಪಾಧ್ಯಾಯರ ಕಾಟ. ಮನೆಗೆ ಹೋದರೆ ಮಾರಿಗೆ ಊಟ. ಅಲ್ಲಿಗೇ ಮುಗಿಯಿತು ಅಂದಿನ ಪಾಠ. ಅಲ್ಲಿ ಅವನಿಗೆ ಗೋಳಾಟ; ಇಲ್ಲಿ ಇದರ ಹುಡುಗಾಟ.

'ಇಂದಿನ ನಗು ಮುಂದಿನ ಅಳುವಿಗೆ ಕಾರಣ' ಎಂಬುದು ನಿಜವಾದರೆ, ಇಂದಿನ ಅಳುವಿಗೆ ಕಾರಣ ಹಿಂದೆ ಎಂದೋ ನಕ್ಕದ್ದು ಇರಬೇಕು! ಇಂದು ಅಳುತ್ತಿರುವ ಈ ಹುಡುಗ ಎಂದೋ—ಎಂದೋ ಏಕೆ? ಈ ಪೆನ್ಸಿಲನ್ನು ಕೊಂಡ ಹೊಸದರಲ್ಲಿ ಎನ್ನೋಣ—ನಲಿದೇ ಇರಬೇಕು. ಅದುವರೆಗೂ ಬರೆಯಲು ಉಪ ಯೋಗಿಸುತ್ತಿದ್ದ ಚಿಕ್ಕದಾದ (ಅಥವಾ ಮುದಿಯಾದ) ಪೆನ್ಸಿಲನ್ನು ತಾತ್ಸಾರ ದಿಂದ ತಮ್ಮನಿಗೆ ಎಸೆದಿರಬೇಕು. ಮುದಿಯದರ ಯಾತನೆಯನ್ನು ನೋಡಿ ಅದರ ಬಾಂಧವ—ಈ ಹರೆಯದ ಪೆನ್ಸಿಲು ದುಃಖಿಸಿರಬಹುದು. 'ತಾತ್ಸಾರಕ್ಕೆ ತಕ್ಕ ಶಾಸ್ತಿ' ಮಾಡಬೇಕೆಂದು ಅಂದೇ ಇದು ಪಣ ತೊಟ್ಟಿರಬೇಕು. ಇದಕ್ಕೂ ವಯಸ್ಸು ಕಳೆಯುತ್ತಾ ಬಂದಂತೆ ಅಂದಿನ ಭೀಕರ ದೃಶ್ಯ ಕಣ್ಣು ಮುಂದೆ ಕಟ್ಟಿದಂತಾಗಿರಬೇಕು. ತನ್ನ ಸೇಡನ್ನು ತೀರಿಸಿಕೊಳ್ಳಲು ಈ ಶನಿವಾರದ ಮುಹೂರ್ತದಲ್ಲಿ ಉಜ್ಜುಗಿಸಿರಬೇಕು. ಈಗ, ಆ ಹುಡುಗನ ಪರಿಸ್ಥಿತಿಯನ್ನು ನೆನೆಸಿಕೊಂಡು ನಕ್ಕಿರಬೇಕು. ಆದ್ದರಿಂದ ನನ್ನನ್ನು ನೋಡಿ ನಕ್ಕಿರಲಾರದೆಂದು ತಿಳಿದುಬಂತು. ಪುನಃ ಅದರೊಡನೆ ಕನಿಕರಿಸಬೇಕೇಬೇಕೆನಿಸಿತು. ದೃಷ್ಟಿಸಿ ನೋಡಿದರೆ—ಮೊಂಡ ಬ್ಲೇಡಿನಲ್ಲಿ ಹೆರೆದು, ಅದರ ಮುಖದಲ್ಲಿ ಹಳ್ಳತಿಟ್ಟುಗಳು ಆಳವಟ್ಟಿದ್ದುವು. ಅದನ್ನು ನೋಡಿ ಮತ್ತಷ್ಟು ದಯೆ ಹುಟ್ಟಿತು. ಪಾಪ! ಆ ಕೋಪದಲ್ಲಿ ಏನಾದರೂ ಅದನ್ನು ಎಸೆದುಬಿಟ್ಟಿದ್ದರೆ, ಅದರ ಗತಿ ಏನಾಗ ಬೇಕಿತ್ತೋ? ಎನ್ನಿಸಿತು.

ಸಿಕ್ಕಿದ ವಸ್ತುಗಳು ಸಾಮಾನ್ಯವಾಗಿದ್ದರೂ, ಕಡೆಗೆ ಅನೇಕರಿಗೆ ಬಹಳ ಸುಖಸಂಪತ್ತುಗಳನ್ನು ತಂದುಕೊಟ್ಟಿವೆಯಂತೆ. ಯಾರಿಗೋ ಒಂದು ಲಕ್ಷ್ಮಿಯ ವಿಗ್ರಹ ಸಿಕ್ಕಿತಂತೆ. ಅವರು ಅದನ್ನು ಭದ್ರವಾಗಿಟ್ಟು ಪೂಜಿಸಿದ

ರಂತೆ. ಆಮೇಲೆ ತಾನೇತಾನಾಗಿ ಅವರಿಗೆ ಕೊಪ್ಪರಿಗೆ ಕೊಪ್ಪರಿಗೆ ಹಣ ಸಿಕ್ಕಿತಂತೆ! ಹಾಗೆಯೇ 'ಯಾರಿಗೋ ಒಬ್ಬರಿಗೆ ಸರಸ್ವತೀ ವಿಗ್ರಹ ಸಿಕ್ಕಿತಂತೆ. ಅದನ್ನು ಮಾರದೆ ಪೆಟ್ಟಿಗೆಯಲ್ಲಿಟ್ಟ ಮಾರನೆಯ ದಿನವೇ ಅವರಿಗೆ (ಶಾಲೆಯ ಮುಖವನ್ನೇ ನೋಡದೆ) ಸಕಲ ಗ್ರಂಥಸಂಪತ್ತೂ ಒಲಿದು ಬಂದಿತಂತೆ! ಹೀಗೆಯೇ 'ಅಂತೆಕಥೆ'ಗಳ ಕಂತೆ ಬಹಳ ಕೇಳಿದ್ದುದರಿಂದ ಈ ಪೆನ್ಸಿಲನ್ನು ಬಿಸಾಡಲು ಮನಸ್ಸು ಬರುತ್ತದೆಯೆ? ಈ ಪೆನ್ಸಿಲು ಅಂಥ ಮಹತ್ಕಾರಿಯೇ ಆಗಿದ್ದು, ಅದರಷ್ಟಕ್ಕೆ ಅದೇ, ಕೈಯಲ್ಲಿ ಹಿಡಿದ ಮಾತ್ರಕ್ಕೇ ಸಾವಿರಾರು ಪುಟಗಳ ನೂರಾರು ಪುಸ್ತಕಗಳನ್ನು ಹೊರಗೆಡಹುವ ದಿವ್ಯಶಕ್ತಿ ಏಕೆ ಪಡೆದಿರಬಾರದು? ಇದ್ದರೂ ಇರಬಹುದು. ಅಷ್ಟು ಪುಟಗಳನ್ನು ಅದೇ ಪೆನ್ಸಿಲಿನಲ್ಲಿ ಬರೆದರೆ, ಬರೆದ ಮಾರನೆಯ ದಿನ ಓದಲಾದೀತೇ? ಬಿಳಿಯ ಕಾಗದಕ್ಕೆ ಕರಿಯ ಬಣ್ಣ ಬಳಿದಂತಾಗುವುದರಲ್ಲಿ ಸಂದೇಹವೇ ಇಲ್ಲ. ಆದರೂ ಅದು ನಿಸ್ಸತ್ವಕಾರಿಯಲ್ಲ. ಅದರಲ್ಲಿನ ಅದ್ಭುತಶಕ್ತಿಯೇ ಈ ಪ್ರಬಂಧಕ್ಕೆ ಪ್ರೇರಕವಸ್ತುವಾಗಿರಬೇಕು.

ಬಿ. ಟಿ. ಅಶ್ವತ್ಥನಾರಾಯಣ ರಾವ್

# ಮೂಗಿನ ಮಹತ್ತ್ವ

'ಮೂಗು,' 'ಮಹತ್ತ್ವ'—ಎರಡರ ಮೊದಲಕ್ಷರವೂ ವರ್ಣಮಾಲೆಯ ಒಂದೇ ಮುತ್ತಿನಿಂದಾದ ಕಾರಣ 'ಮೂಗು' 'ಮಹತ್ತ್ವ'ಗಳನ್ನು ಬೇರೆ ಮಾಡಲು ಸಾಧ್ಯವಿಲ್ಲ ಎನ್ನುವ ಪಂಥದವನಲ್ಲ ನಾನು.

ಚಾರಲ್ಸ್ ಡಾರ್ವಿನ್ ತನ್ನ 'ಥಿಯರಿ ಅಫ್ ಎವೊಲ್ಯೂಷನ್'ನಲ್ಲಿ ಹೇಳುವಂತೆ ನೀರಿನ ಸಣ್ಣ ಸಣ್ಣ ಕ್ರಿಮಿಗಳು, ಮೀನು, ಮೊಸಳೆ, ಕುದುರೆ, ದನ, ಹಂದಿ, ಕಪಿ ಮೊದಲಾದುವೆಲ್ಲ ಮೊದಲು ಆಗಿ, ಕಡೆಗೆ ಮನುಷ್ಯನ ರೂಪ ಆಯಿತಂತೆ. ಡಾರ್ವಿನ್ ಎಲ್ಲ ಪ್ರಾಣಿಗಳ ಎಲುಬಿನ ಗೂಡುಗಳನ್ನು ಶೋಧಿಸಿ ಶೋಧಿಸಿ ಮಾನವನ ಇತಿಹಾಸವನ್ನು ಬರೆದನಂತೆ. ನಾವು ಸ್ವತಃ ವಿಜ್ಞಾನಿಗಳಲ್ಲದಿದ್ದರೂ ಸರಿಯಾಗಿ ಯೋಚಿಸಿ ನೋಡಿದರೆ ಈ ರೂಪಾಂತರದಲ್ಲಿ ಗುರುಸ್ಥಾನ ಮೂಗಿಗೇ ಎಂದು ತಿಳಿಯಬರುವುದು ಸಹಜ. ಕುದುರೆ ಕಪಿಗಳ ಕಾಲುಕೈಗಳನ್ನೂ ಇತರ ಅಂಗಗಳನ್ನೂ ಮನುಷ್ಯರದೊಂದಿಗೆ ಹೋಲಿಸಿ ನೋಡಿದರೆ ಸ್ವಲ್ಪ ಹೆಚ್ಚುಕಡಮೆ ಸಾಮ್ಯ ಇದ್ದೇಇರುತ್ತದೆ. ಆದರೆ ಒಂದು ಪ್ರಾಣಿಯ ಮೂಗನ್ನು ಇನ್ನೊಂದರ ಮೂಗಿಗೆ ಹೋಲಿಸಿನೋಡಿ. ಎಲ್ಲಿಂದೆಲ್ಲಿಗೆ ಅಂತರ? ಆನೆಯದು ಕುದುರೆಯದರಂತಲ್ಲ, ಕಪಿಯದು ಆನೆಯದರಂತಲ್ಲ, ಮನುಷ್ಯನದು ಕಪಿಯದರಂತಲ್ಲ. ಇದೆಲ್ಲ ನೋಡಿದರೆ ಸೃಷ್ಟಿಕರ್ತ ತನ್ನ ಪ್ರಯೋಗದಲ್ಲಿ ಮೂಗಿನ ಮೇಲೇ ಗಮನ ಏಕೆ ಹೆಚ್ಚಾಗಿಟ್ಟನೋ ಎಂಬ ಪ್ರಶ್ನೆ ಏಳುತ್ತದೆ. ಸೃಷ್ಟಿಕರ್ತ ತನ್ನ ಗುರುತರವಾದ ಹೊಣೆ ಮೂಗಿನ ಮೇಲೇ ಎಂದು ಭಾವಿಸಿರುವಾಗ ಮೂಗಿನ ಮಹತ್ತ್ವವನ್ನು ಅಲ್ಪಬುದ್ಧಿಗಳಾದ ಮನುಜರು ನಾವು ವಿವೇಚನೆ ಮಾಡಲಾರೆವು. ಆ ಸರ್ವಜ್ಞನ ಬುರುಡೆಯಲ್ಲಿ ಎಂಥೆಂಥ ಸಮಸ್ಯೆ, ನಿರ್ಧಾರಗಳು ಅಡಕವಾಗಿವೆಯೋ ಬಲ್ಲವರಾರು?

ವಿಸ್ತಾರವಾದ ಹಣೆಯ ಬಯಲಿನಲ್ಲಿ ನಾವು ಸುತ್ತಾಡಹೊರಟರೆ ಆ ಕಡೆ ಈ ಕಡೆ ಇರುವ ಎರಡು ನಯನತಟಾಕಗಳ ಮಧ್ಯೆ ಎತ್ತರವಾದ ಗುಡ್ಡದಂತೆ ಎದ್ದು, ತುದಿಯಿಂದ ನೋಡಿದರೆ ಮೀಸೆಯ ಸುಂದರ ಬನಗಳ ಕೆಳಗಡೆ ಇರುವ ವಿಸ್ತಾರವಾದ ಪಾತಾಳಗವಿಯ ವಿಹಂಗಮನೋಟವನ್ನು ನಿಮ್ಮ

ಮನಸ್ಸಿಗೆ ತಂದು, ಗುಡ್ಡದ ತುದಿಯಲ್ಲಿ ಕುಳಿತು ಕಾವ್ಯಾನಂದವನ್ನು ಅನುಭವಿಸುವಂತೆ ಮೂಗಿನ ಮೇಲೆ ಕುಳಿತು ಸುತ್ತಲಿನ ಸೌಂದರ್ಯವನ್ನು, ಗುಡ್ಡದ ಕೆಳಗೆ ಮೊನಚಾಗಿ ಬೆಳೆದಿರುವ ಬಿದಿರು ಮೆಳೆಗಳ ಸೊಬಗನ್ನು ಸವಿಯಬಹುದು. ಸುತ್ತಲಿನ ಸೌಂದರ್ಯದ ಮಹತ್ತ್ವಕ್ಕಿಂತ ಸೌಂದರ್ಯದರ್ಶನಮಾಡಿಸುವ ದಿಬ್ಬದ ಮಹತ್ತ್ವವೇ ಯಾವಾಗಲೂ ಹೆಚ್ಚು. ದೇವನಿಗಿಂತ ದೇವನ ದರ್ಶನ ಮಾಡಿಸಲು ಭೂಮಿಗೆ ಬಂದ 'ದೇವರ ಮಗ'ನಂತೆ.

ಆದರೆ ಮೂಗಿನ ಕೆಲಸ ಬರಿಯ ಸೌಂದರ್ಯದರ್ಶನ ಮಾತ್ರವೇ ಅಲ್ಲ; ತಾನೇ ಸೌಂದರ್ಯಕ್ಕೆ ಆಧಾರಭೂತವಾಗಿರುವುದು. ಕಿವಿ, ಕಣ್ಣು, ಕುರುಳು, ಎಲ್ಲ ಸೌಂದರ್ಯರಚನೆಗೆ ದಾನಮಾಡುವುವಾದರೂ 'ಧರ್ಮಪ್ರಕಾಶಕರು' ಮೂಗುಸಾಹೇಬರೇ ಎನ್ನುವುದನ್ನು ಯಾರಾದರೂ ಒಪ್ಪಿಕೊಳ್ಳಲೆಬೇಕು. ಮನುಷ್ಯ ಎಷ್ಟೇ ಚೆನ್ನಾಗಿದ್ದರೂ ಮೂಗು ಇಲ್ಲದಿದ್ದರೆ 'ಮುಖಡಾ' ಎಂದು ನಾಮವಿಶೇಷಣವನ್ನು ದಯಪಾಲಿಸಿಬಿಡುತ್ತಾರೆ. ಮೂಗಿಲ್ಲದವರನ್ನು ಕಂಡರೆ ಮೂಗಿಲ್ಲದ ಬಸ್ಸಿನ ಮುಂದೆ ನಿಂತುಕೊಂಡಷ್ಟು ಭಯವಾಗುತ್ತದೆ. ರಾಘವಾಂಕನೂ ಹೇಳುತ್ತಾನೆ: 'ಮೂಗನಿತ್ತು ಕನ್ನಡಿಯ ನೋಡುವರೇ?' ಎಂದು. ಇಷ್ಟೆಲ್ಲ ಏಕೆ? ನಾವೇ ಮನೆಯಲ್ಲಿ ಮಕ್ಕಳು ಬಹಳ ಗಲಾಟೆ ಮಾಡಿದಾಗ ಹೇಳಿ ಹೆದರಿಸುತ್ತೇವೆ: 'ಮೂಗು ಕುಯಿದುಬಿಡುತ್ತೇನೆ ನೋಡು. ಆಮೇಲೆ ನಿನ್ನನ್ನು ಯಾರೂ ಮದುವೆಯೇ ಮಾಡಿಕೊಳ್ಳಲ್ಲ' ಎಂದು.

ಸರ್ವಾತ್ಮನಾದ ಪರಮಾತ್ಮ ಎಲ್ಲರ ಆತ್ಮಗಳನ್ನೂ ಬಲ್ಲ. ಆದ್ದರಿಂದಲೇ ಆತ ನಿಷ್ಪಕ್ಷಪಾತಿಯಾಗಿ ವರ್ತಿಸಿದ್ದಾನೆ. ಇದರ ನ್ಯೂನತೆಗೆ ಅದರ ಸಮೃದ್ಧಿಯ ಒಂದು ಪಾಲನ್ನು ಕೊಟ್ಟು, ಅದರ ಕೊರತೆಗೆ ಇದರ ಒಂದು ಪಾಲನ್ನು ಸೇರಿಸಿ, ತನ್ನ ವಿಶ್ವಪ್ರೇಮವನ್ನೂ ಸಮತಾಧರ್ಮವನ್ನೂ ವ್ಯಕ್ತಪಡಿಸಿದ್ದಾನೆ. ನರಪೇತಲರು ಮೈಮಾಂಸದಲ್ಲಿ ತಮಗಿರುವ ನ್ಯೂನತೆಯನ್ನು ಕುರಿತು ವ್ಯಥೆಪಡಲಾಗದಂತೆ ಅವರಿಗೆ ಉರುಳುಗಡ್ಡೆಯಂಥ ಮೂಗೊಂದನ್ನು ಕೊಟ್ಟು ಅವರ ಹೃದಯದ ಅಳವನ್ನು ಕಡಮೆ ಮಾಡಿದ್ದಾನೆ. (ಪಾಪಿಗಳಿಗೆ ತಲೆಯ ಮೇಲೋ, ಕಿವಿಯ ಹಿಂದೆಯೋ ಈ ಸಮತೆಯನ್ನು ತೋರಿಸುವುದುಂಟು.) ಹಾಗೆಯೇ ಧಡೂತಿ ಆಳುಗಳಿಗೆ ತೂಕ ಹೆಚ್ಚಾಗುವಂತೆ ಮಾಂಸವನ್ನು ಕೊಟ್ಟು, ಆಮೇಲೆ ಎಚ್ಚತ್ತುಕೊಂಡು, ತನ್ನ ನಿಯಮಪಾಲನೆಗೋಸ್ಕರ

ಮೂಗಿನ ಮುಂಭಾಗವನ್ನು ಕಡಿದುಹಾಕಿರುತ್ತಾನೆ. ಆದರೆ ಇದನ್ನು ಎಲ್ಲಾ 'ಕೇಸು'ಗಳಲ್ಲಿಯೂ ಎಲ್ಲಾ ಕಾಲಗಳಲ್ಲಿಯೂ ಅನ್ವಯಿಸುವುದಕ್ಕಾಗುವುದಿಲ್ಲ. ಆಗಲೇ ಹೇಳಿದೆನಲ್ಲ: 'ಆ ಸರ್ವಜ್ಞನ ಬುರುಡೆಯಲ್ಲಿ ಎಂತೆಂಥ ನಿರ್ಧಾರಗಳು ಅಡಕವಾಗಿವೆಯೋ ಬಲ್ಲವರಾರು?'

ಮೂಗಿಗೆ ಹೇಗೂ ಇಂಥದೇ ಆಕಾರವಿರಬೇಕೆಂದು ನಿಯಮವೊಂದನ್ನು ಮಾಡಿ ಅದನ್ನು ಆಧಾರವಾಗಿಟ್ಟುಕೊಂಡು ಪ್ರತಿಯೊಬ್ಬರ ಮೂಗನ್ನೂ ಚರ್ಚಿಸಿ ಹಲವು 'ಲೇಬಲ್ಲು'ಗಳ ಕೆಳಗೆ ತಳ್ಳುವುದು ಮೌಢ್ಯದ ಪರಮಾವಧಿ. ಅವನ ಮೂಗು ಅವನಿಗೆ, ಇವನ ಮೂಗು ಇವನಿಗೆ ಚೆನ್ನು.

ಸೌಂದರ್ಯದ ದೃಷ್ಟಿಕೋನದಿಂದಲ್ಲದೆ ಆರೋಗ್ಯಶಾಸ್ತ್ರದ ರೀತಿಯಿಂದಲೂ ಮೂಗು ಮುಖ್ಯ. ಒಳಗಡೆಯ ಜೀವಾತ್ಮನ ಉಳಿವು ಅಳಿವು ಎಲ್ಲ ಮೂಗಿನಿಂದಲೇ. ಮೂಗು ಸುಯಿಚ್ಚ್ ಕಾಲುವೆಯಂತೆ: ಒಂದು ನಿಮಿಷ ಬಂದಾದರೂ ಸಾಕು, ಆ ಕಡೆಯ ಈ ಕಡೆಯ 'Transactions'ಗಳು ಲಾಗಹಾಕುತ್ತವೆ. ನಿಂತೇಹೋಗುತ್ತವೆಂದಲ್ಲ. ಹೊರಗಿನ ವಾಯುವನ್ನು ಒಳಕ್ಕೆ ಎಳೆದು ತನ್ನ ರೋಮರೋಮಗಳಿಂದಲೂ 'illicit entries'ಗಳನ್ನು ದ್ವಾರಪಾಲಕನಂತೆ ಆಚೆಗೆ ತಳ್ಳಿ, ನಿಮ್ಮ ನಮ್ಮ ಪ್ರಾಣಗಳನ್ನು ರೋಗರಾಕ್ಷಸರ ಕ್ರೂರದವಡೆಗಳಿಂದ ಬಿಡಿಸಿ ಸುರಕ್ಷಿತವಾಗಿ ತರುವುದು ಸಾಮಾನ್ಯ ಕೆಲಸವೆಂದು ತಿಳಿದುಕೊಂಡಿದ್ದೀರೇನು? ಇಂಥ ಮೂಗಿಗೆ ಮಹತ್ತ್ವವಿಲ್ಲವೆಂದರೇನು? ಜೀವಕೋಟಿಯ ಮೇಲೆ ಅದರ ಪ್ರೇಮ ಅದ್ಭುತವಾದದ್ದು.

ಮೂಗನ್ನು ಬರಿಯ ಒಂದು ಅಂಗವೆಂದು ಭಾವಿಸುವುದು ಮಾನವನ ಬುದ್ಧಿಹೀನತೆಯನ್ನು ತೋರಿಸುತ್ತದೆ. ಅದು ಅಂಗವೂ ಹೌದು, ಜೀವಿಯೂ ಹೌದು. ಇಷ್ಟೆಲ್ಲ ಮಹತ್ತ್ವವಿರುವ ಮೂಗಿಗೆ ಜೀವವಿರುವುದನ್ನೆ ಮರೆತುಬಿಡುತ್ತಾರೆ. ಚಳಿಯೆನ್ನದೆ, ಬಿಸಿಲೆನ್ನದೆ, ಹಗಲುರಾತ್ರಿಗಳೆನ್ನದೆ ಒಂದು ನಿಮಿಷ ಪುರುಸೊತ್ತಿಲ್ಲದೆ ದುಡಿಯುವ ಮೂಗಿಗೆ ಹಸಿವು ಉಂಟಾಗುವುದು ಸಹಜ. ತತ್‌ಕ್ಷಣ 'ಅಂಬಾಳ್' ಕಂಪೆನಿಯಲ್ಲಿ ತಯಾರಾದ ಆಹಾರವನ್ನು (ಕಾರದ ಪುಡಿಯಲ್ಲ!) ಅದರ ಎರಡೂ ಬಾಯಿಗಳ ಮುಖಾಂತರವಾಗಿ ಒದಗಿಸಲೇಬೇಕು. ಹಾಯ್! ಹೊಟ್ಟೆಗೆ ತಿಂಡಿ ಬಿದ್ದೊಡನೆ ಅದರ ಉದ್ಗಾರಗಳೇನು? ಆನಂದಸೂಚಕ ನಿನಾದಗಳ ಕಲರವವೇನು? ಹಿಂದಿನ ಕಾಲದವರು

ನಮಗಿಂತ ಮಾನವೀಯರಾಗಿದ್ದರು, ಪ್ರತಿಯೊಂದು ಜೀವಿಯಲ್ಲಿಯೂ ಸಹಾನು ಭೂತಿ ತೋರಿಸುತ್ತಿದ್ದರು. ಮನುಷ್ಯ ಬರಬರುತ್ತಾ ಬಹಳ ಕೆಟ್ಟವನಾಗಿದ್ದಾನೆ. ಅವನ ಹೃದಯ ಕಲ್ಲಾಗಿದೆ. ಸ್ವಾಮಿಭಕ್ತಿಯುಳ್ಳ ತನ್ನ ಭೃತ್ಯನಾದ ಮೂಗಿನ ಕಡೆಗೆ ಗಮನ ಕೊಡುವುದಿಲ್ಲ. ಅದರ ಕಷ್ಟ, ಹಸಿವು, ನೋವುಗಳ ಕಡೆಗೆ ಲಕ್ಷ್ಯವೇ ಇಲ್ಲ. ಆದ್ದರಿಂದ ಅದು ಹಲವುಸಾರಿ ಬುಸುಗುಟ್ಟುತ್ತದೆ.

ದೇವಮೂಲ ನದೀಮೂಲಗಳನ್ನು ಹುಡುಕಬಾರದೆಂಬುದು ಹೇಗೋ ಮೂಗಿನ ಮೂಲವೂ ಅದೇ ಪಂಕ್ತಿಗೆ ಸೇರಿದ್ದು. ನಿಮ್ಮ ತಮ್ಮ ರಾಮು ವನ್ನು ಹತ್ತಿರಕ್ಕೆ ಕರೆದು ಅವನ ವದನಾವಲೋಕನಮಾಡಿ. ನಿಮಗೆ ಕಾಣುವು ದೇನು? ಗುಪ್ತಗಾಮಿನಿಯಾಗಿ ಹರಿದು ಬಂದ ಗಂಗೆಯಮುನೆಗಳು ಉಬ್ಬರ ವಿಳಿತಗಳ ದೆಸೆಯಿಂದ ಒಳಕ್ಕೂ ಹೊರಕ್ಕೂ ಹರಿಯುತ್ತಿರುತ್ತವೆ. ಅದರ ದಡಗಳು ಗೊಬ್ಬರದಿಂದ ಹೆಪ್ಪುಗಟ್ಟಿರುತ್ತವೆ. ಹೊಳ್ಳೆಗಳು ತಿದಿಯಂತೆ ಒತ್ತು ತ್ತಿರುತ್ತವೆ. ಬೇಕಾದರೆ ಯಾರಾದರೂ ಯೋಚನೆ ಮಾಡಿ, ಅದರ ಮೂಲ ಗಳನ್ನು ಹುಡುಕಬಲ್ಲರೇನೋ ಎಂದು. ಕೆಲವುಸಾರಿ ಮೇಲ್ದುಟಿಯ ಹತ್ತಿರ ಸಂಗಮವಾಗಿ ಹರಿದು ಕೊಲ್ಲಿಯಲ್ಲಿ ಧುಮುಕಿ ಅದರ ಜೊಲ್ಲುನೀರಿನೊಂದಿಗೆ ವಿಲೀನವಾಗುತ್ತಿರುತ್ತದೆ. ಈ ಯಮಳ ನದಿಗಳು ಹರಿದುಬಂದ ಗುಹೆಗಳೆರಡರ ಬಾಯಲ್ಲಿ stalactites ಮತ್ತು stalagmites ಹೇರಳವಾಗಿ ಬೆಳೆದಿರುತ್ತವೆ. ಇಷ್ಟೆಲ್ಲ ಭೌಗೋಳಿಕ ಅನುಕೂಲತೆಗಳನ್ನು ಒದಗಿಸಿಕೊಟ್ಟ ಮೂಗಿಗೆ ಮಹತ್ವ ವಿಲ್ಲವೆನ್ನುತ್ತೀರಾ?

ಮೂಗು ಹಲವು ಸಾರಿ ಹುಷಾರಿಲ್ಲದೆ ಗುಪ್ತನಾಮಾಂಕಿತಗಳನ್ನು ವ್ಯಕ್ತಪಡಿಸಿ ಆಗುವ, ಆಗಬಹುದಾದ, ಅಪಾಯಗಳು, ಕಷ್ಟ ನಿಷ್ಠುರಗಳು, ಮನಸ್ತಾಪ, ಜಗಳಗಳು ಇವನ್ನೆಲ್ಲ ನಿಲ್ಲಿಸಿ ಜನಸೇವೆ ಮಾಡುತ್ತದೆ. ಉದ್ದ ವಾದ ವಿಶಿಷ್ಟಾಕೃತಿಯ ಮೂಗನ್ನು ಪಡೆದಿರುವವನ ಹೆಸರು 'ಗರುಡ ಯ್ಯಂಗಾರಿ' ಎಂದು ನಿಶ್ಚಿತವಾಗಿ ತಿಳಿಯಬಹುದು. ಥಪ್ಪ ಉಂಡೆ ಮೂಗಿ ನವರನ್ನು ಪೈಲ್ವಾನ್ ಅಣ್ಣಯ್ಯಪ್ಪನೆಂದು ಧ್ಯಾನಿಸಬಹುದು. ಜೋತಾಡುವಂತೆ ಬುಲಾಕು ಹಾಕಿರುವವಳನ್ನು 'ಅಮಿಾರ್ ಬೀ' ಎಂದು ಅರಿತುಕೊಳ್ಳ ಬಹುದು. ಪದಕಗಳಿಲ್ಲದೆ ಬಿಂ ಎನ್ನುತ್ತಿರುವ ಮೂಗಿನವರನ್ನು ಕಾಲೇಜು ಹುಡುಗಿಯರೆಂದು ಧಾರಾಳವಾಗಿ ಹೇಳಬಹುದು.

ಇದೆಲ್ಲಕ್ಕಿಂತ ಹೆಚ್ಚಾಗಿ ಮೂಗು ಪಂಚೇಂದ್ರಿಯಗಳಲ್ಲಿ ಅತಿ ಮುಖ್ಯವಾದ ಘ್ರಾಣೇಂದ್ರಿಯ. ಭಾನುವಾರ ಬೆಳಗ್ಗೆ ಹೊರಗಡೆ ರವಿಯುದಯವಾದರೂ ನಿಮ್ಮ ಕೋಣೆಯೊಳಗೆ ಆಗದಂತೆ ನೀವು ಕಿಟಕಿ ಬಾಗಿಲುಗಳನ್ನೆಲ್ಲ ಮುಚ್ಚಿ 'ಮಧುರ ತಲ್ಪ'ದೊಳು 'ಕಲ್ಪಕಲ್ಪ'ಗಳ ಸುಖದ ಸವಿಗನಸನ್ನು ಅನುಭವಿಸುತ್ತಾ ನಿಮ್ಮ ಆನಂದದ ಅತಿರೇಕಗಳನ್ನು ಗೊರಕೆಗಳ ಮುಖಾಂತರ ವ್ಯಕ್ತಪಡಿಸುತ್ತಾ ಇರುವಾಗ ಇದ್ದಕ್ಕಿದ್ದಂತೆ ಕೋಣೆಯಿಂದ ಹೊರಟು ನಿಮ್ಮ ರೂಮಿನೊಳಕ್ಕೆ ನುಸುಳಿ, ಅಲ್ಲಲ್ಲಿ ಸುಳಿಸುಳಿದು ಗಾಳಿಯಲ್ಲಿ ಮಿದುವಾಗಿ ಈಜಾಡಿ, ಹಿಂದಕ್ಕೆ ಓಡುತ್ತಿರುವ 'ಮಸಾಲೆ'ಯ ವಾಸನೆಯನ್ನು ಹೆಡೆಮುರಿಯ ಕಟ್ಟಿ ನಿಮ್ಮ ಹೃದಯಕ್ಕೆ ಒಪ್ಪಿಸಿ, ನಿಮ್ಮನ್ನು ಹತ್ತಾರು ಲೋಕಗಳಿಂದ ಭೂಲೋಕಕ್ಕೆ ಇಳಿಸಿ, ನಿಮ್ಮ ನಾಲಿಗೆಯ ನಾನಾ ಆಶಾಭಾವಗಳಿಗೆಲ್ಲ ಗಾಳಿಯೂದಿ ಎಬ್ಬಿಸಿ, ಕೋಣೆಯಲ್ಲಿ ತಯಾರಾಗುತ್ತಿರುವ ವಿವಿಧ ಭಕ್ಷ್ಯಭೋಜ್ಯ ಪರಮಾನ್ನಾದಿಗಳ ಚಿತ್ರವನ್ನು ಮಲಗಿದ್ದಲ್ಲಿಂದಲೇ ಕಣ್ಣ ಮುಂದೆ ಕಲ್ಪಿಸುವಂತೆ ಮಾಡಬಲ್ಲ ಮಹತ್ತು ಘ್ರಾಣೇಂದ್ರಿಯಕ್ಕಲ್ಲದೆ ಮತ್ತಾವ ಇಂದ್ರಿಯಕ್ಕೂ ಸಲ್ಲದು. ಸೋಮಾರಿಯಾದ ನಿಮ್ಮನ್ನು ತತ್‌ಕ್ಷಣವೇ ಎಬ್ಬಿಸಿ ಬೇಗಬೇಗ ಮುಖ ತೊಳೆದು ಅಡಿಗೆಯ ಕೋಣೆಗೆ ಹೋಗುವಂತೆ ಮಾಡುವ ಮಹತ್ತು ಮೂಗಿಗಲ್ಲದೆ ಮತ್ತಾವುದಕ್ಕಾದರೂ ಇರುವುದೆ?

ಮೂಗಿನ ಮತ್ತೊಂದು ಮಹತ್ತೇನೆಂದರೆ: ಇಷ್ಟೊಂದು ಮಹಿಮೆಯುಳ್ಳ ಅದನ್ನು ನೀವು ಲಕ್ಷಿಸದೆ, ಅದರ ಆಗುಹೋಗುಗಳಿಗೆ ಹಂಬಲ ಕೊರತೆಗಳಿಗೆ ಕಿವಿಗೊಡದೆ, ಕಾಲಕಾಲಕ್ಕೆ ಅದರ ಮೈಯಲ್ಲಿನ ಕೊಳೆಯನ್ನು ಮತ್ತು ಮೈಮೂಲಕವಾಗಿ ಬರಬಹುದಾದ ಕಶ್ಮಲಗಳನ್ನು ತೆಗೆದುಹಾಕಿ ಸರಿಯಾಗಿ ಸ್ನಾನ ಮಾಡಿಸದೆ ಹೋದರೆ, ದೊಡ್ಡ ದೊಡ್ಡ ಸ್ಥಳಗಳಲ್ಲಿ ನಿಮಗೆ ಕೈಕೊಟ್ಟು ಅಪಮಾನವಾಗುವಂತೆ ಮಾಡಿಬಿಡುವುದು . . . ಸಭೆಯೊಂದರಲ್ಲಿ ಭಾಗವಹಿಸಲು ನಿಮಗೆ ಆಹ್ವಾನಪತ್ರಿಕೆ ಬಂದಿರುತ್ತದೆ. ನಿಮ್ಮ ಹತ್ತಿರ ಕಾಸಿಲ್ಲದಿದ್ದರೂ ಕ್ಷೌರಿಕನ ಕರುಣೆಯನ್ನು ಮರೆಹೊಕ್ಕು ಗೋಗರೆತಗಳ ಮಳೆಯನ್ನು ಸುರಿದು, ನಿಮ್ಮ ಮೇಲೆ ಅವನಿಗೆ ಭರವಸೆ ತುಂಬಿ, ತಲೆ ಮುಖಗಳ ಮೇಲಿರುವ ಅನಿಷ್ಟದ ಹೊರೆಯನ್ನು ಇಳಿಸಿಕೊಂಡು ಬರುತ್ತೀರಿ. ಸ್ನಾನ ಗೀನ ಎಲ್ಲಾ ಮಾಡಿ, ಸ್ವಂತವಾಗಿ ಇಸ್ತ್ರಿ ಮಾಡಿದ ಬಟ್ಟೆಗಳನ್ನು ಜರ್ಬಾಗಿ ಹಾಕಿಕೊಂಡು

ಕಿರೀಟವಿಲ್ಲದೆ ಹೋಗುವುದು ಅಂಥ ದೊಡ್ಡ ಸಭೆಗೇ ಅವಮಾನಕರವೆಂದು ತಿಳಿದು ಅಗಸನಿಂದ ಬಾಡಿಗೆ ರುಮಾಲು, ಹಾಗೇ ಸ್ನೇಹಿತನಿಂದ ಬಾಡಿಗೆ ವಾಚು ಎಲ್ಲ ತರಿಸಿ, ವೇಷಭೂಷಣಸಮೇತರಾಗಿ ಹೊರಟು, ಕುಟುಂಬ ಪರಿವಾರಗಳಿಗೆಲ್ಲಾ ಒಮ್ಮೆ ಎಚ್ಚರಿಕೆಯ ಗುಟುರು ಹಾಕಿ, ಠೀವಿಯಿಂದ ರಸ್ತೆಯಲ್ಲಿ ಎಲ್ಲರನ್ನೊಮ್ಮೆ ನಿಮ್ಮನ್ನೊಮ್ಮೆ ನೋಡಿಕೊಳ್ಳುತ್ತಾ, ವಾಸ್ತವವಾಗಿ ಯಾರೂ ನಮಸ್ಕಾರ ಹೇಳದಿದ್ದರೂ ಹೇಳಿದರೆಂದು ಭ್ರಮೆಗೊಂಡು ಪ್ರತಿ ನಮಸ್ಕಾರ ಹೇಳಿ ಸಭೆಗೆ ಬರುತ್ತೀರಿ . . . ಬಾಗಿಲಲ್ಲಿ ನಿಂತಿರುವ ಮಹಾಪುರುಷರೆಲ್ಲರನ್ನೂ ಸ್ವಾಗತಿಸುವಾತ ಹಲ್ಲು ಕಿರಿದು 'ದಯಮಾಡಿ' ಎಂದು ನಿಮ್ಮನ್ನು ಒಳಗೆ ಕರೆದುಕೊಂಡು ಹೋಗಿ, ಮುಂದಿರುವ ಆಸನಗಳೊಂದರಲ್ಲಿ ಕೂಡಿಸುತ್ತಾನೆ. ಒಡನೆ ನಾಲ್ಕಾರು ದೊಡ್ಡ ಮುಂಡಾಸುಗಳು ನಿಮ್ಮ ಹತ್ತಿರ ಸೇರಿ ಹಸ್ತಲಾಘವ ಕೊಟ್ಟು ದಂತಪಂಕ್ತಿಮಯೂಖವನ್ನು ಬೀರುತ್ತಾರೆ. ನೀವೂ ಪ್ರತಿಕ್ರಿಯೆಯನ್ನು ಮಾಡಿ, ಅವರ ಪ್ರಶ್ನೆಗಳಿಗೆಲ್ಲ ಗಂಭೀರವಾಗಿ ಉತ್ತರ ಕೊಡುವ ಮಧ್ಯದಲ್ಲಿ, ನಿಮ್ಮ ವ್ಯಕ್ತಿತ್ವ ಇದ್ದಕ್ಕಿದ್ದಂತೆ ಪ್ರಕಾಶಿಸಿದ ರೀತಿಗೆ ನೀವು ಹರ್ಷೋತ್ಸಾಹದಲ್ಲಿರುವಲ್ಲಿ, ನೀವು ಶುದ್ಧಿ ಮಾಡಲು ಮರೆತ ನಿಮ್ಮ ಮೂಗು ಇದ್ದಕ್ಕಿದ್ದ ಹಾಗೆಯೇ ಮಂದ್ರ ಧ್ವನಿಯಿಂದ ತಾರಕ್ಕೇರಿ ಉಗ್ರಾವಸ್ಥೆಯಿಂದ ಝೇಂಕಾರ ಮಾಡಿ ಸಿಡಿಲೊಂದನ್ನು ಕಾರಿ, ಕಶ್ಮಲವನ್ನು ಬೀಳಿಸುತ್ತದೆ ನಿಮ್ಮ ಕೋಟಿನ ಮೇಲೆ. ಅದೂ ನಿಮ್ಮ ಎದುರಿನಲ್ಲಿ ನಿಂತಿರುವ ಗಣ್ಯ ವ್ಯಕ್ತಿಗಳ ಮುಂದೆ! ನೀವು ಚಕಿತರಾಗಿ ನೋಡುವಲ್ಲಿ ಕಾಮನಬಿಲ್ಲಿನಂತೆ ಬಗ್ಗಿ, ಅಷ್ಟೇ ಮೋಹಕವಾಗಿರುವ, ಸಿಂಬಳದ ಧಪ್ಪ ಎಳೆಯೊಂದು ನಿಮ್ಮ ಮೇಲ್ತುಟಿಗೂ ಕೆಳದುಟಿಗೂ ಸೇತುವೆ ಕಟ್ಟಿ ವಜ್ರಬಂಧವನ್ನು ಕಲ್ಪಿಸಿರುತ್ತದೆ. ಆಗ ಮೂಗನ್ನು ಅಲಕ್ಷ್ಯಮಾಡಿಬಿಟ್ಟದ್ದರಿಂದ ಉಂಟಾದ ಪರಿಣಾಮವನ್ನು ನೋಡಿ, ಅದರಿಂದ ಕುಪಿತರಾಗಿ ಕರವಸ್ತ್ರಕ್ಕೆಂದು ಜೇಬಿನಲ್ಲಿ ಕೈಹಾಕುತ್ತೀರಿ. ನಿಮ್ಮ ದುರಾದೃಷ್ಟಕ್ಕೆ ಅದು ಅಲ್ಲಿರುವುದೇ ಇಲ್ಲ! ಈಗೇನು ಮಾಡುವುದು? ಹುಡುಗರಂತೆ ಈ ಕೈಯಿ ಆ ಕೈಯಿಂದ ಎಳೆಯೋಣವೇ?

ಆಧ್ಯಾತ್ಮಿಕವಾಗಿಯೂ ಅಷ್ಟೆ, ಮೂಗಿನ ಮಹತ್ತ್ವ ಬಹಳ ದೊಡ್ಡದು. ಕಾಶಿಯಲ್ಲಿ ಗವಿಯ ಮೂಲಕವಾಗಿ ಹೊರಟ ಎಲ್ಲ ಸಾಧುಗಳಿಗೂ ಮುಕ್ತಿಯ ದಾರಿ ದೊರಕುವುದಿಲ್ಲ. ಪಾಪಿಗಳಾದವರಿಗಂತೂ ಇಲ್ಲವೇ ಇಲ್ಲ. ದಾರಿ ಸಿಕ್ಕದೆ

ಆ ಗಾಢಾಂಧಕಾರದ ತೆಕ್ಕೆಯಲ್ಲಿ ಬಿದ್ದು ತೊಳಲುತ್ತಿರುವ ಬಡಪಾಯಿಗಳನ್ನು ಉದ್ಧರಿಸಿ ರಾಮೇಶ್ವರದ ಗವಿಯ ಮೂಲಕ ಹೊರಗೆ ಸುರಕ್ಷಿತವಾಗಿ ಹಾಕುವಂತೆ ಬಾಯಲ್ಲಿ ತೂರಿದ ಕೆಲವು ಅನ್ನದ ಅಗುಳನ್ನು ಜೋಪಾನವಾಗಿ ತನ್ನ ಗವಿಯಿಂದ ಹೊರಕ್ಕೆ ಹಾಕಿ, ತ್ರಿಶಂಕುಸ್ವರ್ಗದಿಂದ ಬಿಡುಗಡೆಯನ್ನು ದಯಪಾಲಿಸುವ ಮೂಗಿನ ಅಪಾರಕರುಣೆಯ ಮುಂದೆ ಯಾವುದು ನಿಂತೀತು? ಇಷ್ಟೇ ಅಲ್ಲ. ಮೂಗನ್ನು ಹಿಡಿದು ನದಿಯಲ್ಲಿ ಎರಡು ಸಾರಿ ಮುಳುಗಿ, ಮೂರನೆಯ ಸಾರಿ ಮುಳುಗಿದ ಬಳಿಕ ನಿಮಗೆ ಕೈಲಾಸವನ್ನು ಕೊಡುತ್ತದೆ!

ಪ್ರಾಣಿವರ್ಗಗಳನ್ನು ನಮ್ಮ ಅಧೀನಕ್ಕೆ ತಂದುಕೊಡುವ, ಕೊಬ್ಬಿರುವ ಬಲಿಷ್ಠವಾದ ಪ್ರಾಣಿಗಳನ್ನು ಸುಲಭವಾಗಿ ಹತೋಟಿಗೆ ತಂದುಕೊಡುವ ಮೂಗಿನ ಘನತೆಯೇನು? ಅದರ ಮಾನವ ಪ್ರೇಮವೇನು? ನಿಮ್ಮ ಕೃತಕ ನಯನದ್ವಯಗಳನ್ನು ತನ್ನ ಬೆನ್ನಿನ ಡುಬ್ಬದ ಮೇಲೆ ಹೊತ್ತುಕೊಳ್ಳುವ ನಿಃಸ್ವಾರ್ಥ ಸೇವೆ ಎಂತಹದು? ಹಾಡು ಬರದಿದ್ದರೂ ಪರವಾಯಿಲ್ಲ, ಚಿಂತೆ ಮಾಡಬೇಡಿ, ಅದರಂತೆ ಗುಂಯಿಗುಟ್ಟುತ್ತೇನೆ ಎಂಬ ಅದರ ಧೈರ್ಯೋಕ್ತಿಯೇನು? ಹಾಲಿನ ಸಾಂದ್ರತೆಯನ್ನು ಅಳೆಯುವ ಲ್ಯಾಕ್ಟೋಮೀಟರಿನಂತೆ ಭಗ್ನಪ್ರೇಮಿಗಳ ನಿರಾಶೆಯ ನಿಟ್ಟುಸಿರಿನ ಗಾತ್ರವನ್ನು ಕರಾರುವಾಕ್ಕಾಗಿ ಅಳೆಯುವ ಅದರ ಕಾರ್ಯದಕ್ಷತೆಯೇನು?

ನಿಮ್ಮ ಹೆಸರು ಪ್ರಸಿದ್ಧಿಗೆ ಬರಲಿಲ್ಲವೆಂದು ಹತ್ತಾರು ನ್ಯೂಸ್ ಪೇಪರುಗಳ ಒಡೆಯರನ್ನು ಅಂಗಲಾಚಿ, ಹತ್ತಾರು ಸೌಂದರ್ಯ ಸ್ಪರ್ಧೆಗಳಲ್ಲಿ ಭಾಗವಹಿಸಿ ಹತಾಶರಾಗಿ, ಕೊನೆಗೆ ಜೀವನದಲ್ಲಿ ಬೇಸರವಾಗಿ ರಸ್ತೆಯ ಮೇಲೆ ಕಾಲೆಳೆದು ಬರುತ್ತಿರುವ ನಿಮ್ಮನ್ನು, ಅಕಸ್ಮಾತ್ತಾಗಿ ಟಾರಿನ, ಅಥವಾ ಮಸಿಯ ತುಣುಕೊಂದನ್ನು ತನ್ನ ಮೈಮೇಲೆ ಹೊತ್ತು, ರಸ್ತೆಯಲ್ಲಿ ಹೋಗುವ ಎಲ್ಲರ ಗಮನವನ್ನೂ ನಿಮ್ಮ ಕಡೆಗೆ ಸೆಳೆದು, ನಿಮ್ಮನ್ನು ಬೆಳಕಿಗೆ ತರುವ ಮೂಗಿನ ಶಕ್ತಿ ಸಾಮಾನ್ಯವಾದುದಲ್ಲ. ಅಂದು ನಿಮ್ಮ ಕಡೆಗೆ ಮುಖವೆತ್ತಿ ಕೂಡ ನೋಡದ ಜನ ಇಂದು ನಿಮ್ಮ ಸೌಂದರ್ಯಸಿದ್ಧಿಗೆ ಮೆಚ್ಚಿ, ಮುಗುಳುನಕ್ಕು, ನಿಮಗೆ ಸ್ವಾಗತವೀಯುತ್ತಾರೆ. ಸಣ್ಣ ಹುಡುಗರು, ನೀವು ಊರಾಚೆಯ ಭವನದಿಂದ ಇಳಿದು ಬಂದಿದೀರೆಂದು ತಿಳಿದು, ಕಲ್ಲಿನ ಪುಷ್ಪವೃಷ್ಟಿಯನ್ನು ಸುರಿಸುತ್ತಾರೆ. ತತ್‌ಕ್ಷಣವೇ ಗುಂಪೊಂದು ನಿಮ್ಮ ಮುಂದೆ ಸೇರುತ್ತದೆ. ನೀವು ನಿಮ್ಮ ಪರಿವಾರ

ಸಮೇತರಾಗಿ ಅವರ ಘೋಷಣೆಯೊಂದಿಗೆ ರಸ್ತೆಯಿಂದ ರಸ್ತೆಗೆ, ಚೌಕದಿಂದ ಚೌಕಕ್ಕೆ ಮೆರವಣಿಗೆ ಹೊರಟು ಬರುವಾಗ ಕನಿಷ್ಠ ಬಿಲ್ಲೆ ಅಡ್ಡಹಾಯ್ದು ನಿಮ್ಮನ್ನು ಸ್ವಾಗತಿಸುತ್ತಾನೆ. ಪತ್ರಿಕಾ ಪ್ರತಿನಿಧಿಗಳು ಫ್ಲಾಷ್‌ಲೈಟಿನಿಂದ ನಿಮ್ಮ ಸಾಕಾರಬಿಂಬವನ್ನು ತೆಗೆದುಕೊಳ್ಳುತ್ತಾರೆ.

ನಿಮ್ಮ ಜೀವನದ ಆಗುಹೋಗುಗಳೆಲ್ಲ, ಹೆಗ್ಘಟನೆಗಳೆಲ್ಲ ಮೂಗನ್ನು ಅವಲಂಬಿಸಿವೆ. ಆದುದರಿಂದಲೇ ಆಫೀಸಿನಲ್ಲಿ ನಿಮ್ಮ ಮ್ಯಾನೇಜರರು ದಂಡಿಸಿದಾಗ ನೀವು ಸೆಟೆತು 'ಮೂಗು ಮುರಿದು' ಮಾತಾಡಬೇಡಿ. ಬರುವುದರಲ್ಲಿದ್ದ ನಿಮ್ಮ ಪ್ರಮೋಷನ್ ಬೆನ್ನು ತೋರಿಸಿಬಿಟ್ಟೀತು! ನಿಮ್ಮ ಎರಡು ಡಜನ್ ಮಕ್ಕಳು ಮನೆಯಲ್ಲಿಯೇ ಸೊರಗಿ ಹೋದಾರು!

ಮೂಗಿನ ಮಹತ್ತ್ವವನ್ನು ಗಂಡಸರಿಗಿಂತ ಹೆಂಗಸರು ಹೆಚ್ಚಾಗಿ ಬಲ್ಲರು. ಆದುದರಿಂದಲೇ ಅವರು ಅದನ್ನು ಗೌರವಿಸಿ, ಅದನ್ನು ಆಭರಣಗಳಿಂದ ಮರ್ಯಾದೆ ಮಾಡುತ್ತಾರೆ. ತಿಳಿವಿನಲ್ಲಿ ತಾನೇ ಮೇಲೆಂದು ಬಡಾಯಿ ಹೊಡೆಯುವ ಗಂಡಸರಿಗೆ ತಿಳಿವು ಇನ್ನೂ ಸಾಲದು. ತಿಳಿದಿದ್ದರೆ ತಾನು ಎಂದೋ ಅದಕ್ಕೆ ಮುಜ್ಞರೆ ಒಪ್ಪಿಸುತ್ತಿದ್ದ. ಇರಲಿ. ಈಗಲೂ ಅಷ್ಟೇನೂ ಕಾಲ ಮಾರಿ ಹೋಗಿಲ್ಲ. ಒಂದು ವೇಳೆ ಮುಜ್ಞರೆ ಒಪ್ಪಿಸದಿದ್ದರೂ ಪರವಾಯಿಲ್ಲ. ಪ್ರತಿ ದಿನ ಪ್ರಾತಃ ಸಂಧ್ಯೆ ಮೂಗು ಹಿಡಿದು ಅದರ ಸ್ತೋತ್ರಮಾಡಿ. ಅದರಿಂದ ನಿಮಗೆ ಸುಖವುಂಟು, ಹಿತವುಂಟು.

ಜೈ ಮೂಗೆ!

**ಎನ್. ಲಿಂಗಪ್ಪ**

# ನಾನು ಕಂಡಿರುವ ಕಣ್ಣುಗಳು

ನನ್ನ ಹದಿನಾರು ವರ್ಷದ ಬಾಳಿನಲ್ಲಿ ಪ್ರಾಯಶಃ ಹದಿನಾರು ಸಾವಿರಕ್ಕಿಂತ ಹೆಚ್ಚು ಕಣ್ಣುಗಳನ್ನು ಕಂಡಿದ್ದೇನೆ. ಆದರೂ ಅವೆಲ್ಲವೂ ನನ್ನ ಮನಸ್ಸಿನ ಮೇಲೆ ತಮ್ಮ ಗುರುತನ್ನು ಬೀಳಿಸಿಲ್ಲ. ಕೆಲವು ಕಣ್ಣುಗಳನ್ನು ಮಾತ್ರ, ಈಗಲೂ ನನ್ನ ಕಣ್ಣ ಮುಂದೆ ಬರಿಸಿಕೊಳ್ಳಬಲ್ಲೆ. ಅವು ನನ್ನ ಮನಸ್ಸಿನಲ್ಲಿ ಅಚ್ಚಳಿಯದ ಚಿಹ್ನೆಗಳನ್ನು ನಿಲ್ಲಿಸಿಹೋಗಿವೆ.

ನಾನು ಕಂಡಿರುವ ಕಣ್ಣುಗಳು ನಾನಾ ತೆರನಾದುವು: ಕಾಮನ್ (Common) ಕಣ್ಣು, ಗೆಡ್ಡೆಗಣ್ಣು, ಮೆಳ್ಳೆಗಣ್ಣು, ಕಿರುಗಣ್ಣು, ಬಿರಿಗಣ್ಣು, ಬೆಕ್ಕಿನ ಕಣ್ಣು ಇತ್ಯಾದಿ. ಇನ್ನೂ ಅನೇಕ ವಿಧಗಳನ್ನು ಉದಾಹರಿಸಬಹುದು; ಅವೆಲ್ಲಾ ಅಷ್ಟು ಮುಖ್ಯವಲ್ಲ.

ನನ್ನ ಕಣ್ಣು 'ಕಾಮನ್' ಕಣ್ಣು ಎಂದು ನನ್ನ ಅಭಿಪ್ರಾಯ. ನನ್ನನ್ನು ನೋಡಬಲ್ಲ ತಮ್ಮ ಅಭಿಪ್ರಾಯ ಹೇಗಿರಬಹುದೋ? ಈ ನಿರ್ಣಯಕ್ಕೆ ಹೇಗೆ ಬಂದೆನೆಂದರೆ: ನನ್ನ ಕಣ್ಣು ಗೆಡ್ಡೆಗಣ್ಣಲ್ಲ, ಮೆಳ್ಳಗಣ್ಣು ಅಲ್ಲ, ಇಲಿಯ ಕಣ್ಣುಗಳಂತೆ ಕಿರುಗಣ್ಣುಗಳೂ ಅಲ್ಲ, ದನದ ಕಣ್ಣುಗಳಂತೆ ಬಿರಿಗಣ್ಣೂ ಅಲ್ಲ. ಖಂಡಿತವಾಗಿ ಬೆಕ್ಕಿನ ಕಣ್ಣು ಅಲ್ಲವೇ ಅಲ್ಲ. ಆದ್ದರಿಂದ ನನ್ನ ಕಣ್ಣು 'ಕಾಮನ್' ಕಣ್ಣಾಗಿಯೇ ಇರಬೇಕು ಎಂದು ನನ್ನ ತರ್ಕ.

ನನ್ನ ಸ್ನೇಹಿತ ಶಾಮಿಯ ಕಣ್ಣು ಎರಡನೇ ಜಾತಿಯವು. ರೆಪ್ಪೆಗಳನ್ನು ಮೀರಿ ಅವನ ಕಣ್ಣುಗುಡ್ಡೆಗಳು ಹೊರಕ್ಕೆ ಚಾಚಿ ಬಂದಿವೆ. ರೆಪ್ಪೆಗಳು ನಿಸ್ಸಹಾಯಕಗಳಾಗಿ ಹಿಂದುಗಡೆ ಬಿದ್ದು ಬಡಿದುಕೊಳ್ಳುತ್ತಿರುತ್ತವೆ. ಅವಕ್ಕಂತೂ ಖಂಡಿತವಾಗಿಯೂ ತಮ್ಮ ಕಣ್ಣುಗುಡ್ಡೆಯನ್ನ ಮುಚ್ಚುವುದಕ್ಕಾಗುವುದಿಲ್ಲ. ಶಾಮಿಯನ್ನ ನಾವು 'ಗೆಡ್ಡೆಗಣ್ಣ' ಎಂದು ಕರೆದಾಗ ನೋಡಬೇಕು—ಅವನ ಕಣ್ಣುಗಳು ಕೆಂಪಗಾಗಿ, ಮೊದಲೇ ವಿಕಾರವಾಗಿದ್ದವು ಇನ್ನೂ ವಿಕಾರವಾಗುತ್ತವೆ. ಒಂದು ನಿಮಿಷ ಕೂಡ ದಿಟ್ಟಿಸಿ ನೋಡುವುದಕ್ಕಾಗ್ವುವುದಿಲ್ಲ.

ನನ್ನ ಪ್ರೈಮರಿ ಸ್ಕೂಲ್ ಮೇಷ್ಟರೊಬ್ಬರಿಗೆ ಮೆಳ್ಳೆಗಣ್ಣಿತ್ತು. ಅವರೀಗ ಸ್ವರ್ಗಸ್ಥರಾಗಿದ್ದಾರೆ; ಅವರನ್ನು ಹಾಸ್ಯಮಾಡುವುದು ನನ್ನ ಉದ್ದೇಶವಲ್ಲ.

ಆದರೆ ಅವರ ಕಣ್ಣುಗಳನ್ನು ನಾನೆಂದೂ ಮರೆಯಲಾರೆ. ಅವರು ಕಣ್ಣುಗಳನ್ನು ಒಂದು ಕಡೆ ತಿರುಗಿಸಿದ್ದರೆ, ಮತ್ತೊಂದು ಕಡೆ ನೋಡುತ್ತಿದ್ದರು ಎಂದು ಅರ್ಥ. ನಾವೆಲ್ಲ ಗಲಾಟೆಮಾಡುತ್ತ ಕ್ಲಾಸಿನಲ್ಲಿ ಕುಳಿತಿದ್ದಾಗ, ನನ್ನ ಕಡೆಗೆ ಅವರು ಕಣ್ಣು ಹೊರಳಿಸಿದರೆ, ನನಗೆ ಯಾವ ಅಪಾಯವೂ ಇಲ್ಲವೆಂಬುದು ಖಂಡಿತ. ನನ್ನ ಪಕ್ಕದವನ ಅಥವಾ ಅವನ ಪಕ್ಕದವನ ಕಡೆಗೆ ಅವರು ದೃಷ್ಟಿ ಹೊರಳಿಸಿದ್ದರೆ, ನನಗೆ ಅಪಾಯವೆಂಬುದು ಅಷ್ಟೇ ಖಂಡಿತ. ಅವರ ಈ ಮೆಳ್ಳೆಗಣ್ಣಿನಿಂದ ಎಂತಹ ಆಭಾಸವಾಗುತ್ತಿತ್ತು ಎಂಬುದಕ್ಕೆ ಅನೇಕ ಕಥೆಗಳು—ನಿಜವಾದವು—ಇವೆ. ಒಂದು ಸಲ ಇವರ ಮನೆಗೆ ಅತಿಥಿಗಳೊಬ್ಬರು ಬಂದರು. ಮನೆಯಲ್ಲಿ ಇವರ ಹೆಂಡತಿ ಮತ್ತು ಹೆಂಡತಿಯ ತಂಗಿ ಇಬ್ಬರೂ ಹತ್ತಿರದಲ್ಲಿದ್ದಾಗ, ಹೆಂಡತಿಯ ತಂಗಿಯ ಕಡೆ ದೃಷ್ಟಿ ತಿರುಗಿಸಿ, ಹೆಂಡತಿಗೆ ಹೇಳಬೇಕಾದುದನ್ನು ಹೇಳಿದರು. ಅತಿಥಿಗಳು, ಪಾಪ, ಇವರ ಮೆಳ್ಳೆಗಣ್ಣನ್ನ ಬಂದ ರಾತ್ರಿ ಪರೀಕ್ಷಿಸಿರಲಿಲ್ಲ. ಆದ್ದರಿಂದ ಹೆಂಡತಿಯ ತಂಗಿಯನ್ನೇ ಇವರ ಹೆಂಡತಿಯನ್ನಾಗಿ ಭಾವಿಸಿದರು. ಮನೆಯಿಂದ ಹೊರಡುವಾಗ, ಸಂಪ್ರದಾಯದಂತೆ, ಮೇಷ್ಟರಿಗೆ —"ತಮ್ಮ ಯಜಮಾನಿತಿಗೂ ಹೇಳಿ. ನನ್ನಿಂದ ಶ್ರಮವಾಗಿರಬಹುದು" ಎಂದರು. ಅಷ್ಟರಲ್ಲೇ ಮೇಷ್ಟರ ಹೆಂಡತಿಯ ತಂಗಿ ಕಾಣಿಸಿಕೊಂಡಳು. ಅವಳಿಗೆ "ತಮಗೂ ತಮ್ಮ ಯಜಮಾನರಿಗೂ ನನ್ನಿಂದ ಬಹಳ ತೊಂದರೆಯಾಯಿತು. ಒಂದು ಸಲ (ಮೇಷ್ಟರ ಕಡೆ ಕೈ ತೋರಿಸಿ) ತಮ್ಮ ಯಜಮಾನರನ್ನೂ ಕರೆದುಕೊಂಡು ನಮ್ಮೂರ ಕಡೆಗೆ ಬನ್ನಿ" ಎಂದರು ಆ ಅತಿಥಿಗಳು. ಎಷ್ಟು ಆಭಾಸವಾಯಿತೋ!

ಕಿರುಗಣ್ಣು, ಬಿರಿಗಣ್ಣುಗಳು ಮೆಳ್ಳೆಗಣ್ಣಿನಂತೆ ಅಷ್ಟು ಸಾಮಾನ್ಯವಲ್ಲ. ಕೊಂಚ ಅಪರೂಪ. ನಮ್ಮೂರಿನ ಅಗಸ ಓಬನಿಗೆ ಒಂದು ಕಣ್ಣು ಕಿರುಗಣ್ಣು, ಮತ್ತೊಂದು ಬಿರಿಗಣ್ಣು. ಆದರೂ ಒಟ್ಟಿನಲ್ಲಿ ದೃಷ್ಟಿದೋಷವಿಲ್ಲ.

ಬೆಕ್ಕಿನ ಕಣ್ಣು ಸಾಧಾರಣವಾಗಿ ಕೆಂಪು ಜನರ, ಬಿಳಿಯ ಜನರ ಹಕ್ಕು, ಅವರ ಆಸ್ತಿ. ಪಾಶ್ಚಾತ್ಯರ ಕಣ್ಣುಗಳೆಲ್ಲಾ ಸುಮಾರು ಬೆಕ್ಕಿನ ಕಣ್ಣುಗಳೇನೆ. ಇದರಿಂದ ಅವರಿಗೂ ಬೆಕ್ಕುಗಳಿಗೂ ಯಾವುದಾದರೂ ಒಂದು ವಿಧವಾದ ಸಂಬಂಧವಿದೆಯೇ ಎಂಬುದನ್ನು ಪರಿಶೀಲಿಸುವುದು ವಿಕಾಸವಾದಿಗಳ ಭಾರ. ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕುಡಿಯುವ ಸ್ವಭಾವ ಈ ಪರಿಶೀಲನೆ

ಯಲ್ಲಿ ಏನನ್ನಾದರೂ ಬೆಳಕಿಗೆ ತರುತ್ತದೆಯೇ ಎಂಬ ಪ್ರಶ್ನೆಯನ್ನು ಪ್ರಾಣಿ ಶಾಸ್ತ್ರಿಗಳಿಗೂ ಮನಶ್ಶಾಸ್ತ್ರಿಗಳಿಗೂ ಬಿಟ್ಟುಬಿಡೋಣ. ಹೇಗಾದರೂ ಆಗಲಿ, ನಮ್ಮ ಹಿಂದಿನ ಕವಿಗಳಾರೂ ಈ ಮಾರ್ಜಾರಾಕ್ಷಿತ್ವವನ್ನು ಒಪ್ಪಿದಂತೆ ಕಾಣು ವುದಿಲ್ಲ. ಕಣ್ಣುಗುಡ್ಡೆಗಳ ಸೌಂದರ್ಯ ಅದರ ಕಪ್ಪುಬಣ್ಣದಲ್ಲಡಗಿದೆ ಎಂದು ಎಲ್ಲರೂ ಬಗೆದಂತೆ ಕಾಣುತ್ತದೆ. ಈ ಮಾರ್ಜಾರಾಕ್ಷಿತ್ವವನ್ನು ಇತ್ತೀಚಿನ ಸಂಸ್ಕೃತ ಕವಿಗಳಲ್ಲೊಬ್ಬರಾದ ಶ್ರೀ ಕೆ. ಎಸ್. ಕೃಷ್ಣಮೂರ್ತಿ ಶಾಸ್ತ್ರಿಗಳವರು ಈ ರೀತಿ ಬರೆದಿದ್ದಾರೆ:

ಕೈಶ್ಯಂ ಪಿಂಗಂ ಕತಿಚನ ವಹಂತ್ಯೋऽಪಿ ಸಂದರ್ಶನೀಯಾಃ
ಪುಂಭಿಃ ಸಾರ್ಧಂ ಸರಸವಿಹೃತೌ ನಿಸ್ತ್ರಪಾ ಗೌರವರ್ಣಾಃ ।
**ಮಾರ್ಜಾರಾಕ್ಷ್ಯಃ** ಸ್ಥಲ ಕಮಲರುಗ್ಗಂಡಪಾಲೀಮನೋಜ್ಞಾಃ
ಸಾಯಂ ಕ್ರಾಮ್ಯಂತ್ಯುದಧಿಪವನಂ ಸೇವಿತುಂ ಹೂಣನಾರ್ಯಃ ॥

(ಪ್ರಕೃತಿ ವಿಲಾಸಕಾವ್ಯ—ಪ್ರಥಮ ವಿಲಾಸ)

ಪಾಶ್ಚಾತ್ಯ ಸ್ತ್ರೀಯರು ಮಾರ್ಜಾರಾಕ್ಷ್ಯರಾದರೂ ಸಂದರ್ಶನೀಯರು. ಆದರೆ ನನ್ನ ಪಕ್ಕದ ಮನೆ ಗುಂಡನ ಬೆಕ್ಕಿನ ಕಣ್ಣು ಅವನ ರೂಪನ್ನು ಏರಿಸುವುದಿರಲಿ, ಖಂಡಿತವಾಗಿಯೂ ಕುಗ್ಗಿಸುತ್ತದೆ.

ನಾನು ಕಂಡಿರುವ ಮತ್ತೆ ಕೆಲವರ ಕಣ್ಣುಗಳೇ ಒಂದು ತರಹ. ಅವು ತಮ್ಮ ಹೊರ ಆಕೃತಿಗಿಂತ ಹೆಚ್ಚಾದ ಭಾವವೊಂದನ್ನು ಅಡಗಿಸಿಕೊಂಡಿರುತ್ತವೆ. ಕಣ್ಣಿನ ಆಕಾರ ಗೌಣ, ಅದರ ಹಿನ್ನೆಲೆಯಲ್ಲಡಗಿರುವ ಒಂದು ದಿವ್ಯ ಶಕ್ತಿ—ತೇಜಸ್ಸು—ಅದೇ ಪ್ರಧಾನ. ನಮ್ಮೂರಿನ 'ತಾತ' ಅವರ ಕಣ್ಣುಗಳಲ್ಲಿ ಆ ತೆರನ ಒಂದು ಗಂಭೀರವಾದ ತೇಜಸ್ಸು ಅಡಗಿದ್ದಿತು. 'ತಾತ' ಅವರು ನಮ್ಮೂರಿಗೆಲ್ಲಾ ಹಿರಿಯರು; ವಯೋವೃದ್ಧರು, ಜ್ಞಾನ ವೃದ್ಧರು. ಅವರ ಗುಳಿಬಿದ್ದ ಕಣ್ಣು ಗಳನ್ನು ಕಂಡೊಡನೆ ಯಾರಿಗಾದರೂ ಪೂಜ್ಯಭಾವನೆ ತೋರಿಬರುತ್ತಿತ್ತು. ನಮ್ಮೂರಿನ ಹೊನ್ನಲಗನ ಕಣ್ಣುಗಳು ಗುಳಿಬಿದ್ದಿದ್ದರೂ, ಅವನನ್ನು ಕಂಡಾಗ ನಮಗೆ ಪೂಜ್ಯಭಾವನೆ ಬರುವುದಿಲ್ಲ. 'ತಾತ' ಅವರ ಆಳವಾದ ಕಣ್ಣುಗಳು ಅವರ ಆಳವಾದ ಜ್ಞಾನವನ್ನು, ಬಾಳಿನಲ್ಲಿ ಅವರು ಪಡೆದ ಉಪಲಬ್ಧಿಯನ್ನು ಸೂಚಿಸುತ್ತಿದ್ದುವು. ಅವರ ಕಣ್ಣುಗಳಿಂದ ಶಾಂತರಸ ಬುಗ್ಗೆಯಂತೆ ಚಿಮ್ಮಿ ಬರುತ್ತಿತ್ತು.

ನಾವು ಚಿಕ್ಕವರಾಗಿದ್ದಾಗ, ತಂಟೆ ತುಂಟತನ ಮಾಡಿದರೆ, ಹಿರಿಯರು "ಶಾಮಣ್ಣನ್ನ ಕರೀತೀನಿ, ನೋಡು. ಅಳೋದನ್ನ ನಿಲ್ಲಿಸ್ತೀಯೋ ಇಲ್ಲವೋ?" ಎಂದು ಬೆದರಿಸುತ್ತಿದ್ದರು. ಈ ಬೆದರಿಕೆಗೆ ಜಗ್ಗದ ಗಟ್ಟಿ ಹುಡುಗ ನಮ್ಮೂರಿನಲ್ಲಿ ಒಬ್ಬನೂ ಇಲ್ಲ. ಜಡಿಮಳೆ ಸುರಿದಂತೆ ಒಂದೇ ಸಮನೆ ಕಿರುಚುತ್ತಿರುವ ಹುಡುಗ ತನ್ನ ಅಳುವನ್ನು ಇದ್ದಕ್ಕಿದ್ದಂತೆ ನಿಲ್ಲಿಸುತ್ತಿದ್ದ. ಅಮ್ಮನನ್ನು ತಿಂಡಿಗೆ ಪೀಡಿಸುತ್ತಿದ್ದ ಹುಡುಗ ಇದ್ದಕ್ಕಿದ್ದಂತೆ ಅಮ್ಮನನ್ನು ಬಿಟ್ಟು, ಆಟಕ್ಕೆ ಓಡಿ ಹೋಗುತ್ತಿದ್ದ. ಮಣ್ಣನ್ನು ಒಂದೇ ಸಮ ತನ್ನ ಮೈಮೇಲೆಲ್ಲಾ ಸುರಿದು ಕೊಳ್ಳುತ್ತಿದ್ದ ಹುಡುಗ ತಟಕ್ಕನೆ ತಲೆ ಮೈಗಳನ್ನು ಕೊಡವಿಕೊಂಡು ಮನೆಯ ಒಳಕ್ಕೆ ಓಡುತ್ತಿದ್ದ. ಹಾಗಿತ್ತು ಶಾಮನಾಮದ ಮಹತ್ತ್ವ! ನಿಜವಾಗಿ ಶಾಮಣ್ಣ ಕ್ರೂರರೇನಾಗಿರಲಿಲ್ಲ. ಆದರೆ ಅವರನ್ನು ಕಂಡೊಡನೆ, ಒಂದು ಅನಿರ್ವಚನೀಯವಾದ ರುದ್ರತೇಜಸ್ಸು ಎದ್ದು ಕಾಣುತ್ತಿತ್ತು. ಅವರ ಕಣ್ಣು ಗಳೂ 'ತಾತ' ಅವರ ಕಣ್ಣುಗಳಂತೆ ಗುಳಿಬಿದ್ದುವೇ ಆದರೂ ಅವರ ಕಣ್ಣಿನಲ್ಲಿ ತೋರುತ್ತಿದ್ದ ಶಾಂತರಸಕ್ಕೂ ಇವರ ಕಣ್ಣಿನಲ್ಲಿ ತೋರುತ್ತಿದ್ದ ರೌದ್ರರಸಕ್ಕೂ ಅರ್ಥಾರ್ಥ ಸಂಬಂಧವಿರಲಿಲ್ಲ. ಇವರ ಕಣ್ಣು ಇಷ್ಟು ರೌದ್ರವಾಗಿ ಕಂಡರೂ, ಒಂದು ದಿನವಾದರೂ ಇವರು ಹುಡುಗರನ್ನು ಹೊಡೆಯಲಿಲ್ಲ, ಬರಿಯ ಬಾಯಿ ಮಾತಿನಲ್ಲೇ ಬೆದರಿಸುತ್ತಿದ್ದರು. ಈಗ ಶಾಮಣ್ಣನವರು ನಮ್ಮನ್ನಗಲಿದ್ದರೂ ಅವರ ಮುಖವನ್ನು, ಅವರ ಆ ಕಣ್ಣುಗಳನ್ನು ನನಗೆ ಮರೆಯುವುದಕ್ಕಾ ಗುವುದಿಲ್ಲ. ಅಂತಹ ಅಚ್ಚಳಿಯದ ಗುರುತುಗಳನ್ನು ಆ ಕಣ್ಣುಗಳು ನನ್ನ ಮನಸ್ಸಿನಲ್ಲಿ ಬಿಟ್ಟುಹೋಗಿವೆ.

ನಾನು ಚಿತ್ರಗಳಲ್ಲಿ ಕಂಡಿರುವ ಕಣ್ಣುಗಳಲ್ಲಿ ನನ್ನ ಮನಸ್ಸನ್ನು ಆಕರ್ಷಿ ಸಿರುವುವೆಂದರೆ—ಸ್ವಾಮಿ ವಿವೇಕಾನಂದರ ಕಣ್ಣುಗಳು. ಅವರ ಕಣ್ಣುಗಳನ್ನು ನೋಡುತ್ತಿದ್ದಂತೆ, ನನ್ನ ಮನಸ್ಸಿನಲ್ಲಿ ತೋರುವ ಭಾವಗಳನ್ನು ವ್ಯಕ್ತಪಡಿಸದೆ ಇರುವುದೇ ಆ ಭಾವನೆಗಳ ಮೇಲೆ ನನಗಿರುವ ಪೂಜ್ಯತೆಯನ್ನು ಸ್ಪಷ್ಟಪಡಿಸು ತ್ತವೆ. ಅವರ ಕಣ್ಣುಗಳಲ್ಲಿ ಕಾಣಬಹುದಾದ ನಮ್ಮ ಪ್ರತಿಬಿಂಬಗಳಿಗಿಂತಲೂ ಚಿಕ್ಕದಾಗುತ್ತವೆ ನಮ್ಮ ಮಾನವೀಯತೆ, ಅವರ ಕಣ್ಣುಗಳ ಚಿತ್ರವನ್ನು ನೋಡಿದಾಗ. ಇನ್ನು ಅವರ ಕಣ್ಣುಗಳನ್ನು ಎದುರಿಗೆ ನೋಡುವ ಸೌಭಾಗ್ಯ ನನಗೆ ಇದ್ದಿದ್ದರೆ, ಯಾವ ಭಾವನೆಗಳು ಮೂಡುತ್ತಿದ್ದವೋ ಯಾರು ಬಲ್ಲರು?

ನಾನು ಇನ್ನೂ ಕಾಣದಿರುವ ಕಣ್ಣುಗಳೆಂದರೆ ನಲ್ಲೆಯ "ನಿಲದಾಡುವ ಕಂಗಳು." ಅವುಗಳನ್ನು ಬರಿಯ ಕಾವ್ಯ ಪ್ರಪಂಚದಲ್ಲಿ ಓದಿ ಬಲ್ಲೆ—ಅದೂ ಕಿಂಚಿತ್ತು. ದ್ರೌಪದಿ ವಿರಾಟನ ಪಟ್ಟಣಕ್ಕೆ ಬಂದಾಗ, ಆಕೆಯ "ಕಂಗಳಿನ ಮಿಂಚಿನ ಹೊಳಹಿನಲಿ ನಡೆಗೆಟ್ಟು ನಿಂದರು ಚಿತ್ತವಿಹ್ವಲರು" ಎಂಬ ಆ ಮಿಂಚಿನ ಹೊಳಹು ಅದಾವ ತೆರನದೋ ನನ್ನ ಊಹೆಗೆ ನಿಲುಕದು. "ಬಾನ್ನೀರೆಯೊರ್ವ"ಳ "ಚಂಚಲ ದೃಷ್ಟಿಯಿನ್" ಅಂಥ ಪೆಣ್ಗಳ ಕಣ್ಣಿನ ಚಾಂಚಲ್ಯವನ್ನು ಊಹಿಸಿಕೊಳ್ಳಬೇಕು. ದುಷ್ಯಂತನನ್ನು ನೋಡುತ್ತ ನೋಡುತ್ತ ಮುಂದೆ ನಡೆದ ಶಕುಂತಲೆಯ ದೃಷ್ಟಿಯೂ ಕೂಡ ಹೀಗೆಯೆ. ಈ 'ಚಂಚಲದೃಷ್ಟಿ' ನನ್ನ ಭಾಗಕ್ಕೆ ಅ-ದೃಷ್ಟ.

ನಾನು ನೋಡಿರುವ ಮತ್ತೊಂದು ಕಣ್ಣು: 'ಜಗಚ್ಚಕ್ಷು.' ಆ ಕಣ್ಣನ್ನು ಉದಯದಲ್ಲಿ ಮತ್ತು ಅಸ್ತಮಯದಲ್ಲಿ ಮಾತ್ರ ನೋಡಿದ್ದೇನೆ. ಮಧ್ಯಾಹ್ನ ಕಾಲದಲ್ಲಿ 'ಜಗಚ್ಚಕ್ಷು'ವನ್ನು ಒಂದು ಕ್ಷಣ ಕೂಡ ಎವೆಯಿಕ್ಕದೆ ನೋಡಲಾರದ ಮಂದಭಾಗ್ಯ ನಾನು. ಉದಯದಲ್ಲಿ ಮತ್ತು ಅಸ್ತಮಯದಲ್ಲಿ ಕಾಣುವ ತೇಜದಿಂದ ಆತನ ಮಧ್ಯಾಹ್ನಕಾಲದ ತೇಜಸ್ಸನ್ನು ಊಹಿಸಿಕೊಳ್ಳಬೇಕು. ಉದಯದಲ್ಲೂ ಅಸ್ತಮಯದಲ್ಲೂ ಕಂಡ ಆ ಜಗಚ್ಚಕ್ಷುವಿನ ದಿವ್ಯಪ್ರಭೆಯನ್ನು ಅಪೂರ್ಣವಾಗಿ ವರ್ಣಿಸುವುದಕ್ಕಿಂತ, ವರ್ಣಿಸದೆ ಮೌನಗೌರವವನ್ನು ತೋರಿಸುವುದೇ ಲೇಸು.

**ಜಿ. ಎಸ್. ಶ್ರೀನಿವಾಸಮೂರ್ತಿ**

# ಸಸ್ಯ ಸೌಂದರ್ಯ

ಸೆಂಟ್ರಲ್ ಕಾಲೇಜಿನ ಸಸ್ಯಶಾಸ್ತ್ರಸಂಘದ ಬೆಳ್ಳಿಯ ಹಬ್ಬದ ಅಂಗವಾಗಿ ಏರ್ಪಡಿಸಿದ್ದ 'ಪ್ರದರ್ಶನ'ಕ್ಕೆ ಹೋಗಿ ಬಂದವರು ಅದನ್ನು ಕುರಿತು ಒಂದು 'ಎಸ್ಸೆ' ಬರೆದುಕೊಡಿ ಎಂದು ಕರ್ಣಾಟಕ ಸಂಘದವರು ಕೇಳಿದ್ದಾರೆ. ಪ್ರದರ್ಶನಕ್ಕೆ ನಾನೂ ಹೋಗಿದ್ದೆನಾದರೂ ನಾನು ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಯಲ್ಲ, ಕರ್ಣಾಟಕ ಸಂಘದ ಸದಸ್ಯನೂ ಅಲ್ಲ. ನಾನೂ ಬರೆಯಬಹುದೆ? ಬರೆದರೆ ಯಾರು ಇದನ್ನು ನೋಡುವವರು? "ಎಸ್ಸೆ ಚೆನ್ನಾಗಿ ಬಂದರೆ ಅದನ್ನು 'ಕಾಲೇಜು ಬರವಣಿಗೆ—ಎರಡನೆಯ ಆವರ್ತ'ದಲ್ಲಿ ಅಚ್ಚು ಮಾಡೋಣ" ಎಂದಿದ್ದಾರೆ, ಕರ್ಣಾಟಕ ಸಂಘದವರು. ಈ 'ಕಾಲೇಜು ಬರವಣಿಗೆ'ಯಲ್ಲಿ ಅಚ್ಚಾಗುವ ಲೇಖನಗಳು ಸೆಂಟ್ರಲ್ ಕಾಲೇಜಿನವರೇ ಬರೆದದ್ದಾಗಬೇಕೆ? ಬೇರೆ ಕಾಲೇಜಿನವರು ಬರೆದುದನ್ನೂ ಅಚ್ಚುಮಾಡುತ್ತಾರೆಯೊ? . . . ಉತ್ತಮವಾದ ವಿಷಯ ಮುಂದಿರುವಾಗ ಯಾರು ಬರೆದರೇನು? ಸಾಹಿತ್ಯದ ಸೀಮೆಯಲ್ಲಿ ಯಾರು ಕಾಲಿಡುವುದಕ್ಕೆ ಯಾರದು ಅಡ್ಡಿ? ಅಲ್ಲದೆ, ವಿಷಯ ಚೆನ್ನಾಗಿದೆಯೆಂದು ಬರೆಯಬೇಕೇ ವಿನಾ ಅದು 'ಕಾಲೇಜು ಬರವಣಿಗೆ'ಯಲ್ಲಿ ಅಚ್ಚಾಗದಿದ್ದರೂ ಪರವಾ ಇಲ್ಲ . . .

ನಾನೊಬ್ಬ 'ವಾಸ್ತುಶಿಲ್ಪ'ದ ವಿದ್ಯಾರ್ಥಿ. ನನಗೂ ಸಸ್ಯಶಾಸ್ತ್ರಕ್ಕೂ ಸಂಬಂಧವೇನಿದೆ ಎನ್ನಬಹುದು? ವಾಸ್ತುಶಿಲ್ಪ ಮೊತ್ತಮೊದಲು ಜನಿಸಲು ಮಾನವನು ಸಸ್ಯವರ್ಗವನ್ನೆ ಮರೆಹೊಗಬೇಕಾಯಿತು. ವಾಸ್ತುಶಿಲ್ಪ ಉನ್ನತ ಸ್ಥಿತಿಗೇರಲು ಅವಕಾಶ ದೊರಕಿಸಿದವುಗಳಲ್ಲಿ ಆವಶ್ಯಕತೆ ಒಂದು; ಎರಡನೆಯದು ಅದರಲ್ಲಿ ಮನುಷ್ಯನಿಗೆ ಆಸಕ್ತಿಯನ್ನುಂಟುಮಾಡಿದ ಕಲೆ, ಶಿಲ್ಪಕಲೆ. ಪ್ರಾಚೀನ ಹಾಗೂ ಅರ್ವಾಚೀನ ಶಿಲ್ಪಗಳು ನಮಗೆ ದಯಪಾಲಿಸಿರುವ ಕೆತ್ತನೆಯ ಕೆಲಸಗಳನ್ನೀಕ್ಷಿಸಿದರೆ ನಮಗೆ ಅದರಲ್ಲಿ ಸಸ್ಯವೈಭವವೇನೆಂದು ಗೊತ್ತಾಗುತ್ತದೆ. ಹೆಚ್ಚುಕಡಮೆ ಎಲ್ಲ ವಿಗ್ರಹಗಳಲ್ಲೂ ದೇವಾಲಯಗಳಲ್ಲೂ ಬಳ್ಳಿಗಳೇ ಇತ್ಯಾದಿಯಾಗಿ ಸಸ್ಯಸಂಬಂಧವಾದ ಚಿತ್ರಗಳನ್ನು ಬಿಡಿಸಿರುವುದು ಕಾಣಬಹುದು. ಅಷ್ಟೇ ಅಲ್ಲ. ಪ್ರಕೃತಿಗೂ ನನಗೂ ನಿಕಟಸಂಬಂಧವಿದೆ. ಅದು ಪ್ರದರ್ಶಿಸುವ ಸೌಂದರ್ಯವನ್ನು ನೋಡಿ ನೋಡಿ, ಎಷ್ಟೋ ಸಾರಿ ಮರುಳಾಗಿದ್ದೇನೆ.

*   *   *   *   *

ಸುಂದರವಾದ ವಸ್ತುಗಳ ದರ್ಶನದಿಂದ ನಮಗೆ ಆನಂದವಾಗುತ್ತದೆ. ಇದನ್ನು ಎಲ್ಲರೂ ಬಲ್ಲರು. ಸುಂದರವಾದ ವಸ್ತುಗಳನ್ನು ಎರಡು ಭಾಗವಾಗಿ ವಿಂಗಡಿಸಬಹುದು: ೧. ಪ್ರಕೃತಿ ಕೊಟ್ಟ ವಸ್ತುಗಳು, ಅಥವಾ ಸಹಜವಾದ ವಸ್ತುಗಳು; ೨. ಮಾನವರು ನಿರ್ಮಿಸಿದ ವಸ್ತುಗಳು. ಇದರಲ್ಲಿ ಮೊದಲನೆಯ ಭಾಗದ ವಸ್ತುಗಳು ನಮಗೆ ಪ್ರಕೃತ.

ಪ್ರಕೃತಿ ಕೊಡುವ ವಸ್ತುಗಳಲ್ಲಿ ಸಸ್ಯಗಳು ವಿಶಿಷ್ಟವಾದ ಸ್ಥಾನವನ್ನು ಪಡೆದಿವೆ. (ವಿಶಿಷ್ಟವಾದ ಸ್ಥಾನವೆಂದರೆ ಅದು ನಮ್ಮ— ಮನುಷ್ಯರ—ದೃಷ್ಟಿಯಲ್ಲಿ ಮಾತ್ರ. ಪ್ರಾಣಿವರ್ಗದ, ಕ್ರಿಮಿಕೀಟಗಳ ದೃಷ್ಟಿಯಲ್ಲಿ ಹೇಗೋ ಗೊತ್ತಿಲ್ಲ.) ಇದಕ್ಕೂ ಎರಡು ಕಾರಣ ಕೊಡಬಹುದು: ೧. ಮನುಷ್ಯನಿಗೆ ಸಸ್ಯವರ್ಗವು ಅನೇಕ ಉಪಕಾರಗಳನ್ನು ಮಾಡುತ್ತಿದೆ. ಅದನ್ನವನು ಆವಶ್ಯಕವೆಂದು ಸ್ವೀಕರಿಸುತ್ತಿದ್ದಾನೆ. ಉದಾಹರಣೆ:—ಮರವನ್ನು ಬೆಂಕಿಗಾಗಿ ಉಪಯೋಗಿಸುವುದು ಇತ್ಯಾದಿ. ೨. ಸಸ್ಯಪದಾರ್ಥಗಳು ನೋಡುವುದಕ್ಕೆ ಅಂದವಾಗಿರುತ್ತವೆ. ವಿವಿಧಾಕಾರವಾಗಿ, ವಿವಿಧ ವರ್ಣಯುಕ್ತವಾಗಿ ಇರುತ್ತವೆ. ಜೊತೆಗೆ ಸುಗಂಧವನ್ನು ಬೀರುವ ವೃಕ್ಷಗಳೂ ಉಂಟು. ಅವು ಬಿಡುವ ಹೂಗಳನ್ನು ಕಿತ್ತು ನಾವು ನಿತ್ಯ ದೇವರನ್ನು ಪೂಜಿಸುತ್ತೇವೆ. ದೇವರ ಮಂಟಪವನ್ನು ಮಾವಿನ ತಳಿರು, ಬಾಳೆಯ ಕಂದು, ಹೂವಿನ ಹಾರಗಳಿಂದ ಅಲಂಕರಿಸುತ್ತೇವೆ. ಇವೆಲ್ಲ ಇದ್ದರೆ ಮಾತ್ರ ಮನೆಯಲ್ಲಿ ನಡೆಯುವ ಉತ್ಸವ ವೈಭವಪೂರ್ಣವಾಗುತ್ತದೆ. ಹೀಗೆ ನೋಡಿದರೆ, ಆ ವೈಭವದಲ್ಲಿ ಮುಕ್ಕಾಲು ಪಾಲು ವೈಭವ ಸಸ್ಯವರ್ಗದಿಂದ ಸರಬರಾಜಾದದ್ದು. ಈ ರೀತಿ ತನ್ನನ್ನೇ, ತನ್ನ ಕೆಲವು ಅಂಗಗಳನ್ನೇ ಕತ್ತರಿಸಿ ಕೊಟ್ಟು, ಮನುಷ್ಯ ನಿರ್ಮಿತವಾದ ಗೃಹೇತ್ಯಾದಿಗಳನ್ನು ಅಲಂಕರಿಸಿ ತನ್ನ ವೈಭವವನ್ನು ಮೆರೆಸುವ ಆ ಸಸ್ಯವರ್ಗದ ಪೂರ್ಣವೈಭವದ ಪಾರಮ್ಯವನ್ನು ಯೋಚಿಸುವುದಕ್ಕಾದರೂ ಸಾಧ್ಯವೆ!

ಎಷ್ಟೋಬಾರಿ ನಾವು ಅಂದುಕೊಳ್ಳುವಂತೆ ಈ ಸೊಬಗನ್ನು ಸಸ್ಯಗಳು ನಿಷ್ಕಾರಣವಾಗಿ ಹೊಂದಿಲ್ಲ. ಉದಾಹರಣೆಗೆ ಹೂಗಳನ್ನು ತೆಗೆದುಕೊಳ್ಳೋಣ. ಹೂಗಳು ಬೀಜಗಳನ್ನು ಉತ್ಪತ್ತಿ ಮಾಡುವುದಕ್ಕೆ ಚಿಟ್ಟೆಗಳು ಅತ್ಯಾವಶ್ಯಕ. ಪರಾಗ ಕಣಗಳು (Pollen grains) ಎಂಬ ವಸ್ತುಗಳನ್ನು ಒಂದು ಹೂವಿಂದ ಇನ್ನೊಂದು ಹೂವಿನ ಅಂಡಕ್ಕೆ ತೆಗೆದುಕೊಂಡು ಹೋಗಿ ಹಾಕಿದರೆ, ಆಗ

ಬೀಜೋತ್ಪತ್ತಿಯಾಗುತ್ತದೆ. ಇದಕ್ಕಾಗಿ ಸಸ್ಯವು ದುಂಬಿಗಳ ಚಿಟ್ಟೆಗಳ ನೆರವನ್ನು ಪಡೆಯುತ್ತದೆ. ಹೂವಿನಲ್ಲಿ ಸ್ವಲ್ಪ ಸುಗಂಧಯುಕ್ತವಾದ ಮಧು ಉತ್ಪತ್ತಿಯಾಗುತ್ತದೆ. ಇದನ್ನು ಕುಡಿಯಲು ದುಂಬಿಗಳು ಒಂದೊಂದಾಗಿ ಬಂದು ಹೂವಿನ ಮೇಲೆ ಕುಳಿತಾಗ, ಆ ಹೂವಿನಲ್ಲಿ ಅಂಟಿದ ಪರಾಗ ಕಣಗಳು, ಇನ್ನೊಂದು ಹೂವಿನ ಮೇಲೆ ಅದೇ ದುಂಬಿ ಕುಳಿತಾಗ ಉದುರಿ, ಬೀಜೋತ್ಪನ್ನ ಕಾರ್ಯ ಸಾಗುತ್ತದೆ. ಇದು ಹಾಗಿರಲಿ. ಈ ದುಂಬಿಗಳೂ ಚಿಟ್ಟೆಗಳೂ ಕೆಲವು ಬಾರಿ ಹೂವನ್ನೇ ನೋಡದಿರಬಹುದು, ಅಥವಾ ನೋಡಿದರೂ ಅಲ್ಲಿಗೆ ಬಾರದಿರಬಹುದು. ಆದ್ದರಿಂದ ಅವುಗಳನ್ನು ಆಕರ್ಷಿಸುವುದಕ್ಕಾಗಿ ಹೂಗಳು ಬಣ್ಣ ಬಣ್ಣದಿಂದ ಕೂಡಿ ಮೆರೆಯುತ್ತವೆ. ಇವುಗಳ ಬಣ್ಣವನ್ನು ನೋಡಿ ಚಿಟ್ಟೆಗಳು ಆಕರ್ಷಿತವಾಗುತ್ತವೆ. ಹೀಗೆ ಹೂವು ಸೊಬಗಿನಿಂದ ಕೂಡಿರುವುದು ಸಸ್ಯವರ್ಗಕ್ಕೆ ಒಂದು ಆವಶ್ಯಕತೆಯೆಂದಾಯಿತು.

ಸಸ್ಯಗಳಲ್ಲಿ ನೂರಾರು ಜಾತಿಗಳು: ನೀರಿನಲ್ಲಿ ಬೆಳೆಯುವ ಸಸ್ಯಗಳು ಕೆಲವು, ನೆಲದ ಮೇಲೆ ಬೆಳೆಯುವ ಸಸ್ಯಗಳು ಕೆಲವು; ಕೆಲವು ಬಳ್ಳಿಗಳಾಗಿ ಹಬ್ಬುತ್ತವೆ, ಮತ್ತೆ ಕೆಲವು ದಿಟ್ಟವಾಗಿ ನೆಟ್ಟನೆ ನಿಲ್ಲುವ ಹೆಮ್ಮರಗಳಾಗುತ್ತವೆ; ಕೆಲವು ಸುತ್ತಮುತ್ತಲೂ ರೆಂಬೆಗಳನ್ನು ಹರಡಿ, ಅಲ್ಲಾಡದೆ ಬಲವಾಗಿ ನಿಂತರೆ, ಮತ್ತೆ ಕೆಲವು ಕಂಬಗಳಂತೆ ತುಂಬ ಎತ್ತರಕ್ಕೆ ಬೆಳೆದು, ಗಾಳಿಯ ಜೊತೆಗೆ ಆಟವಾಡುತ್ತಾ ತಲೆದೂಗಿ ಓಲಾಡುತ್ತವೆ. ಕೆಲವು ಬಣ್ಣಬಣ್ಣದ ಹೂಗಳನ್ನು ಮೆರೆಯಿಸುತ್ತವೆ; ಕೆಲವು ಹಣ್ಣು ಕಾಯಿಗಳನ್ನು ಮಡಿಲಲ್ಲಿ ತುಂಬಿಕೊಂಡು ನಗುತ್ತವೆ. ಕೆಲವು ಎಲೆಗಳನ್ನು ಬೀಸಣಿಗೆಯಂತೆ ಚಾಚಿ, ಸುಯ್ಯೆಂದು ಓಡುವ ಗಾಳಿಯನ್ನು ತಡೆದು, ಅದು ಎಡವಿ ಸಿಟ್ಟೆಗೆದ್ದು ತಳ್ಳಿದರೆ, ಒಡನೆ ಮೈ ಕುಲುಕಿಸುತ್ತಾ ನಗೆಯಾಡುತ್ತವೆ. ಹೇಳುತ್ತಾ ಹೊರಟರೆ ಮುಗಿಯುವಂತೆಯೇ ಇಲ್ಲ!

ಮನುಷ್ಯರಲ್ಲಿ ಹೇಗೋ ಹಾಗೆ ಸಸ್ಯಗಳಲ್ಲೂ ದ್ರವಚಲನವಿದೆ. ಹುಲ್ಲಿನಿಂದ ಹಿಡಿದು ಗಗನಚುಂಬಿ ವೃಕ್ಷಗಳ ವರೆಗೂ ವೈವಿಧ್ಯವಿರುವ ಸಸ್ಯಗಳ ವೈಭವದ ಪೂರ್ಣಾಸ್ವಾದನೆ ಮಾಡಬೇಕಾದರೆ ಅವುಗಳನ್ನು ಪ್ರತ್ಯಕ್ಷ ನೋಡಬೇಕು. 'ದೊಡ್ಡ ಮರ' ಎಂಬ ಮಾತು ಕೇಳಿದರೆ ಸಾಕು, ನನಗೆ ಶ್ರೀ ಕುವೆಂಪು ಅವರು 'ಚಿತ್ರಾಂಗದೆ'ಯಲ್ಲಿ ವರ್ಣಿಸುವ 'ನಿಬಿಡ ನೀರವ

ಕಾನನಾಂತರ'ದ ನೆನಪು ಬರುತ್ತದೆ, 'ನಡುವಗಲ ಮಾರ್ತಾಂಡನುರವಣೆಯ ನಡಗಿಸುತ ಬೆಳೆದಿರ್ದ ಭೂಜೇಶಕುಲಕೀರ್ತಿ'ಗಳ ನೆನಪು ಬರುತ್ತದೆ; ರಾಮಾಯಣದಲ್ಲಿ ಬರುವ ದಂಡಕಾರಣ್ಯದ ವರ್ಣನೆ ನೆನಪಾಗುತ್ತದೆ; ಹಿಂದೊಮ್ಮೆ ಕೆಮ್ಮಣ್ಣುಗುಂಡಿ, ಚಿಕ್ಕಮಗಳೂರು, ಊಟಿ ಮುಂತಾದ ಸ್ಥಳಗಳಿಗೆ ಭೇಟಿ ಕೊಟ್ಟಾಗ ಕಣ್ಮನಗಳನ್ನು ತಣಿಸುತ್ತಾ ಭವ್ಯವಾಗಿ ಬೆಳೆದು ನಿಂತಿದ್ದ ಆ ರಮಣೀಯ ನೋಟ ನನ್ನ ಮನಸ್ಸಿನಲ್ಲಿ ರೂಪುಗೊಳ್ಳುತ್ತದೆ.

ಸಸ್ಯಗಳಲ್ಲಿ ಕೆಲವು ವೈಚಿತ್ರ್ಯಗಳೂ ಉಂಟು. ಕೆಲವು ಗಿಡಗಳು ಮನುಜರಾಗಲಿ ಪ್ರಾಣಿಗಳಾಗಲಿ ಮುಟ್ಟಿದ ಕೂಡಲೆ ಮುದುರಿಕೊಳ್ಳುತ್ತವೆ. ಮತ್ತೆ ಕೆಲವು ಸಸ್ಯಗಳು 'ಬಿಳಲು' ಬಿಡುತ್ತವೆ. ಆಲದ ಮರ ಇದಕ್ಕೆ ಒಳ್ಳೆಯ ಉದಾಹರಣೆ. ಅದು ಸುತ್ತ ಇಳಿಯಬಿಟ್ಟ ಬಿಳಲು ನೆಲ ಸೋಕಿದೊಡನೆ ಬೇರುಬಿಟ್ಟು ಬಲವಾಗಿ ನಿಲ್ಲುತ್ತದೆ. ಮರ ಇದರಿಂದ ಹೆಚ್ಚು ವಿಶಾಲವಾಗಿ ರೆಂಬೆಗಳನ್ನು ಹರಡಲು ಅನುಕೂಲವಾಗುತ್ತದೆ. ಹೀಗೆ ವಿಶಾಲವಾಗಿ ವೃಕ್ಷ ಬೆಳೆದಷ್ಟೂ ಹೆಚ್ಚು ಹೆಚ್ಚು ಭವ್ಯವೆನಿಸುತ್ತದೆ.

ಬಣ್ಣಗಳಲ್ಲಿ ಹಸಿರು ಬಣ್ಣ ಕಣ್ಣನ್ನು ತಣಿಸುವ ಬಣ್ಣ, ಮನಸ್ಸಿಗೆ ತಂಪನ್ನುಂಟುಮಾಡುವ ಬಣ್ಣ. ಇದು ಗಿಡಬಳ್ಳಿಗಳ ಎಲೆಗಳಲ್ಲಿ ತಪ್ಪದೆ ಕಂಡುಬರುತ್ತದೆ. ಈ ಹಸಿರು ಬಣ್ಣ ಗಿಡಗಳ ಬೆಳವಣಿಗೆಗೆ ತುಂಬ ಅಗತ್ಯವಾದ 'ಕ್ಲೋರೋಫಿಲ್' ಎಂಬ ವಸ್ತುವಿನಿಂದ ಆಗುತ್ತದೆ. ಅದು ಹೇಗಾದರೂ ಉತ್ಪತ್ತಿಯಾಗಲಿ, ನೋಡುವುದಕ್ಕಂತೂ ತುಂಬ ಸೊಗಸಾಗಿರುತ್ತದೆ.

ಸಸ್ಯಸೌಂದರ್ಯದ ಔನ್ನತ್ಯವನ್ನು ಕಾಣಬೇಕಾದರೆ ಸಂಜೆಯ ಸೂರ್ಯನ ಹೊಂಗಿರಣಗಳ ನಡುವೆ ನೋಡಬೇಕು. ಹಸಿರುಮಿಶ್ರವಾದ ಬಂಗಾರದ ಬಣ್ಣದಿಂದ ಕೂಡಿದ ಎಲೆಗಳ ಸೌಂದರ್ಯವನ್ನು ವರ್ಣಿಸಲು ಪ್ರಯತ್ನಿಸುವುದಕ್ಕಿಂತ ಅಲ್ಲಿಗೇ ಕರೆದೊಯ್ದು ತೋರಿಸುವುದು ವಾಸಿ! ಅದುವರೆಗೆ ಮಾತು ಮೌನವಾಗುವುದು ಒಳ್ಳೆಯದು.

**ಆರ್. ಪಿ. ನಂಜಪ್ಪ**

# ಸಸ್ಯವಿಜ್ಞಾನ ಪ್ರದರ್ಶನ

[1954ರ ಜನವರಿ ಆರಂಭದಲ್ಲಿ ಸೆಂಟ್ರಲ್ ಕಾಲೆಜ್ ಸಸ್ಯಶಾಸ್ತ್ರ ಸಂಘದ ಬೆಳ್ಳಿಯ ಹಬ್ಬದ ಸಂಬಂಧವಾಗಿ ಒಂದು ಪ್ರದರ್ಶನ ಏರ್ಪಾಡಾಗಿತ್ತು. ಆ ಪ್ರದರ್ಶನದಲ್ಲಿ ಏನೇನು ನೋಡಬಹುದಾಗಿತ್ತು ಎಂಬುದನ್ನು ಇಲ್ಲಿ ಸ್ನೇಹಿತರಿಬ್ಬರ ಸಂವಾದದ ರೂಪ ದಲ್ಲಿ ಚಿತ್ರಿಸಲಾಗಿದೆ. ಒಬ್ಬಾತನಿಗೆ ಸಸ್ಯಶಾಸ್ತ್ರದಲ್ಲಿ ಪ್ರವೇಶವಾಗಿದೆ, ಇನ್ನೊಬ್ಬ ಆ ಶಾಸ್ತ್ರಕ್ಕೆ ತೀರ ಅಪರಿಚಿತ.]

ಸಸ್ಯವಿಜ್ಞಾನ ಪ್ರದರ್ಶನವಂತೆ, ಸೆಂಟ್ರಲ್ ಕಾಲೇಜಿನಲ್ಲಿ. ಬರುತ್ತೀಯಾ ಹೋಗೋಣ ?

ಗಿಡಗಳಲ್ಲೇನಿರುತ್ತೊ ಇವರು ಹೊಸದಾಗಿ ಪ್ರದರ್ಶಿಸುವಂಥಾದ್ದು ?

ಸುಮ್ಮನೆ ಬಾ. ನೋಡಿದ ಮೇಲೆ ಮಾತಾಡೋಣ. ತೆಗೆದುಕೊ ಟಿಕೀಟು. ಎರಡೆರಡಾಣೆ. ನಡೆ ಒಳಗೆ . . .

ಇಲ್ಲಿ ನೋಡು! ವಿಜ್ಞಾನ ಪ್ರದರ್ಶನದಲ್ಲಿ ಗಾಂಧಿಜೀ ಚಿತ್ರ!

ನಾಡಿನ ತಂದೆ ಅಲ್ಲವೆ ಅವರು? ಒಂದು ರೀತಿಯಲ್ಲಿ ಅವರೂ ವಿಜ್ಞಾನಿ ಗಳೇ, ಸಮಾಜವಿಜ್ಞಾನಿಗಳೇ ತಾನೆ! ಅವರ ಹೆಸರು ಹೇಳಿದರೆ ಎಲ್ಲದಕ್ಕೂ ಶ್ರೇಯಸ್ಸು, ಎಂದು ಆರಂಭದಲ್ಲೆ ಅವರ ಚಿತ್ರಕ್ಕೆ ಪೂಜೆಮಾಡಿದಾರೆ!

ಇದೇನೋ ಇದು ಅಧ್ವಾನ! ಕಳ್ಳಿ, ಪಾಪಾಸಕಳ್ಳಿ, ಕತ್ತಾಳೆ . . . ಏನೇನೊ ಇದೆ! ಇದೆಲ್ಲಾ ಯಾಕಿಟ್ಟಿದಾರೆ ಇಲ್ಲಿ ?

ಅಲ್ಲೇ ಇರೋದು ಸ್ವಾರಸ್ಯ. ಇಲ್ಲಿ ಇಟ್ಟಿದಾರಲ್ಲಾ ಈ ಗಿಡಗಳಿಗೆಲ್ಲಾ xerophytes ಅಂತ ಹೆಸರು. ಈ ಸಸ್ಯಗಳೆಲ್ಲಾ ನೀರು ಸಿಕ್ಕದ ಮರುಭೂಮಿ ಗಳಲ್ಲಿ ಬೆಳೆಯುತ್ತವೆ.

ನೀರಿಲ್ಲದ ಮರುಭೂಮೀಲಿ ಬೆಳೆಯುತ್ತವೆ ಅಂತೀಯೆ. ಎಷ್ಟು ಹಸುರಾ ಗಿವೆ? ನೀರಿಲ್ಲದೆ ಸಸ್ಯ ಬೆಳೆಯೋಲ್ಲ ಅಂತ ಹೈಸ್ಕೂಲಲ್ಲಿ ಓದಿದ್ದೆ.

ಮರುಭೂಮೀಲಿ 'ಓಯಸಿಸ್ಸು' ಅಂತ ಇರುತ್ತೆ, ಕೇಳಿದಿ ತಾನೆ?

ಸರಿ, ಭೂಗೋಳದಲ್ಲಿ ಓದಿಲ್ವೆ,—ಸಹರಾ, ಗೋಬಿ, ಅಂತ? . . . . ಅಲ್ಲ, ಯಾಕೋ ಆ ಗಿಡಗಳ ಕೈ ಮೈ ಎಲ್ಲ ಮುಳ್ಳುಗಳು ? ಒಂದಕ್ಕೂ ಎಲೆ ಗಳೇ ಇಲ್ಲ! ಉಸಿರಾಟ ಹೇಗೆ ನಡೆಯುತ್ತೆ ?

ಹಾ! ಮುಳ್ಳು ಅಂದೆಯಲ್ಲ, ಅವೆಲ್ಲ ಎಲೆಗಳು! ಆಶ್ಚರ್ಯಪಡಬೇಡ! ಇದೇ ಈ ಸಸ್ಯಗಳ ರಹಸ್ಯವಾದ ರೀತಿಯ ವೈಭವ! ಎಲೆಗಳಿದ್ದರೆ, ಸೂರ್ಯನ ಬೆಳಕಿನಿಂದ ಉಸಿರಾಡುವುದು ನಡೆಯುತ್ತೆ. ಎಲೆ ಹೆಚ್ಚಿದ್ದಷ್ಟೂ ಉಸಿರಾಟ ಹೆಚ್ಚಾಗಿ ನೀರೆಲ್ಲಾ ಹೊರಟುಹೋಗುತ್ತೆ. ಅದಕ್ಕೇ ಈ ಗಿಡಗಳು ತಮ್ಮ ಎಲೆಗಳನ್ನೆಲ್ಲಾ ಮುಳ್ಳುಗಳಂತೆ ಮಾರ್ಪಾಟು ಮಾಡಿಕೊಂಡಿವೆ. ದುಡ್ಡಿದ್ದರೆ ಖರ್ಚಾಗುತ್ತೆ ಅಂತ ಆಸ್ತಿ ಮಾಡಿಡೋಲ್ಲವೇ ಹಾಗೆ . . . ಅಲ್ಲಿ ಕೆಲವು bulgings, ದಪ್ಪ ದಪ್ಪ ಭಾಗಗಳು ಕಾಣಿಸೋಲ್ಲ? ಅವಕ್ಕೆ cladodes ಮತ್ತು phyllodes ಅಂತ ಕರೀತಾರೆ. ಅಲ್ಲಿ ಆಹಾರ ಕೂಡಿಟ್ಟುಕೊಂಡು ಉಪ ಯೋಗಿಸಿಕೊಳ್ಳುತ್ತವೆ.

ಪರವಾಇಲ್ಲ! ಪ್ರಾಣಿಗಳಿಗಿಂತ ಹೆಚ್ಚು ಬುದ್ಧಿ ಈ ಗಿಡಗಳಿಗೆ! ಇರುವೆ ಗಳು ಕೂಡಿಡೋ ಹಾಗೆ ಇಟ್ಟಿವೆ! ಅಲ್ವೊ, ನಮಗೂ ಒಂದೊಂದು ಇಂಥ bulgings ಇದ್ದಿದ್ದರೆ! ಊಟಾನೆಲ್ಲ ಶೇಖರಿಸಿ ಮಜವಾಗಿರಬಹುದಿತ್ತು!

ಇವೆಲ್ಲಾ ಸಸ್ಯಗಳ ಸಾಮಾನ್ಯವಾದ ಉಪಾಯಗಳು. ಗಿಡಗಳ ವೈಚಿತ್ರ್ಯ, ವೈಭವ ನೋಡಬೇಕಾದರೆ ಈ ಪ್ರದರ್ಶನಾನ ಚ-ಚು ತಪ್ಪದೆ ನೋಡಿ ಅರ್ಥಮಾಡಿಕೊಳ್ಳಬೇಕು.

ಅದು ಇರಲಿ. ಇಲ್ಲಿ, ಈ ಗಿಡಗಳು ಮರುಭೂಮೀಲಿ ಬೆಳೆಯುತ್ತವೆ ಎನ್ನುವುದಕ್ಕೆ ಗುರುತೇ ಇಲ್ವಲ್ಲ; ನಮಗದು ಹೇಗೆ ಗೊತ್ತಾಗಬೇಕು?

ಇಲ್ಲಿ ಬರುವವರಿಗೆ ಸ್ವಲ್ಪ ಹುಷಾರು ಜಾಸ್ತಿ ಇರಬೇಕು. ಅಲ್ಲಿ ಆ ಬೋರ್ಡ್‌ಮೇಲೆ ಒಂದು ಚಿತ್ರ ಬರೆದಿದ್ದಾರೆ ನೋಡು—ಅಲ್ಲಿ ಒಂದು ಒಂಟಿ ಇಲ್ವೆ? ಒಂಟೆ ಅಂದ ಕ್ಷಣಾ ನೆನಪಾಗೋಲ್ವೆ ಮರುಭೂಮಿ?

ಪರವಾ ಇಲ್ವೊ ಈ ಪ್ರದರ್ಶನ ವ್ಯವಸ್ಥೆ ಮಾಡಿರೋರು!

ಇಲ್ಲಿ ನೋಡು: Life in plants. ಸಸ್ಯಗಳಲ್ಲಿ ಜೀವವಿದೆ ಅಂತ ತೋರಿಸುತ್ತಾರೆ. ಆ ಸೂಕ್ಷ್ಮದರ್ಶಿನಿಯಲ್ಲಿ ನೋಡು. ಅಕ್ಕಪಕ್ಕದಲ್ಲಿ ಏನೋ ಓಡಾಡೊಲ್ಲ? ಅವೆಲ್ಲ ಹರಿತ್ತಿನ ಕಣಗಳು. ಜೀವ ಇದ್ದರೆ ಆಗ ಹೀಗೆ ಓಡಾ ಡೋದು. ಈ ಗಿಡದ ಹೆಸರು Hydrilla ಅಂತ, ಒಂದು Water plant.

ಇದ್ಯಾರದೋ ಈ photo ಈ ಕಡೆ? ಅದರ ಕೆಳಗಡೆ ಅವರ ಹೆಸರ ಬರೀಬೇಕಾಗಿತ್ತಲ್ಲವೆ?

ಅವರ ಹೆಸರು ಸ್ಮಿತ್ ಅಂತ. ಈ ಶಾಸ್ತ್ರದ ಶ್ರೇಷ್ಠ ವಿಜ್ಞಾನಿ.

ಇದೇನಿದು ಸೀಸೆಗಳಲ್ಲಿಟ್ಟಿರೋದು? ಲೋಳೆ, ಸಿಂಬಳ, ಕಸ ಇದ್ದ ಹಾಗಿದೆ!

ಅಯ್ಯೋ ಪೆದ್ದೆ! ಅಲ್ಲಿ ನೋಡು ಹಣೆಬರಹಾನ. Evolution in plants ಎಂದರೆ ಸಸ್ಯಗಳ ವಿಕಾಸ. ಸಸ್ಯಗಳು ಹೇಗೆ ಒಂದು ಸಣ್ಣ ಜೀವಾಣುವಿನಿಂದ ವಿಕಾಸಗೊಂಡವು ಅಂತ ತೋರಿಸಿದಾರೆ. ಅಲ್ಲಿ ಆ ಗೋಡೆಮೇಲೆ ಕಾಣೋಲ್ಲ ದೊಡ್ಡ ಫ಼ೋಟೊ? ಗಡ್ಡ? ಅವರೇ ಚಾರಲ್ಸ್ ಡಾರ್ವಿನ್!

ಅವರೇ ಏನು, ವಿಕಾಸವಾದದ ಡಾರ್ವಿನ್ನ್?

ಹೌದು . . . ಇಲ್ಲಿ ನೋಡು—ಕಸ ಹೊಲಸು ಅಂದೆಯಲ್ಲ . . . ಈ ಸೀಸೆಗಳಲ್ಲಿರೋದು, ಇವೆಲ್ಲ ಸಸ್ಯಗಳು!

ಸಸ್ಯಗಳೇ? ಎಂಥವೋ?

ಅದೆಲ್ಲ ವಿವರವಾಗಿ ಹೇಳಿದರೆ ನಿನಗೆ ತಲೆನೋವು ಬರಬಹುದು. ಅವುಗಳ ಹೆಸರು ಮಾತ್ರ ಹೇಳ್ತೀನೆ. ಈ ಸಸ್ಯಗಳನ್ನು ಬೇರೆ ಬೇರೆ ಗುಂಪುಗಳಾಗಿ ವಿಂಗಡಿಸಿದಾರೆ, ಅವುಗಳಲ್ಲಿ ಕಂಡುಬರುವ ಬೆಳವಣಿಗೆ ವಿಕಾಸಗಳ ಪ್ರಕಾರ. ಇವೆಲ್ಲ thallophytes; ಅಂದರೆ ಈ ಗಿಡಗಳಿಗೆ ಬೇರು, ಎಲೆ, ಕಾಂಡ ಅಂತ ಇಲ್ಲ; ಎಲ್ಲ ಒಂದೇ thhalls ಆಗಿ ಮುದ್ದೆಮುದ್ದೆಯಾಗಿ ಬೆಳೆಯುತ್ತವೆ . . . ಹಾಗೇ ಈ ಗಿಡಗಳು Bryophytes; ಇವು ಇನ್ನೂ ಸ್ವಲ್ಪ ಮುಂದುವರಿದಿವೆ . . . ಅವು Pteridophytes ಅಂತ ಇನ್ನೂ ಮುಂದುವರಿದ ಸಸ್ಯಗಳು . . .

ಯಾಕೋ ಇಲ್ಲಿ ಜೋಳದ ತೆನೆ ಇಟ್ಟಿದಾರೆ?

ನೋಡಲ್ಲಿ, ಕರ್‍ರಗೆ ಕಾಣೊಲ್ಲ? ಆ ಕಾಡಿಗೆ ರೋಗ ಹೇಗೆ ಬೆಳೆಯುತ್ತೆ ಅಂತ ತೋರಿಸಿದ್ದಾರೆ . . .

ಹೋ ಹೋ,! ಅಲ್ಲಿ ನೋಡು! ಹೂಗಳು! ಎಷ್ಟು ತರ ತರ!

ಅಲ್ಲಿರಲಿ, ಇಲ್ಲಿ ನೋಡು. ಇವೆಲ್ಲ ಹೂಬಿಡುವ ಸಸ್ಯಗಳು. ಸಣ್ಣ ಸಣ್ಣ ಹಸಿರು ಬಿಂದುಗಳಿಲ್ಲ? ಇದೇ ಅತಿ ಚಿಕ್ಕದಾದ ಹೂಬಿಡುವ ಗಿಡ!

ಗಿಡವೇ ಕಣ್ಣಿಗೆ ಕಾಣಿಸೊಲ್ಲ! ಇದು ಹೂಬಿಡುತ್ತೇ ಅಂತಿಯಲ್ಲಾ?

ಹೌದು. ಅಷ್ಟು ಸೂಕ್ಷ್ಮವಾಗಿದ್ದರೂ ಹೂಬಿಡುತ್ತೆ!

ಇದರ ಹೂ ಏನಾದರೂ ಇಟ್ಟಿದಾರೋ?

ಗಿಡವೇ ಇಷ್ಟು ಸಣ್ಣ. ಇನ್ನು ಅದರ ಹೂ ಎಷ್ಟು ಸೂಕ್ಷ್ಮ ಇರಬೇಕು! ಅದನ್ನೆಲ್ಲಾ ಸೂಕ್ಷ್ಮದರ್ಶಿನಿಯಲ್ಲಿ ನೋಡಬೇಕು. ಈ ಗಿಡದ ಹೆಸರು Lemna ಅಂತ. ಅದರ ಹೂವೇನು, ನೋಡು ಅಲ್ಲಿದೆ ಪುಷ್ಪಗಳ ಪರಿಷತ್ತು! . . .

ಇದೇನೋ ಬರ್‍ಕೊಳ್ತಾ ಇದೀಯೆ? ಇಲ್ಲಿ ಬಂದರೂ ಬಿಡ್ಲಿಲ್ಲ ಈ ಹಾಳು ಹವ್ಯಾಸ?

ಈ ಹೂಗಿಡಗಳನ್ನೆಲ್ಲಾ ಬೇರೆ ಬೇರೆ ಜಾತಿಗಳಾಗಿ ವಿಂಗಡಮಾಡಿದಾರೆ. ನಮ್ಮ ಪರೀಕ್ಷೆಗೆ ಬೇಕಾದ ಗಿಡಗಳ ಹೆಸರನ್ನ ಸ್ವಲ್ಪ ಗುರುತು ಮಾಡಿಕೊಂಡೆ.

ಓ! ರಾತ್ರಿ ರಾಣಿ! ಸಂಪಗೆ! ಎಂತೆಂಥ ಹೂ ಇದಾವೊ! ಈ ಸಂಪಗೆಗೆ ನಿಮ್ಮ ಹೆಸರೇನೋ?

ಅದರ ಹೆಸರು, Michalia champaka ಅಂತ. ನಮ್ಮ ಶಾಸ್ತ್ರದಲ್ಲಿ ಹೆಸರುಗಳು ಬಹಳ ಉದ್ದುದ್ದ. ಅದೇ ನಮಗೆಲ್ಲ ತಲೆನೋವು. ಯಾಕೆ ನಿಂತುಬಿಟ್ಟೆ! ಹೂವು ಅಂದರೆ ಅಷ್ಟು ಆಸೆಯೇನೋ? ನಡೆ ಮುಂದಕ್ಕೆ.

ಹೂ ಅಂದರೆ ಎಲ್ಲರಿಗೂ ಇಷ್ಟಾನೇ. ಲೋ, ಒಂದು . . . ಆ ಗುಲಾಬಿ ಹೂ ತೆಕೋಬೇಕೂಂತ . . .

ಬೇಡ, ಬೈತಾರೆ. ಕೇಳಿಲ್ವೇ, Every rose has a thorn? ಕೈ ಹಾಕಿದರೆ ಮುಳ್ಳು ಚುಚ್ಚುತ್ತೆ. ನಡೆ ಮುಂದಕ್ಕೆ.

ಅದೇನು ಆ ಪಠ?

ಅದು—ಹೂಗಳಲ್ಲಿ ಗರ್ಭೋತ್ಪತ್ತಿ ಹೇಗೆ ಆಗುತ್ತೆ, ವಂಶೋದ್ಧಾರ ಹೇಗಾಗುತ್ತೆ ಅಂತ ತಿಳಿಸುವ ಪಠ.

ಓ, ಅದೇ! ಹೂವಿನ ಪರಾಗವನ್ನು ದುಂಬಿ ಒಂದು ಗಿಡದಿಂದ ಇನ್ನೊಂದು ಗಿಡದ ಹೂವಿಗೆ ಹೊತ್ತುಹಾಕಿ, ಅದರ ರಸ ಹೀರಿ ಹೋಗುತ್ತಲ್ಲ ಅದೇ ತಾನೆ! . . . ಅಲ್ಲ, ಗಿಡಗಳು ಎಂತೆಂತಹ ಉಪಾಯ ಇಟ್ಟುಕೊಂಡಿದಾವೋ—ದುಂಬಿಯನ್ನು ಆಕರ್ಷಿಸುವುದಕ್ಕೆ! ಯೋಚನೆ ಮಾಡಿದರೆ, ಮನುಷ್ಯರ ಆಕರ್ಷಣೆಯ ವಿಧಾನ ಪಿಚ್ ಎನ್ನಿಸುತ್ತದೆ.

ರಾಯರು ವ್ಯಾಖ್ಯಾನ ಷುರು ಮಾಡಿಬಿಟ್ಟರಲ್ಲ! ಮುಂದೆ ಸಾಗಲಿ ಮೆರೆವಣಿಗೆ . . . ಇದು ಅನುವಂಶೀಯತೆ, Heredity ಅಂತ; ತಂದೆತಾಯಿ

ಗಳ ಗುಣಗಳು ಮಕ್ಕಳಲ್ಲಿಯೂ ಹೇಗೆ ಬರುತ್ತವೆ ಎಂಬುದನ್ನು ಇಲ್ಲಿ ಹೂವಿನ ಉದಾಹರಣೆಯ ಮೂಲಕ ತೋರಿಸಿದ್ದಾರೆ. ಆ ಚಿತ್ರ ನೋಡು . . .

ಇದು ಹೇಗೆ ಬೆಳೆದಿದೆ, ಏನು ಅಂತ ನನ್ಮಲ್ಲಿಯೂ ಏನಾದರೂ ಕಂಡು ಹಿಡಿದಿದಾರೊ?

ಹೋ, ಬೇಕಾದ ಹಾಗೆ ಪ್ರಯೋಗ ಪರೀಕ್ಷೆ ನಡಸಿದ್ದಾರೆ. ಅದು ಇಲ್ಲಿ ಬೇಡ. ನೀನು ಬಂದಿರುವುದು ಸಸ್ಯಗಳ ಜೀವನ ನೋಡುವುದಕ್ಕೆ. ಉಳಿದದ್ದು ಹೊರಗಡೆ ಮಾತಾಡೋಣ. ನಡೆ ಮುಂದೆ . . .

ಇದೇನೋ ಇದು? ಸಸ್ಯಪ್ರದರ್ಶನ ಅಂತ ಹೇಳಿದೆ. ಇಲ್ಲಿ ಕಲ್ಲು, ದುಂಡಿ, ಮಣ್ಣು ಇಟ್ಟಿದಾರೆ?

ಅವು ಕಲ್ಲು ಮಣ್ಣು ಅಲ್ಲ. ಅವೂ ಸಸ್ಯಸಂಬಂಧವಾದವೇ. ಅವೆಲ್ಲ ಪುರಾತನ ಯುಗದ ಸಸ್ಯಗಳ ಅವಶೇಷಗಳು (fossils). ಇವುಗಳ ಸಹಾಯದಿಂದ ಯಾವ ಕಾಲದಲ್ಲಿ ಯಾವ ಸಸ್ಯ ಹೇಗೆ ಹುಟ್ಟಿ ಹೇಗೆ ಬೆಳೆಯಿತು ಎಂದು ಗೊತ್ತು ಹಚ್ಚುತ್ತಾರೆ. ಈ ಭಾಗದ ಅಭ್ಯಾಸಕ್ಕೆ Paleobotany ಎಂದು ಹೆಸರು.

ಸಾಕು ಬಾ. ಇದೇನೂ ನನಗೆ ಅಷ್ಟು ಹಿಡಿಸಲಿಲ್ಲ.

ಇದು ಸಾಮಾನ್ಯರಿಗೆ ಹಿಡಿಸದಿದ್ದರೂ ವಿಜ್ಞಾನಿಗಳಿಗೆ ಬಹಳ ಉಪಯುಕ್ತವಾದದ್ದು . . .

ಏನೊ ಇದು! ಪ್ರದರ್ಶನದಲ್ಲಿ ಇಂಥ ಸಾಮಾನುಗಳೂ ಉಂಟು? ತೆಂಗಿನಕಾಯಿ! ಪರಂಗಿಹಣ್ಣು!

ಅಯ್ಯೋ ಬಕವೇ! ಏನಾದರೂ ಪ್ರಾಮುಖ್ಯತೆ ಇದ್ದರೇ ಈ ವಸ್ತುಗಳನ್ನು ಪ್ರದರ್ಶನದಲ್ಲಿ ಇಡೋದು. ಇಲ್ಲಿ ನೋಡು, ಏನು ಬರೆದಿದ್ದಾರೆ? 'Abnormalities' ಎಂದರೆ ವೈಪರೀತ್ಯಗಳು! ಪ್ರಕೃತಿಯಲ್ಲಿ ಅಪರೂಪವಾಗಿ ಕಾಣಬರುವ ವಿಚಿತ್ರಗಳು ಇಲ್ಲಿವೆ.

ಒಳ್ಳೆ ವಿಚಿತ್ರಗಳು! ಒಳ್ಳೇ ಹುಚ್ಚರೋ ಈ ಸಸ್ಯಜ್ಞರು!

ಸ್ವಲ್ಪ ಬ್ರೇಕ್ ಹಾಕು ನಿನ್ನ ಬಾಯಿಗೆ. ಇಲ್ನೋಡು ಈ ಕಾಯಿ—ತೆಂಗಿನಕಾಯಿ—ಅವಳಿ ಜವಳಿ ಕಾಯಿ ಎಲ್ಲಾದರೂ ನೋಡಿದೀಯಾ? ಅವಳಿ ಬಾಳೆಹಣ್ಣು, ಅವಳಿ ಬದನೆಕಾಯಿ, ಅವಳಿ ಪೊಪ್ಪಾಯ ಹಣ್ಣು—ನೋಡು—ಇವೆಲ್ಲಿ ವಿಪರೀತ ಅಲ್ಲವೆ!

ಸರಿ. ನಡೆ ಮುಂದೆ. ಅದೇನದು 'ಬೀಜ ಪ್ರಸರಣ' ಅಂತೆ? ಇದೇನು ಗುಲಗಂಜಿ, ಜಾಕಾಯಿ, ಎಕ್ಕೆ ಹೂ—ಎಲ್ಲ? . . . ಮತ್ತೆ ಪ್ರಾರಂಭವಾಯ್ತೊ? ಅದೇನೋ ಅದು ಬರ್ರ್‍ಕೊಳ್ತಾ ಇರೋದು? . . . ಜಾಲಿ (Lomentum of acacia) . . . . ಗುಲಗಂಜಿ (Abrus Pricatorius) . . .ಜಟಾಯುರೆಕ್ಕೆ (Pterocarpus) . . . ಕತ್ತಾಳೆ (Agave) . . . ದತ್ತೂರಿ, ಉಮ್ಮತ್ತಿ, ದಾಲ್ಚಿನ್ನಿ, ಜಾಪತ್ರೆ ಜಾಕಾಯಿ, ಸಾಲಂಮಿಶ್ರಿ, ಬಾದಾಮಿ, ಮೆಂತ್ಯ, ಅಳಲೆ ಕಾಯಿ, ಕೇಸರಿ, ಇಂಗು . . . ಅಯ್ಯಯ್ಯೋ! ಏನೋ ಇದು? ನನ್ನ ಕಣ್ಣೇ ಇಂಗಿಹೋಗುತ್ತೆ ಇದನ್ನ ಓದಿದರೆ? ಏನು ಇದು ಅಧ್ವಾನ? ಕನ್ನಡ ಇಂಗ್ಲೀಷು? ಎಂತೆಂತಹ ಹೆಸರೋ?

ಸ್ವಲ್ಪ ತಾಳೋ. ಇದೆಲ್ಲ ನಮಗೆ ಬಹಳ ಮುಖ್ಯ, ಪರೀಕ್ಷೇಲಿ ಸಹಾಯವಾಗುತ್ತೆ. ಇದಕ್ಕೆ Economic Botany ಅಂತಾರೆ.

ಅಲ್ಲಿ ನೋಡು. ಅದೇನು ಪ್ರಯೋಗ ಪ್ರದರ್ಶನ ಮಾಡಿದಾರೆ?

ಅಲ್ಲಿ, ಸಸ್ಯಗಳು ಉಸಿರಾಡುವಾಗ ಆಮ್ಲಜನಕದ ಬಿಡುಗಡೆ, ನೀರು ಉಪಯೋಗಿಸುವುದು, ಶಕ್ತಿ (energy) ಮತ್ತು ಶಾಖ (heat) ಎಷ್ಟು ಬಿಡುಗಡೆಯಾಗುತ್ತೆ ಇದನ್ನೆಲ್ಲ ಅಳತೆ ಮಾಡೋದು ತೋರಿಸಿದಾರೆ . . .

ಇವೇನಿವು, ಮಾವಿನ ಗಿಡದ ಕೊಂಬೆ? ಏನೇನೋ ಬೇರು?

ಇವೆಲ್ಲ Parasites ಅಂದರೆ ಪರಾವಲಂಬಿ ಸಸ್ಯಗಳಿಗೆ ತಮ್ಮಲ್ಲಿ ಜಾಗ ಕೊಟ್ಟಿವೆ. ಇವೆಲ್ಲ hostಗಳು, ಇವುಗಳಿಂದ ಬಹಳ ನಷ್ಟ ಉಂಟು.

ನಾವೂ ಒಂದು ರೀತಿ ಪರಾವಲಂಬಿಗಳೇ ತಾನೆ. ಊರಿಂದ ಅಣ್ಣ ಅಪ್ಪ ದುಡ್ಡು ಕಳುಹಿಸಲಿಲ್ಲವೊ, ಮುಗಿದ ಹಾಗೇ ನಮ್ಮ ಕತೆ! . . .

ಯಾವುದಾದರೂ ಸಮಾಚಾರ ಕೇಳಿ, ಯಾವಾಗಲಾದರೂ ನಿನಗೆ ಮೈ 'ಜುಂ' ಅಂತ ಅಂದಿದೆಯೇ? ಎಲೆಕ್ಟ್ರಿಕ್ ಷಾಕ್ ಹೊಡೆದಾಗ ಆಗುವ ಹಾಗೆ? . . . ಹಾಗೇನೆ ಇಲ್ಲೊಂದು ಗಿಡ ಇದೆ, ಬಾ ಇಲ್ಲಿ. ಈ ಗಿಡಕ್ಕೆ ನಾಚಿಕೆ ಅಂದರೆ ನಾಚಿಕೆ! ಮುಟ್ಟಿದರೆ ಸಾಕು, ಮುಖ ಮುಚ್ಚಿಕೊಂಡು ಬಿಡುತ್ತೆ. ಇದರ ಹೆಸರು, Mimosa Pudica ಅಂತ. ಅಥವಾ 'touch me not' ಅಂತಾರೆ. ಕನ್ನಡದಲ್ಲಿ 'ಮುಟ್ಟಿದರೆ ಮುನಿ' ಅಂತ. ಸಂಸ್ಕೃತದಲ್ಲಿ ಇದಕ್ಕೆ 'ಲಜ್ಜಾವತಿ' ಅಂತ ಹೆಸರು . . .

ಅದೇನು, ಹಾದಿಬೀದೀಲೆಲ್ಲ ನೋಡಿದ್ದೀನಿ. ಆದರೆ ಇವೇನು ಇವೆಲ್ಲ?

ಮಾಂಸಭಕ್ಷಕರು ಅಂತ ಕೇಳಿದಿಯಾ? . . . ಮಾಂಸದಿಂದ ಆದ ಮನುಷ್ಯನೇ ಮಾಂಸ ತಿನ್ನೋದಾದರೆ, ಸಸ್ಯಗಳೇಕೆ ತಿನ್ನಬಾರದು?

ಆ! ಸಸ್ಯಗಳು ಮಾಂಸ ತಿನ್ನುತ್ತವೆಯೆ? ಸೋಜಿಗ! ಅಥವಾ ಗಸ್ಸಾ ಬಿಡ್ತಿಯೋ?

ಇಲ್ಲ, ಸುಳ್ಳಲ್ಲ. ಈ ಗಿಡಗಳೆಲ್ಲ Cornivorous plants, ಅಥವಾ Insectivorous plants. ಇವು ಸೊಳ್ಳೆ, ಚಿಟ್ಟೆ ಮುಂತಾದ ಕ್ರಿಮಿಕೀಟಗಳನ್ನು ಹಿಡಿದು ತಿಂದು ಜೀರ್ಣಿಸಿಕೊಳ್ಳುತ್ತವೆ. ಅದರ ಹೆಸರು ಡ್ರಾಸರಾ ಅಂತ, ಇದರ ಹೆಸರು ಯೂಟ್ರಿಕುಲೇರಿಯಾ ಅಂತ. ಹೆಸರು ಗುಣಕ್ಕೆ ತಕ್ಕ ಹಾಗಿದೆ ಅಲ್ವೇ?

ಹೇಗೋ ಅದು? ಚಲಿಸದ ಸಸ್ಯಗಳು ಚಲಿಸುವ ಪ್ರಾಣಿಗಳನ್ನು ಹಿಡಿಯೋದು? ಅದ್ಭುತ! ಆಶ್ಚರ್ಯ!

ಅದಕ್ಕೇ ನಾನು ಮುಂಚೆ ಹೇಳಿದ್ದು—ಈ ಪ್ರದರ್ಶನದಲ್ಲಿ ಸಸ್ಯಗಳ ವೈಭವ ಕಾಣಬಹುದು ಅಂತ. ಇದರ ಬಗ್ಗೆ ನಿನಗೆ ಕುತೂಹಲವಿದ್ದರೆ ಇನ್ನೊಮ್ಮೆ ಹೇಳುತ್ತೇನೆ. ನಡೆ ಮುಂದಕ್ಕೆ . . .

ಇದೇನಿದು ಅಡಕೆ, ಕಬ್ಬು, ಇಟ್ಟಿದ್ದಾರೆ?

ಇಲ್ಲಿ, ಕೊಳೆರೋಗ ಅಡಿಕೆಗೆ ತಗುಲಿ, ಹೇಗೆ ಬೆಳೆದು, ಅಡಕೆಯನ್ನು ನಾಶ ಮಾಡುತ್ತೇ ಅಂತ ಪ್ರದರ್ಶಿಸಿದ್ದಾರೆ.

ಇದಕ್ಕೇನಾದರೂ ನಿವಾರಣೋಪಾಯ ಕಂಡುಹಿಡಿದಿದ್ದಾರೋ?

ಡಾಕ್ಟರ್ ಕೋಲ್ಮನ್ ಅಂತ ಕೇಳಿದೀಯಾ? ಅವರು ಈ ರೋಗಕ್ಕೆ ಸಂಶೋಧನೆ ನಡಸಿದಾರೆ. 'ಬೊರ್ಡೋ ಮಿಕ್ಶ್ಚರ್' ಅಂತ ಇದೆ. ಅದರಿಂದ ಈ ರೋಗ ಸ್ವಲ್ಪಮಟ್ಟಿಗೆ ತಡೆಗಟ್ಟಬಹುದು . . . ಇಲ್ಲಿ ಈ ಕಡೆ ಹತ್ತಿ, ನೆಲಗಡಲೆ, ಬೇರೆಬೇರೆ ಜಾತಿ ಇಟ್ಟಿದಾರೆ; ಒಂದೊಂದು ಜಾತಿ ಕಾಯಿ ಎಷ್ಟೆಷ್ಟು ಎಣ್ಣೆ ಕೊಡುತ್ತೆ ಅನ್ನೋದರ ಮೇಲೆ ವಿಂಗಡಿಸಿದಾರೆ. ಜೋಕೆ, ಕಡ್ಲೆಕಾಯಿ! ಬಾಯಿಗೆ ಹಾಕ್ಕೊಂಡೀಯಾ!

ಲೋ! ಮ್ಮಾ! ಕಬ್ಬು!

ಅದೆಲ್ಲ ಪ್ರದರ್ಶನಕ್ಕೆ ಇಟ್ಟಿರೋದು, ಅಣ್ಣಯ್ಯ. ಕಬ್ಬು ಅಂದರೆ

'ಬಯಕೆ' ಆದೋರು ಆಡಿದ ಹಾಗೆ ಆಡ್ತೀಯಲ್ಲೋ! . . . ಈ ಕಬ್ಬಿನಲ್ಲಿ ಅನೇಕ ಜಾತಿ: ಸಣ್ಣ ಕಬ್ಬು, ರಸಕಬ್ಬು, ಮರಗಬ್ಬು, . . . ಅಂದ್ಹಾಗೆ, ಇನ್ನೊಂದು ಜಾತಿ ಕಬ್ಬು—ಅಡುಗಬ್ಬು ಅಂತ, ಎಲ್ಲಾದರೂ ಕೇಳಿದೀಯಾ? . . . ಕೇಳೇ ಇಲ್ಲವೆ? ಅಯ್ಯೋ ಬೆಪ್ಪುತಕ್ಕಡಿ! ಹಾಗಂದರೆ ಸೌದೇ ಅಂತ! ಅಡುವ ಕಬ್ಬು—ಅಡುಗಬ್ಬು—ಅಡಿಗೆಗೆ ಬೇಕಾದ ಉರುವಲು!

ಥುತ್! ಅದೂ ಒಂದು ಒಳ್ಳೆ ರುಚಿಯಾದ ಜಾತಿ ಇರಬೇಕು ಅಂತಿದ್ದೆ!

ಇಲ್ಲಿ ನೋಡು: ಬತ್ತದ ಬೇರೆ ಬೇರೆ ಜಾತಿ ತೆನೆ ಇಟ್ಟಿದಾರೆ.

ಎಲ್ಲಾ ಬತ್ತದ ಅಕ್ಕಿ ತಿನ್ನದೇ ಇದ್ರೂ ಹೆಸರಾದ್ರೂ ನೋಡೋಣ. ಆಲೂರು ಸಣ್ಣ; ಹಾಲುಬ್ಬಲು; ಕಡ್ಡಿ; ರತ್ನಚೂಡಿ; ಕೊಯಂಬತ್ತೂರು; ಬಂಗಾರ ಕಡ್ಡಿ! ಮಹಾರಾಜಭೋಗಾ! ಏನೋ ಇದು? ನಮ್ಮ ಮೈಸೂರು ಸಣ್ಣ ಇಟ್ಟೇ ಇಲ್ವಲ್ಲ?

ಏನೋಪ್ಪ! ನೋಡು ಮುಂದೆ, ನಾಡ ಹುಲ್ಲುಗಳು!

ನಾಡಹುಲ್ಲಿನಲ್ಲಿ ಎಂತೆಂಥ ಜಾತಿಗಳಿವೆ! ಹಕ್ಕುಹುಲ್ಲು, ನವಣೆಹುಲ್ಲು, ಕಾಡು ಹಂಚಿಕಡ್ಡಿ ಹುಲ್ಲು, ಅಂಟುಗರಿಕೆ ಹುಲ್ಲು, ಕಾಡುಹಾರಕದ ಹುಲ್ಲು, ಎಮ್ಮೆ ತಪ್ಪಲೆ ಹುಲ್ಲು, ಕಂದಬತ್ತದ ಹುಲ್ಲು, ಗರಿಕೆ ಹುಲ್ಲು, ಊಬಿನ ಹುಲ್ಲು ಕಾಡು ಒರಗು ಹುಲ್ಲು, ಕೋಡಿನಾಲೆ ಹುಲ್ಲು, ಹುಂಬಗಾರಿಕೆ ಹುಲ್ಲು, ಮಂಚದ ಕಾಲಿನ ಹುಲ್ಲು, ಗಂಜಲಗರಿಕೆ ಹುಲ್ಲು, ತುಪ್ಪಾಲೆ ಹುಲ್ಲು, . . . ಎಷ್ಟೊಂದಿವೆಯೋ . . . ಅಬ್ಬ! . . . ಕೋಣನ ತಲೆ ಹುಲ್ಲು, ಸಣ್ಣಕ್ಕಿ ಹುಲ್ಲು . . . ಏನಿದು ಹೆಸರೋ ಹನುಮಂತನ ಬಾಲವ್ರೋ?

ಹುಲ್ಲಿನ ಹೆಸರುಗಳೇ ಇಷ್ಟಾದರೆ, ಇವಕ್ಕೆ ನಾಮಕರಣ ಮಾಡಿದ ಜನಗಳು ಎಷ್ಟು ವಿಧ ಇರಬೇಕು? ಅವರ ಮನಸ್ಸು ಎಷ್ಟು ರೀತಿ ಇರಬೇಕು? . . . ಮುಂದೆ Horticulture ನೋಡು: ಇದು ತೋಟದ ತಯಾರಿಕೆ ವಿಭಾಗ. T-budding ಅಂತೆ . . . ಇದು patch-budding ಅಂತೆ . . . ಇದು grafting ಅಂತೆ . . . ವಿಧವಿಧವಾದ ಕಸಿ ಮಾಡುವ ರೀತಿ. ಈ ವಿಭಾಗದಲ್ಲಿ ಸ್ವಲ್ಪ ಗಮನವಿಟ್ಟರೆ ತೋಟ ಮಾಡುವುದಕ್ಕೆ ಅನುಕೂಲವಾಗುತ್ತೆ.

ಇದೆಲ್ಲ ಎಲ್ಲಿ ಹಿಡಿಸುತ್ತೆ ಹೇಳು ಈ ಜನಗಳಿಗೆ? ಸಂತೆಯಲ್ಲಿ ನುಗ್ಗಿದ ಹಾಗೆ ನುಗ್ಗಿ ಹೋಗ್ತಾರೆ . . . ಅದೇನದು? ಮುಂದಿನ ವಿಭಾಗ?

ಅದು, ಸಸ್ಯಶಾಸ್ತ್ರ ಅಭ್ಯಾಸ ಮಾಡುವವರು, ಗಿಡಗಳ ಬೇರೆ ಬೇರೆ ಭಾಗಗಳನ್ನು ಪರೀಕ್ಷಿಸಲು Slide ತಯಾರಿಸುವುದು . . . ಅಲ್ಲಿ ನೋಡು : "ಸಸ್ಯಗಳಲ್ಲಿ ಕಲಾವೈಭವ" ಅಂತ ಬೋರ್ಡಿದೆ.

ಅಲ್ಲಯ್ಯಾ, ಜನಗಳಲ್ಲೇ ಕಲೆಯಿಲ್ಲ. ಅಂಥದರಲ್ಲಿ ಈ ಸಸ್ಯಗಳಲ್ಲಿ ಕಲಾ ವೈಭವ ಏನು ಬಂತು?

ನೀನು ಬೀರು, ಮೇಜು, ಮಂಚ ನೋಡಿದೀಯಾ? . . . ಅವುಗಳ ಮೈಮೇಲೆ ಸುಳಿಸುಳಿಯಾಗಿ, ಗೆರೆಗೆರೆಯಾಗಿ, ಗುರುತುಗಳು ಒಳ್ಳೆ ಅಂದವಾಗಿ ಇರುತ್ತವಲ್ಲಾ—ಅವು ಈ ಮರಗಳಲ್ಲೇ ಆಗಿಬಿಟ್ಟಿರುತ್ತವೆ. ಅವು ಮಂಚ, ಮೇಜು, ಬೀರುಗಳಿಗೆ ಲಕ್ಷಣವಾಗಿರುತ್ತವೆ. ಆ ಕಲಾವೈಭವ ಇಲ್ಲಿ ನೋಡ ಬಹುದು. ಸೂಕ್ಷ್ಮದರ್ಶಿನಿಯಲ್ಲಿ ನೋಡು.

ಏನು Architectureಓ ಇದು! ಪರವಾ ಇಲ್ಲ ಗಿಡಗಳೂ!

ಅಲ್ಲೇ ನಿಂತು ಮೈಮರೆಯಬೇಡ. ಮುಂದೆ ಬಾ. ಇವೆಲ್ಲ ನೀರಿನಲ್ಲೇ ಇರುವ ಸಸ್ಯಗಳು, Hydrophytes ಅಂತ.

ನೀರಿನಲ್ಲೇ ಇದ್ದರೆ ಇವಕ್ಕೆ ಆಹಾರ? ಇವುಗಳ ವಂಶಾಭಿವೃದ್ಧಿ?

ಅದೇ ಸಸ್ಯಗಳಲ್ಲಿ ಕಾಣುವ ಚಾತುರ್ಯ! ವಾಣೀಪತಿಗೆ ಸೃಷ್ಟಿಸುವ ಚಾತುರ್ಯ ಇದ್ದರೆ, ಇವಕ್ಕೆ ಸನ್ನಿವೇಶಕ್ಕೆ ಹೊಂದಿಕೊಳ್ಳುವ ಚಾತುರ್ಯ ಇದೆ. ನೀರಿನಲ್ಲಿಯೇ ಆಹಾರವನ್ನೂ ತೆಗೆದುಕೊಳ್ಳುತ್ತವೆ, ವಂಶಾಭಿವೃದ್ಧಿಯೂ ಅಲ್ಲಿಯೇ ಆಗುತ್ತದೆ.

ಏನಯ್ಯಾ? ಇದು ಪ್ರಾಣಿಪ್ರದರ್ಶನವೂ ಹೌದೇನು?

ಅಲ್ಲ, ಸಸ್ಯಪ್ರದರ್ಶನ ಇದು. ಯಾಕೆ?

ಮತ್ತೆ ಇಲ್ಲಿ ಮೀನುಗಳೂ ಇವೆ?

ಬಾ ಇಲ್ಲಿ, ಹತ್ತಿರ ನೋಡು. ಒಳಗಡೆ ಕೆಲವು ಸಸ್ಯಗಳೂ ಇವೆ. ಆ ಸಸ್ಯಗಳಿಗೂ ಈ ಮೀನುಗಳಿಗೂ ಪರಸ್ಪರ ಸಂಬಂಧ ಇದೆ. ಕಾಣುತ್ತದೆಯೆ ನೀರಿನೊಳಗೆ ಪೂರ್ತಿ ಮುಳುಗಿರುವ ಸಸ್ಯಗಳು?

ಹೌದು, ಕಾಣುತ್ತದೆ.

ಬಹಳ ಮಂದಿ ನಿನ್ನ ಹಾಗೆಯೇ ಬರೀ ಮೀನು ನೋಡಿ ಹೋಗುತ್ತಾರೆ. ಆ ಸಸ್ಯಗಳನ್ನ ನೋಡೋದೇ ಇಲ್ಲ . . .

ಅದು ಆ photo ಯಾರದ್ದೋ? ಹೂಮಾಲೆ ಹಾಕಿರೋದು?

ಹೋ, ಅದೇ! ಅವರೇ ಈ ಸೆಂಟ್ರಲ್ ಕಾಲೇಜಿನಲ್ಲಿ ಸಸ್ಯಶಾಸ್ತ್ರ ಪ್ರಾರಂಭಿಸಿದ ಆಚಾರ್ಯರು. ಹೆಸರು: ಡಾಕ್ಟರ್ ಸಂಪತ್ ಕುಮಾರನ್ ಅಂತ. ಕೈಮುಗಿದು ಬಾ.

ಮುಗಿಯಿತೋ ಪ್ರದರ್ಶನ?

ಮುಗಿದ ಹಾಗೆಯೇ . . . ಹಾಂ! ಗಂಟೆ ಎಷ್ಟು? . . . ಆರೂವರೆ? ಸಸ್ಯಶಾಸ್ತ್ರದ್ದೇ ಒಂದು ನಾಟಕ ಇದೆ: Turning of a new leaf ಅಂತ. ಅದನ್ನೂ ನೋಡಿಕೊಂಡು ಹೋಗೋಣ. ಯಾರಿಗೆ ಯಾವಾಗ ಜೀವನದಲ್ಲಿ turning of a new leaf ಆಗುತ್ತೋ ಹೇಳೋಕ್ಕಾಗೊಲ್ಲ. ಬಾ.

ಎಂ. ಚಂದ್ರಶೇಖರಯ್ಯ

# ಸಸ್ಯವೈಭವ

[ವೈಜ್ಞಾನಿಕ ಪ್ರದರ್ಶನಗಳಿಗೆ ಏಕೆ ಹೋಗಬೇಕು, ಅಲ್ಲಿ ಏನು ಗಮನಿಸಬೇಕು ಎಂಬ ತಿಳಿವಳಿಕೆಗಳನ್ನು ಪಡೆಯದೆ ಅಲ್ಲಿಗೆ ಹೋಗುವವರ ಪಾಡನ್ನು ಇಲ್ಲಿ ಲೇಖಕರು ಹಾಸ್ಯವ್ಯಂಜಿತವಾಗಿ ಚಿತ್ರಿಸಿದ್ದಾರೆ. ಇಲ್ಲಿಯ 'ನಾನು' ಎಂಬುದನ್ನು 'ನಾನು' ಎಂದೇ ನಂಬಬೇಕಾದದ್ದಿಲ್ಲ.]

"ಮೂಡಣ ದೆಸೆಯಲಿ ಬಾನಿನ ನೀರೆ
ಪೊಸವೇಟದಿ ನಾಚುತ ಕೆಂಪೇರೆ"

ಎಂಬಂಥ ಸುಮನೋಹರ ಸೌಂದರ್ಯ ನನ್ನ ಕಣ್ಣಿಗೆ ಬಿತ್ತು. ಕೆಂಪುಕಿರಣಗಳಿಂದ ಅಲಂಕೃತವಾದ ಆ ಕಾನನ ಸುಂದರವಾಗಿ ರಂಜಿಸುತ್ತಿತ್ತು. ದೊಡ್ಡದೊಡ್ಡದಾಗಿ ಬೆಳೆದು ತಮ್ಮ ರೆಂಬೆಗಳನ್ನು ನಾನಾ ದಿಕ್ಕುಗಳಿಗೆ ಹರಡಿ, ಮೃಗಪಕ್ಷಿಗಳ ಆವಾಸಸ್ಥಾನವಾದ ಮರಗಳ ನಿಕರದಿಂದ ಕೂಡಿತ್ತು ಆ ಕಾನನ. ಉದ್ದಕ್ಕೆ ತಾವೇತಾವಾಗಿ ನಿಂತ ಅಡಕೆಯ ಮರಗಳ ತುದಿಯಲ್ಲಿ ಗೊಂಚಲುಗೊಂಚಲಾಗಿ ಬೆಳೆದ ಕೆಂಪನೆಯ ಹಣ್ಣುಗಳ ಮೇಲೆ ಕೆಂಪುಛಾಯೆ ಬಿದ್ದು, ಪುಟವಿಟ್ಟ ಚಿನ್ನದಂತೆ ಕಂಗೊಳಿಸುವ ಆ ಸೌಂದರ್ಯ, ಬಿಳಲು ಬೇರುಗಳನ್ನು ಇಳಿಬಿಟ್ಟು ನೂರಾರು ವರ್ಷಗಳಿಂದ ನಿಂತ ಭಾರಿಮರಗಳು, ಅಲ್ಲಲ್ಲಿ ದೊಡ್ಡಮರಗಳ ಸುತ್ತ ಗರಿಗೆದರಿ ನಿಂತ ನವಿಲಂತೆ ಬೆಳೆದಿದ್ದ ಕುರುಚಲು ಗಿಡಗಳು, ಸುತ್ತಲಿನ ಹಸುರು ಬಯಲಿನ ಮಧ್ಯೆ ಆ ಹೊಂಗಿರಣಗಳ ತೆಳುಪರದೆಯ ನಡುವೆ ಕಂಗೊಳಿಸುತ್ತಿದ್ದುವು. ಎಲೆಗಳೆಲ್ಲ ಕೆಂಪುಕೆಂಪಾಗಿ ಹಸುರಿನೊಡನೆ ಬೆರೆತು ತಂಗಾಳಿಗೆ ಮೈಯೊಡ್ಡಿ ತೊನೆಯುತ್ತಿದ್ದವು. ಅಲ್ಲಲ್ಲಿ ಕೆಂಪನೆಯ, ಹಸುರು ಹಳದಿಯ, ಬಿಳಿಯ, ನೀಲಿಯ, ಹೂಗೊಂಚಲುಗಳು ಕಲಶದಂತೆ ಆ ಮಹಾ ಹಸುರುಸಮುದ್ರದಲ್ಲಿ ನಲಿದಾಡುತ್ತಿದ್ದುವು. ಸುತ್ತಲಿನ ಹಸುರು ಹುಲ್ಲಿನ ಮೇಲೆ ಹನಿಹನಿಯಾಗಿ ಮುತ್ತು ಪೋಣಿಸಿದಂತೆ ಥಳಥಳಿಸುತ್ತಿತ್ತು ಮಂಜು. ಆಗ ತಾನೆ ಗೂಡುಬಿಟ್ಟು ಮರದಿಂದ ಮರಕ್ಕೆ ಹಾರುತ್ತ, ಚಿಲಿಪಿಲಿ ಗಾನಮಾಡುತ್ತಿದ್ದ ವಿವಿಧ ಪಕ್ಷಿಗಳ ಕಲರವ ಸಣ್ಣನೆ ಎಲ್ಲೋ ದೂರದಲ್ಲಿ ದುಮುಕುವ ನೀರಿನ ಶಬ್ದದಂತಹ ಅವ್ಯಕ್ತವಾದ ಹಿಮ್ಮೇಳದೊಡನೆ ಬೆರೆತು ಸುಶ್ರಾವ್ಯ ಸುಮಧುರಗಾನವಾಗಿತ್ತು. ಅಲ್ಲೊಂದು ಇಲ್ಲೊಂದು ಚಿಟ್ಟೆ ಹೂವಿಂದ

ಹೂವಿಗೆ ಹಾರಿ ಮಕರಂದವನ್ನು ಹೀರುತ್ತಿತ್ತು. ಈ ನಿಸರ್ಗಸೌಂದರ್ಯದ ದೃಶ್ಯಕ್ಕೆ ಮನಸೋತು ಅಲ್ಲಿಯೇ ಕುಳಿತೆ. ಆಗ ನನಗೆ ಅರಿವಿಲ್ಲದೆಯೇ ನನ್ನ ತುಟಿಗಳಿಂದ

"ಪಸುರಲಿ ಪೊಳೆವೈಕಿಲ್ವನಿಮಾಲೆ
ಬಣ್ಣದ ಚಿಟ್ಟೆಗಳಲೆಯುವ ಲೀಲೆ,
ಮೊರೆಮೊರೆವಳಿಗಳ ಮಂಜುಳ ಗಾನ
ಸಗ್ಗವು ಭುವಿಗೊಲಿದಿತ್ತಿಹ ದಾನ!"

ಎಂಬ ಕುವೆಂಪು ಕವನದ ಪಂಕ್ತಿಗಳು ಹೊರಬಿತ್ತು.

ಕುಳಿತವನು ಹಾಗೆಯೇ ಒಂದು ಸಲ ಹಿಂದೆ ನೋಡಿದೆ. ಗಗನ ದೆತ್ತರಕ್ಕೂ ಹಬ್ಬಿ ನಿಂತ ಬೆಟ್ಟಸಾಲು ಸೂರ್ಯನ ಹೊಂಬೆಳಕಿನಿಂದ ತನ್ನ ಮೈಗೆ ಹೊಂಬಣ್ಣದ ಮೆರುಗಿಟ್ಟು ಅಲ್ಲಲ್ಲಿ ಕುರುಚಲು ಗಿಡಗಳೊಡನೆ ಕೆಲಕಡೆ ಕಡಿದಾಗಿ, ಕೆಲಕಡೆ ಇಳಿಜಾರಾಗಿ, ತನ್ನ ಪಾದವನ್ನು ಕಣಿವೆಯ ಕಡೆ ಚಾಚಿತ್ತು. ನಾನು ಕುಳಿತ ಸ್ಥಳಕ್ಕೆ ಹತ್ತಿರವೇ ನೀಳವಾಗಿ ಸಣ್ಣಗೆ ಬೆಳೆದಿದ್ದ ಅಗಸೆಯ ಕೊನೆಯಲ್ಲಿ ಗಿಣಿಗಳ ಗುಂಪು ಹೂಗಳೊಡನೆ ಚಲ್ಲಾಟವಾಡು ತ್ತಿತ್ತು. ನಾಲ್ಕಾರು ನಿಮಿಷ ಕಳೆಯಿತು. ನರಿಯದೋ, ತೋಳನದೋ ಒಂದು ಕರ್ಕಶವಾದ ಕೂಗು ಕೇಳಿಸಿತು.

ಈ ಸನ್ನಿವೇಶದಲ್ಲಿ ಮೈಮರೆತಿದ್ದಂತೆ ನನ್ನ ಮನಸ್ಸು ವಿ. ಸೀ. ಅವರ "ಭಾಗ್ಯತಾರೆ"ಯ ಕಡೆ ಹರಿಯಿತು:

"ಮುಚ್ಚಿ ಕವಿದ ರೆಪ್ಪೆಗಳನು
ಚುಚ್ಚಿ ಕಣ್ಣ ತೆರೆಸುತಿದೆ.
ಕೆಚ್ಚಿನೊಡಲ ವೀರ್ಯವೆರೆದು
ನೆತ್ತರನ್ನು ಕುದಿಸುತಿದೆ."

ಶಿಂಷೆಯ "ಪವರ್ ಸ್ಟೇಷನ್" ನೋಡಹೋದ ನಮ್ಮ ಗುಂಪೊಂದು ನೇಸರುದಯದ ವೇಳೆಗೆ ಆ ಆರು ನೂರು ಅಡಿಗಳ ಆಳಕ್ಕೆ "ಟ್ರಾಲಿ"ಯಲ್ಲಿ ಇಳಿದೆವು. ಇಳಿದೊಡನೆ ನನ್ನನ್ನು ಆಕರ್ಷಿಸಿದ್ದು ಇತರರನ್ನಾಕರ್ಷಿಸಿದ ಭೂತಾ ಕಾರದ ಯಂತ್ರಗಳಲ್ಲ; ಆ ನಸುಗೆಂಪಿನಲ್ಲಿ ಇನ್ನೂರು ಮುನ್ನೂರು ಗಜಗಳಾಚೆ ಕಂಗೊಳಿಸುತ್ತಿದ್ದ ಸಸ್ಯಸೌಂದರ್ಯ. ಕಲ್ಲುಗಳನ್ನು ಹತ್ತಿ ಇಳಿದು, ಬಂಡೆ

ಯಿಂದ ಬಂಡೆಗೆ ದಾಟಿ ಅಂತೂ ಅಲ್ಲಿಗೆ ಬಂದಿದ್ದೆ, ಆ ಪ್ರಕೃತಿಸೌಂದರ್ಯವನ್ನು ಈಂಟುವುದಕ್ಕೆ. ಮನಸ್ಸಿಲ್ಲದ ಮನಸ್ಸಿನಲ್ಲಿ ಆ ಭೂತಯಂತ್ರಗಳನ್ನು ಒಂದು ಬಾರಿ ನೆಪಮಾತ್ರಕ್ಕೆ ನೋಡುವ ಶಾಸ್ತ್ರಮಾಡಿ "ಟ್ರಾಲಿ" ಏರಿದೆ. ಬಸ್ ಸಾಯಂಕಾಲಕ್ಕೆ ಪುನಃ ಬೆಂಗಳೂರು ಕಡೆ ಹೊರಟಿತು. ಅಂದಿನ ನೇಸರು ದಯದ ದೃಶ್ಯಗಳನ್ನೇ ಮೆಲುಕು ಹಾಕುತ್ತಾ ಇರುವಾಗ ನನ್ನ ದೃಷ್ಟಿ ಇಕ್ಕೆಲ ಗಳಲ್ಲಿದ್ದ ಹೊಲ ಗದ್ದೆಗಳ ಕಡೆ ಹರಿಯಿತು. ಆ ಅಸ್ತಮಯದ ಕೆಂಬೆಳಕಿನಲ್ಲಿ

ಹಚ್ಚ ಹೊಲ ಹುಚ್ಚೆಳ್ಳು
ತೆನೆ ಜೋಳ ನೆಲ್ಲು,
ಒಂಟಿ ಮರಗಳ ಸುತ್ತ
ರಾಸವೆಲ್ಲೆಲ್ಲೂ!

ಬಾಳೆ ಕೈ ಬೀಸುತ್ತ
ಕರೆವ ಕಣ್ ಸೈಪು!
ಗರಿಯಲಗ ಝಳಪಿಸುವ
ಈಚಲಿನ ಕಾಪು!

ವೇಗದಲ್ಲಿ ಸಾಗುತ್ತಿತ್ತು ಬಸ್ಸು. ಗದ್ದೆಗಳ ಸಾಲನ್ನು ನೋಡುತ್ತಾ

"ಮುಗುದೆಯೊಲು ತಲೆವಾಗಿ
ತೂಗುತಿಹ ತೆನೆಗಳಿಂ
ಬೆಳಗುತಿಹ ಗದ್ದೆಗಳ
ಸೊಗಸ ನೋಡು!"

ಎಂದು ಕುರುಕುತ್ತಾ ಊರಿಗೆ ಬಂದು ಸೇರಿದೆ.

* * * *

ಇದೆಲ್ಲ ಜ್ಞಾಪಕಕ್ಕೆ ಬಂದದ್ದು ನಾನು ಸಸ್ಯಶಾಸ್ತ್ರ ಪ್ರದರ್ಶನಕ್ಕೆ ಹೋಗಲಿಚ್ಛಿಸಿದಾಗ. ಅಲ್ಲಿ ಏನು ಕಾಣುವೆನೋ ಎಂಬ ಕುತೂಹಲದಿಂದ "ಕ್ಯೂ"ನಲ್ಲಿ ನಿಂತು ಎರಡಾಣೆ ಕೊಟ್ಟು ಟಿಕೆಟ್ ಕೊಂಡೆ.

ಒಳಗಡೆ ಕಾಲಿಟ್ಟಾಗ ನಾ ಮೊದಲು ಕಂಡದ್ದು: ಎಡಗಡೆಗೆ ಸಾಲಾಗಿ

ಜೋಡಿಸಿದ್ದ ಮೇಜುಗಳ ಮೇಲೆ ಪಸರಿಸಿದ್ದ ಸಸ್ಯವರ್ಗ ಮತ್ತು ಸೂಕ್ಷ್ಮ ದರ್ಶಕ ಯಂತ್ರಗಳು.

ಪಾಚಿ, ಕಲ್ಲುಹೂವು, ಮುಂತಾದ ಸಣ್ಣ ಸಣ್ಣ ಸಸ್ಯಜಾತಿಯ ಗುಂಪಿನಿಂದ ತುಂಬಿದ ಮೇಜಿನ ಬಳಿ ನಿಂತಾಗ ಅಲ್ಲಿದ್ದ "guide" ಆ ಕುರಿತು ಏನನ್ನೋ ಹೇಳಿದರು. ಒಂದೂ ತಲೆಗೆ ಹತ್ತಲಿಲ್ಲ. ಅದನ್ನಲ್ಲಿಯೆ ಬಿಟ್ಟು ಮುಂದೆ ಹೊರಟೆ. ಅಂದವಾದ ಗಾಜಿನ ಪಾತ್ರೆಯಲ್ಲಿ ನೀಲಿ ಬಣ್ಣದ ನೀರನ್ನಿಟ್ಟು, ತೊಟ್ಟಿನ ಸಮೇತ ಕೆಂಪು ಹೂ ಸಮೂಹವನ್ನಿಟ್ಟಿದ್ದರು.

ಆ ಕೃತಕಸೌಂದರ್ಯ ಪ್ರಾಕೃತ ಸೌಂದರ್ಯವನ್ನು ಹೋಲುವುದೆಂತು? ಆಗಲೇ ಆ ಪುಷ್ಪಸಮೂಹ ಬಾಡಿ, ತನ್ನ ಕೋಮಲತೆಯನ್ನು ಕಳೆದುಕೊಂಡು ಸಪ್ಪೆಯಾಗಿತ್ತು. ಪಕ್ಕದಲ್ಲಿದ್ದ ಸೂಕ್ಷ್ಮದರ್ಶಿನಿಯಲ್ಲಿ ಕಣ್ಣಿಟ್ಟು ನೋಡಿದೆ. ಹಿಂದಿನಿಂದ ಅದೇನೋ "ಪೊಲೆನ್" ಎಂಬ ಧ್ವನಿ ಬಂತು.

ಗೋಡೆಗಳ ಮೇಲೆ ತೂಗಹಾಕಿದ್ದ ಬಣ್ಣಬಣ್ಣದ "ಚಾರ್ಟ್"ಗಳು ನನಗೆ ಬರೀ ಬಣ್ಣದ "ಚಿತ್ತಾರ"ವಾಯಿತೇ ಹೊರತು ಅರ್ಥ ಮಾತ್ರ ತಿಳಿಯಲಿಲ್ಲ. Mendel's theory ಎಂದು ಬರೆದಿದ್ದ "ಚಾರ್ಟ್" ಒಂದನ್ನು ತೋರಿಸುತ್ತ ಅಲ್ಲಿದ್ದವರು ಏನೇನೋ ಹೇಳಿದರು. ಏನೂ ತಿಳಿಯದಿದ್ದರೂ ನಾನು ತಿಳಿದವನಂತೆ ತಲೆಯಲ್ಲಾಡಿಸಿದೆ. ನನ್ನ ಹಿಂದೆಯೇ ಯಾವಾಗಲೋ ಬಂದ ನನ್ನ Botany ಮಿತ್ರ ನಾನು ಅಲ್ಲಿಂದ ಮುಂದೆ ಹೊರಡುತ್ತಲೂ ನನ್ನನ್ನು ಹಾಸ್ಯ ಮಾಡಿದ.

ಮುಂದಿನ **ಕೊಠಡಿ ಹೊಕ್ಕಾಗ** "Fruits and Flowers" ಎಂದು ಬರೆದ ಬೋರ್ಡ್ ಒಂದು ತೂಗಹಾಕಿತ್ತು. ಆಗಲೇ ಮಂಕಾಗಿದ್ದ ನಾನು, ಹೋಗಲಿ ಕೊನೆಗೆ ಪ್ರದರ್ಶನದಲ್ಲಿಟ್ಟ ದೊಡ್ಡ ದೊಡ್ಡ ಅಥವಾ ವಿಚಿತ್ರ ರೂಪಿನ ದ್ರಾಕ್ಷಿ, ದಾಳಿಂಬೆ, ಮಾವು, ಕಿತ್ತಿಳೆ, ಸೇಬು, ಇವುಗಳನ್ನಾದರೂ ನೋಡುತ್ತೇನಲ್ಲಾ ಎಂದು ಸಂತೋಷದಿಂದ ಮುನ್ನಡೆದೆ. ಆದರೆ ಅಲ್ಲಿ ನಾ ಕಂಡದ್ದು ಕೆಂಪನೆಯ, ಕಪ್ಪನೆಯ, ಬೆಳ್ಳನೆಯ, ದಪ್ಪನೆಯ, ಸಣ್ಣನೆಯ, ರಸಪೂರಿತ ಹಣ್ಣುಗಳನ್ನಲ್ಲ; ಬದಲಾಗಿ ಒಣಗಿದ್ದ ಯಾವುದೋ ಕೆಲವು ಹಣ್ಣಿನ ರೂಪದ ಬುರುಡೆಗಳನ್ನ. ಪ್ರತಿಯೊಂದು ಒಣ ಬುರುಡೆಯ ಬಳಿಯೂ ಸಿಲಿಕ್ವ, ಸಮಾರ, ಬೆರ್ರಿ, ಕ್ಯಾಪ್ಸೂಲ್ ಎಂದು ಏನೇನೋ ಬರೆದಿದ್ದ ಚೀಟಿಗಳು! "ತೆಳು

ಸಿಪ್ಪೆ ಹೊದಿಕೆಯೊಳು ಪ್ರೋಳಿವಮೃತಗಟ್ಟಿಯೆನೆ ರಸಬಾಳೆ ಗೊನೆ" ನಾಲೂ ಅಲ್ಲಿ ಕಾಣಲಿಲ್ಲ, "ಬಾಯ್ನೀರನೊಸರಿಸುವ ತನಿದ್ರಾಕ್ಷಿ ಗೊಂಚಲೂ" ಅಲ್ಲಿ ಕಾಣಿಸಲಿಲ್ಲ. ಬಾಯ್ತೆರೆದು ಕೆಂಪಕೆಂಪನೆಯ ಬೀಜಗಳ ಮುತ್ತು ಜೋಡಣೆ ಯನ್ನು ತೋರಿಸುವ ದಾಳಿಂಬ, ಬಣ್ಣ ಬಣ್ಣದ ಮೈಯ ರುಚಿಯ ತವರಾದ ಸೇಬು, ಇವುಗಳ ಬದಲು, ಸಿಲಿಕ್ವ! ಸಮಾರ! ಯಾರಿಗೆ ಗೊತ್ತು, ಇವು ಎಂತಹ ಹಣ್ಣುಗಳೆಂದು?

ಅಲ್ಲಿದ್ದ ಬುಟ್ಟಿಯಾಕಾರದ ಕಾಯೊಂದನ್ನು ತೆಗೆದುಕೊಂಡು "ಇದನ್ನು 'ಅರಿಸ್ಟಲೋಕಿಯ' ಎನ್ನುತ್ತಾರೆ. ಇದು ಬೀಜಪ್ರಸಾರದಲ್ಲಿ ಬಹಳ ಸಹಕಾರಿ. ಹೀಗೆಯೇ ಹತ್ತಿಯ ಕಾಯಿಯೂ" ಎಂದು ಏನೇನೋ ಹೇಳುತ್ತಿದ್ದುದನ್ನು ಅಲ್ಲಿಯೇ ಬಿಟ್ಟು ಮುಂದೆ ಹೊರಟರೆ—"ಕೊನೆಯುಗುರು ಸೋಂಕಿದೊಡೆ ರಸ ವೊಸರಿ ಪರಿಯುತಿಹ" ರಸದಾಳೆ ಕಬ್ಬಿಲ್ಲದಿದ್ದರೂ ಎಂದೋ ಕಿತ್ತು ಅರೆ ಬಾಡಿದ ವಿವಿಧ ಕಬ್ಬುಗಳ ಸಾಲೊಂದನ್ನು ಕಂಡೆ.

ಹೂವುಗಳ ಗುಂಪಿನಲ್ಲಿ ಕೆಲವು ಹೂಗಳೇನೋ ಹಾಜರಿದ್ದುವು. ಗುಲಾಬಿ ಗುಲಾಬಿಯಾಗಿರದೆ ಕಂದಿ, ಬಾಡಿ, ಬಸವಳಿದಿತ್ತು. ಮಲ್ಲಿಗೆ, ಸಂಪಿಗೆ ಮನೋರಂಜನ, ತಾಳೆ, ಕಮಲ, ಜೊತೆಗೆ ಒಂದು ನೈದಿಲೆಯ ಮೊಗ್ಗು ವಸ್ತುಪ್ರದರ್ಶನ ನೋಡಲು ಬಂದಿದ್ದರೂ ಗಿಡದಲ್ಲಿ ಕಾಣುವ ಕಾಂತಿ ಇಲ್ಲದೆ, ಯಾರೋ ಬಲವಂತಕ್ಕೆ ಎಳೆದುಕೊಂಡು ಬಂದಂತೆ ಕಾಣುತ್ತಿದ್ದವು. ಈ ಹೂಗಳು ಸುವಾಸನೆ ಕೊಡದಿದ್ದರೂ ಸರ್ವವ್ಯಾಪಿ "ವಾಯು" ಅವರಿಂದ ಅದನ್ನು ಕಿತ್ತುಕೊಂಡು ನಮ್ಮ ಮೂಗಿಗೆ ಸೋಂಕಿಸುವಂತೆ ಕಾಣುತ್ತಿತ್ತು.

ಅನೇಕ ತರಹ ಬೀಜ ಶೇಖರಿಸಿ ನೋಟಕ್ಕೆ ಇಡಲ್ಪಟ್ಟಿತ್ತು. ಅವೆಲ್ಲವೂ

"The winged seeds, where they lie cold and low
Each like a corpse within its grave."

ಸಸ್ಯಗಳಿಗೆ ತಗುಲುವ ರೋಗಗಳು, ಅವುಗಳಿಗೆ ಸಂಬಂಧಪಟ್ಟ ಕೆಲವು ವಸ್ತು ಶೇಖರಣೆಗಳು, ಇತ್ತು. ಅವೊಂದೂ ನನಗೆ ರುಚಿಸಲಿಲ್ಲ.

ಬೇರೊಂದು ಕೊಠಡಿಯಲ್ಲಿ "Microtome" ಎಂಬ ಯಂತ್ರ ಸ್ಥಾಪಿತ ವಾಗಿತ್ತು. ಸಸ್ಯಗಳ ಸೂಕ್ಷ್ಮಭಾಗಗಳ ತೆಳುಪದರಗಳನ್ನು ಕತ್ತರಿಸಲು ಅದನ್ನು ಉಪಯೋಗಿಸುವರೆಂದು ತಿಳಿದುಬಂತು.

ಇನ್ನೊಂದು ಕಡೆ 'ಪರಾವಲಂಬಿ ಮತ್ತು ಮಾಂಸಾಹಾರಿಸಸ್ಯಗಳು' ಎಂದು ಬರೆದು ತೂಗಹಾಕಿದ್ದ ಬೋರ್ಡ್ ಬಳಿಯಲ್ಲಿ ಹೋಗಿ ನೋಡಿದೆ. ನಾ ಕಂಡದ್ದು ಸಸ್ಯಗಳನ್ನಲ್ಲ; "ಪುಳ್ಳಿಪುಟರೆ"ಗಳನ್ನು ಎನಿಸಿತು. ಒಣಕಲ ಭಾಗಗಳನ್ನು ತೆಳ್ಳನೆಯ ಕಾಗದದಲ್ಲಿ "ಪ್ಯಾಕ್"ಮಾಡಿದ್ದರು. ಎಲ್ಲೆಲ್ಲಿಯೋ ಸುತ್ತಿ ಬಂದ ನನ್ನ ಸ್ನೇಹಿತ ಯಾವಯಾವುದರ ಕಡೆಯೋ ಕೈತೋರಿಸಿ "ನೆಪೆನ್‌ಥಿಸ್, ಲೋರ್‍ಯಾನ್‌ಥಸ್" ಎಂದು ಏನೇನೋ ಗೊಣಗುಟ್ಟಿದ. ಮಾತಾಡದೆ ಇನ್ನೊಂದು ಕೊಠಡಿಯನ್ನು ನಾವಿಬ್ಬರೂ ಹೊಕ್ಕಾಗ Aquarium ಎಂದು ಬರೆದಿದ್ದ ಕಡೆ ಮಣ್ಣುಮುದ್ದೆಗಳ ಮಧ್ಯೆ ನಾನು ಕಂಡದ್ದು ಅಲ್ಲೊಂದು ಇಲ್ಲೊಂದು ಹಸಿರುಗಿಡವನ್ನು.

ಎಲ್ಲವನ್ನೂ ಮುಗಿಸಿ ಹೊರಗೆ ಹೋಗುವ ಬಾಗಿಲ ಬಳಿ ಬಂದಾಗ ಒಂದು ದೊಡ್ಡ ಗಾಜಿನ ಪಾತ್ರೆಯಲ್ಲಿ ಬಣ್ಣಬಣ್ಣದ ಮೀನುಗಳು ಓಡಾಡುತ್ತಿದ್ದುದನ್ನು ಕಂಡೆ. ಎಳೆಯ ಹುಡುಗನಂತೆ ಅದನ್ನೇ ನೋಡುತ್ತಾ ಅಲ್ಲಿಯೇ ನಿಂತೆ. ನನ್ನ ಸ್ನೇಹಿತ "ಲೋ ಬಾರೋ. ಏನ್ ನೋಡ್ತೀಯ ಅದನ್ನ ಎಳೇ ಮಗು ಹಾಗೆ?" ಎನ್ನುತ್ತ ಕೈಹಿಡಿದೆಳೆದ.

"ಏನ್ exhibitionಓ ಇದು?" ಅಂದೆ. "ನಿಮ್ಮಂಥ ಪೆಕ್ರೆಗಳಿಗೇನ್ ಗೊತ್ತಾಗತ್ತೇಳು Botany ವಿಷಯ? ಅಷ್ಟು ಚೆನ್ನಾಗಿ ಬಿಡಿಸಿ ಬಿಡಿಸಿ ತೋರಿಸಿದಾರೆ. ಏನ್ Exhibition ಅಂತೆ!" ಎಂದು ಮೂಗುಮುರಿದ.

"My heart leaps when I behold
A rainbow in the sky"

ಎಂದು Wordsworth ಹೇಳಿದನಾದರೆ, ಸಸ್ಯವೈಭವ ಅದಕ್ಕಿಂತ ಹೆಚ್ಚಾಗಿ ನನ್ನ ಹೃದಯವನ್ನು ಕುಣಿಸುತ್ತದೆ ಎಂದು ಜಂಬ ಕೊಚ್ಚುತ್ತಿದ್ದ ನಾನು ಏಕೋ ಅಂದಿನ ಸಸ್ಯವೈಭವದಿಂದ ತೃಪ್ತಿಪಡಲಿಲ್ಲ.

**—ಎ. ವೆಂಕಟನಾರಾಯಣರಾವ್**

# " ಕಾಲೆಜ್ ಬರವಣಿಗೆ—ಮೊದಲನೆಯ ಆವರ್ತ "

## (ಈಗ ಇದಕ್ಕೆ '**ಮಕ್ಕಳ ಮಾತು**' ಎಂದು ಹೆಸರು)

## ಅದನ್ನು ಕುರಿತು

---

[ಮುಂದೆ ಮುದ್ರಣವಾಗಿರುವ ಹಿರಿಯರ ಮಾತುಗಳನ್ನು ನಮ್ಮ ವಿದ್ಯಾರ್ಥಿಗಳು ಗಮನಿಸಿ ಮನನಮಾಡಬೇಕು. ಅವರ ಮೆಚ್ಚಿಕೆಯಿಂದ ನಿಮಗೆ ಉತ್ಸಾಹ ಹೆಚ್ಚಲಿ, ಭರವಸೆ ಬಲಿಯಲಿ; ಅವರ ಸಲಹೆಗಳನ್ನು ಸ್ವೀಕಾರಮಾಡಿ ಸಾಧಿಸುವುದರಿಂದ ನಿಮ್ಮ ಸಾಹಿತ್ಯಶಕ್ತಿ ವೃದ್ಧಿಯಾಗಿ ಬಲಗೊಳ್ಳಲಿ.]

§

'ಕಾಲೆಜ್ ಬರವಣಿಗೆ'ಯಲ್ಲಿಯ ಲೇಖಗಳೆಲ್ಲ ತುಂಬ ಚೆನ್ನಾಗಿವೆ, ನಿಜವಾಗಿಯೂ ಬಹಳ ಚೆನ್ನಾಗಿವೆ. ಇದು ಬಾಯಿಯ ಮಾತಲ್ಲ, ಮನಸ್ಸಿನ ಮಾತು. ಆದರೆ ಅವಲ್ಲಿ ಈ ಲೇಖ ಉತ್ತಮ, ಅದಕ್ಕಿಂತ ಆ ಲೇಖ ಕೊಂಚ ಎಡತರ, ಎಂದು ಮೊದಲಾಗಿ ಹೇಳಹೋದರೆ ಲೇಖಕರ ಮನಸ್ಸಿನಲ್ಲಿ ತಂತಮ್ಮ ಬಗ್ಗೆ ಹಿಗ್ಗು-ಕುಗ್ಗುಗಳನ್ನು ಕಲ್ಪಿಸಿಕೊಳ್ಳಲಿಕ್ಕೆ ಎಡೆಮಾಡಿಕೊಟ್ಟಂತಾಗಬಹುದಾದ ಕಾರಣ, ಹಾಗೆನ್ನದೆ ಮೊತ್ತವಾಗಿ ಇವೆಲ್ಲವೂ ಬಹಳ ಚೆನ್ನಾಗಿವೆ ಎಂದಿರುವೆನಷ್ಟೇ. ಇಷ್ಟು ಉತ್ಕೃಷ್ಟವಾದ ಲೇಖಗಳನ್ನು ಬರೆದಿರುವ ಬಗ್ಗೆ ನನ್ನ ಸಾಹಿತ್ಯಬಂಧುಗಳನ್ನು ಮನಸಾರೆ ಅಭಿನಂದಿಸುತ್ತೇನೆ, ಅವರಿಗೆ ವಿಶೇಷವಾದ ಸಾಹಿತ್ಯ ಶ್ರೇಯಸ್ಸನ್ನು ಕೋರುತ್ತೇನೆ. ಇತಿ ಶಮ್.

—**ಎಂ. ಗೋವಿಂದ ಪೈ**

§

ಕಾಲೇಜು ಮಟ್ಟದ ಹುಡುಗ ಹುಡುಗಿಯರಿಗೆ ತಮ್ಮ ಭಾಷಾಸಾಹಿತ್ಯಗಳ ಮೇಲೆಷ್ಟು ಪ್ರಮಾಣದ ಪ್ರಭುತ್ವವಿದೆ; ಅವರಿಗೆ ಲೋಕಾನುಭವವೆಷ್ಟು ಮಟ್ಟಿಗಿದೆ; ಜೀವನದ ಪರಮಾರ್ಥ ಕುರಿತು ಅವರ ಗುರಿಯೇನು; ಅವರ

ಭಾವನಾ ಶಕ್ತಿ, ಸೃಷ್ಟಿ ಶಕ್ತಿ, ಕ್ರಿಯಾ ಶಕ್ತಿಗಳ ಸ್ವರೂಪವೆಂತಹುದು; ಇವೇ ಮುಂತಾದ ಅಂಶಗಳನ್ನೆಲ್ಲ ಗುರುತಿಸಿ ಸಮಾಧಾನಮಾಡಿಕೊಳ್ಳಲು ಮೇಲಿಂದ ಮೇಲೆ ಈ 'ಬರವಣಿಗೆ'ಯನ್ನು ಸಹಾನುಭೂತಿಯಿಂದ ಓದಬೇಕು.

ಇದರೊಳಗಿನ ಹತ್ತು ಲೇಖನಗಳಲ್ಲಿ ಹತ್ತು ವ್ಯಕ್ತಿತ್ವಗಳ ಮುದ್ರೆಗಳಿವೆ. ಶಬ್ದಸಂಪತ್ತು, ವಾಕ್ಯರಚನೆ, ಭಾವಪ್ರಕಾಶ ಚಾತುರ್ಯ, ಕಥನ ಕೌಶಲ ಮೊದಲಾದುವೆಲ್ಲ ಎದ್ದು ಕಾಣುತ್ತವೆ. ಅರಳಲು ಸಿದ್ಧವಾಗುತ್ತಿರುವ ಮೊಗ್ಗಿನ ಭಾಗ್ಯವನ್ನೆಲ್ಲ ನೋಡುತ್ತೇವೆ. 'ಕಾಲೆಜ್ ಬರವಣಿಗೆ'ಯನ್ನು ನೋಡಿ ನನಗಾದರೂ ಬಹಳ ಸಂತೋಷವಾಗಿದೆ. ಅಷ್ಟು ಮಾತ್ರವಲ್ಲ, ಕನ್ನಡ ಗದ್ಯ ಸಾಹಿತ್ಯದ ಭವಿಷ್ಯವು ಭವ್ಯ-ದಿವ್ಯವೆಂಬುದು ಸ್ಥಿರವಾಗಿದೆ. ಮೊದಲನೆಯ ಆವರ್ತವೇ ಇಷ್ಟು ಸುಖವಾಗಿರಲು, ಇನ್ನು ಎರಡು ಮೂರನೆಯ ಆವರ್ತಗಳ ಮಾತೇನು? ತಮ್ಮ ಪ್ರಯತ್ನ ಪೂರ್ಣ ಯಶಸ್ವಿಯಾಗಲೆಂಬುದು ನನ್ನ ಹಾರೈಕೆ. 'ಗದ್ಯಂ ಹೃದ್ಯಂ.'

—**ತಿರುಮಲೆ ತಾತಾಚಾರ್ಯ ಶರ್ಮನ್**

§

I was delighted to go through the collection of ten essays by the Central College students entitled "ಕಾಲೆಜ್ ಬರವಣಿಗೆ". On the inside title page you have mentioned the price to be paid for the book (ಆದರದ ಅವಲೋಕನ; ಆಸಕ್ತಿಯ ಅನುಸರಣ) and I have paid it most willingly.

It was my impression that the quality and standard of these essays seemed better and higher than those in previous volumes. A certain amount of artificiality that was felt by the readers of the previous volumes was less in this volume and also there was a greater freedom of thought and its expression. I would like to add that I liked "ಮದುವೆ ಮನೆಯ ಸಂಗೀತ" and "ಟೋಪಿ" very much indeed.

Dear friend, you are doing a great service to the Kannada language and to the students themselves by this

method of bringing to light the hidden and sometimes the shy talents of our young folk.

—*S. G. Sastry*

§

ತಾವು ಪ್ರೀತಿಯಿಂದ ಕಳುಹಿಸಿದ ಕಾಲೇಜು ಬರವಣಿಗೆ (ಮೊದಲನೆಯ ಆವರ್ತ) ಓದಿದೆ. ನಿಜವಾಗಿ ಒಳ್ಳೆಯ ಮೆಚ್ಚುಕೆಯ ಕೆಲಸ ಮಾಡಿದ್ದೀರಿ.

ನೀವು ಸ್ವಾಭಾವಿಕವಾಗಿ ವಿದ್ಯಾರ್ಥಿಗಳಲ್ಲಿ ಪ್ರೇಮವುಳ್ಳವರು. ಆದುದರಿಂದಲೇ ನೀವು ಎಲ್ಲಿರಲಿ, ಅಲ್ಲಿಯ ವಿದ್ಯಾರ್ಥಿಗಳಲ್ಲಿ ಅಡಗಿರುವ ನಿರ್ಮಾಣ ಶಕ್ತಿಯನ್ನು ಕಂಡುಹಿಡಿದು ಅದಕ್ಕೆ ಉತ್ತೇಜನದ ಗಾಳಿ ಬೀಸಿ ಪ್ರಕಾಶಪಡಿಸುತ್ತೀರಿ. ಆ ಯೋಗ ಹಿಂದೆ ನೀವು ಅಧ್ಯಾಪಕರಾಗಿದ್ದ ಮೈಸೂರು ತುಮಕೂರುಗಳ ಕಾಲೇಜು ವಿದ್ಯಾರ್ಥಿಗಳಿಗೆ ದೊರೆತಿದ್ದು ಈಚೆಗೆ ಸೆಂಟ್ರಲ್ ಕಾಲೇಜ್ ವಿದ್ಯಾರ್ಥಿಗಳಿಗೆ ದೊರೆತಿದೆ. ಈ ಹಿತವಾದ ಅಧ್ಯಾಪಕ ಶಿಷ್ಯ ಸಂಮಿಳನಕ್ಕಾಗಿ ನಾನು ಇಬ್ಬರನ್ನೂ ಅಭಿನಂದಿಸುತ್ತೇನೆ.

ಇಂಗ್ಲಿಷ್ ಓದುತ್ತಿರುವ ನಮ್ಮ ವಿದ್ಯಾರ್ಥಿಗಳಿಗೆ ಕನ್ನಡದ ಮೇಲೆ ಪ್ರೀತಿ ಬರುವುದೇ ಕಷ್ಟ. ಪ್ರೀತಿ ಬಂದರೂ ಅಭಿರುಚಿ ಬರುವುದಿಲ್ಲ. ಆದರೆ ಇಂಗ್ಲಿಷ್ ಭಾಷೆ ಜನರಿಗೆ ಹೆಚ್ಚಾಗಿ ನಿತ್ಯದ ಬಳಕೆಗೆ ಒದಗುವುದಿಲ್ಲ. ನಾವು ಎಷ್ಟೇ ಇಂಗ್ಲಿಷ್ ಓದಿದರೂ ಜನಸಾಮಾನ್ಯರನ್ನು ನಾವು ಸೇವೆ ಮಾಡಬೇಕಾದರೆ ಕನ್ನಡದಿಂದ ಮಾತ್ರ ಸಾಧ್ಯ.

ಈ ಕನ್ನಡ ಹುಟ್ಟುಶಕ್ತಿ ನಮ್ಮ ಯುವಕ ವಿದ್ಯಾರ್ಥಿ ವೃಂದದಲ್ಲಿ ಪೂರ್ಣವಾಗಿ ಇದೆ. ಆ ಶಕ್ತಿಯನ್ನು ಹೆಚ್ಚುಹೆಚ್ಚಾಗಿ ಬಳಕೆಗೆ ತರಬೇಕು. ಭಾಷೆಯನ್ನು ಉಪಯೋಗಿಸಿ, ಉಪಯೋಗಿಸಿ, ಪಳಗಿಸಿಕೊಂಡ ಹೊರತು ಅದರಿಂದ ನಮ್ಮ ಕಾರ್ಯವನ್ನು ಮಾಡಿಸಿಕೊಳ್ಳಲು ಆಗುವುದಿಲ್ಲ. ಕೆಲವರಿಗೆ ತಮ್ಮಲ್ಲಿ ಇರುವ ಈ ಆಜನ್ಮಶಕ್ತಿಯ ಅರಿವೇ ಉಂಟಾಗಿರುವುದಿಲ್ಲ. ತಾವು ಮಾಡುತ್ತಿರುವ ಪ್ರಯತ್ನಗಳಿಂದ—ಅಂದರೆ ವಿದ್ಯಾರ್ಥಿಗಳಿಂದ ಮಾಡಿಸುತ್ತಿರುವ ಈ ಸಾಹಿತ್ಯ ಸೃಷ್ಟಿಯಿಂದ—ವಿದ್ಯಾರ್ಥಿಗಳಿಗೆ ತಮ್ಮ ಶಕ್ತಿ ಗೋಚರವಾಗುತ್ತಿದೆ. ಯಾರಿಗೆ ಗೊತ್ತು, ಇವರಲ್ಲಿ ಎಷ್ಟು ಜನ, ನೀರಿನಲ್ಲಿ ತನ್ನ ಪ್ರತಿಬಿಂಬವನ್ನು ನೋಡಿದನಂತರ ತಾನು ಸಿಂಹವೆಂಬುದನ್ನು ಅರಿತ ಸಿಂಹದ

ಮರಿಯಂತೆ, ಕನ್ನಡ ಸಾಹಿತ್ಯವಾಹಿನಿಯಲ್ಲಿ ಈಜುವ ತಮ್ಮ ಶಕ್ತಿಯನ್ನು ಕಂಡುಕೊಳ್ಳುತ್ತಾರೆಯೋ! ಈ ದೃಷ್ಟಿಯಿಂದ ವಿದ್ಯಾರ್ಥಿಗಳು ಕನ್ನಡದಲ್ಲಿ ತಮ್ಮ ಭಾವನೆಗಳನ್ನು ಹೇಳುವುದನ್ನು ಕಲಿಯಬೇಕು. ತಮ್ಮ ಲೇಖನಿಯನ್ನು ಪಳಗಿಸಿ ಪಳಗಿಸಿ ಹರಿತಮಾಡಿಕೊಳ್ಳಬೇಕು.

"ಕಾಲೇಜು ಬರವಣಿಗೆ"ಯ ಮೊದಲನೆಯ ಆವರ್ತದಲ್ಲಿ ಕನ್ನಡ ಶೈಲಿ, ಭಾಷೆ, ಪದಪ್ರಯೋಗ, ಮಾತಿನ ಸೊಗಸು, ನವಿರು, ಶಬ್ದಸೌಷ್ಠವ, ಶಬ್ದ ಮಾಧುರ್ಯ, ಅರ್ಥಸ್ಪಷ್ಟತೆ, ಪ್ರಯೋಗಗಳ ವೈಶಿಷ್ಟ್ಯಗಳನ್ನುಳ್ಳ ಲೇಖನಗಳು ಇವೆ. ಎಲ್ಲ ಬರವಣಿಗೆಯ ಮಟ್ಟವೂ ನಿಜವಾಗಿ ಉನ್ನತವಾಗಿದೆ. ವಿದ್ಯಾರ್ಥಿ ಗಳ ವಿಶಾಲಜ್ಞಾನವೂ ಗೋಚರವಾಗುತ್ತಿವೆ. ಎಲ್ಲ ಪ್ರಬಂಧಗಳೂ ಒಂದೇ ಮಟ್ಟದವಾಗಿರುವುದು ಸಾಧ್ಯವಿಲ್ಲ. ಮನುಷ್ಯರಲ್ಲಿ ಹೇಗೆ ವೈವಿಧ್ಯವೋ ಕೃತಿ ಗಳಲ್ಲಿಯೂ ಹಾಗೆಯೇ ವೈವಿಧ್ಯ . . . ಎಲ್ಲ ಲೇಖನಗಳೂ ಚೆನ್ನಾಗಿದ್ದರೂ ನನ್ನ ಸ್ವಭಾವದಿಂದ ನಾನು "ತರಗತಿಯ ಕಿಟಕಿಯಿಂದಾಚೆ" ಎಂಬ ಎಸ್ಸೆಗೆ ಮೊದಲ ಮಾಲೆ ಹಾಕುತ್ತೇನೆ. 'ಒಬ್ಬ ಹುಡುಗ, ಇಂತಹ ಉತ್ತಮ ಪ್ರಬಂಧವನ್ನು ಬರೆದನಲ್ಲ!' ಎಂದು ನನಗೆ ಸಂತೋಷವೂ ಹೊಟ್ಟೆಕಿಚ್ಚೂ ಉಂಟಾಗಿದೆ. ಅಲ್ಲಿಂದ ಮುಂದೆ ಅಷ್ಟೇ ಉತ್ತಮವಾದ ಪ್ರಬಂಧ "ಮದುವೆ ಮನೆಯ ಸಂಗೀತ." ಮುಂದಿನ "ಕಾಂಪೌಂಡ್‌ಗೋಡೆ" ನಿಜವಾಗಿ ಭರ್ಜರಿ ಪ್ರಬಂಧ. ಹಾಗೆಯೇ ಓದುತ್ತಾ ಹೋದರೆ, ಏರೋಪ್ಲೇನು ತಲೆಯ ಮೇಲೆ ಹಾರಿ ಹೋದಾಗ, ಕಾಲೇಜು ದಾರಿಯ ದನಗಳು, ಸ್ನೇಹದ ಸವಿ, ಇಂಪು, ಟೋಪಿ, ಮಕ್ಕಳ ಮಾತು, ಪುಸ್ತಕ ಸಂಗ್ರಹಣ—ಪ್ರತಿಯೊಂದೂ ಒಂದೊಂದು ರೀತಿಯಿಂದ ಸ್ವಾರಸ್ಯವಾಗಿದೆ. ಎಲ್ಲದರಲ್ಲಿಯೂ ಒಂದೊಂದು ನಾವೀನ್ಯತೆ ಇದೆ. ಟೋಪಿಯ ಮೇಲೆ ೧೭ ಬರಹಗಳು ಬಂದುದು ಟೋಪಿಯ ಮಹಿಮೆ ಎಂದಿಗಿಂತ ಹೆಚ್ಚುತ್ತಲೇ ಇದೆ ಎಂಬುದನ್ನು ತೋರಿಸುತ್ತದೆ.

ಬರೆಯುವ ಅಭ್ಯಾಸವನ್ನು ಮುಂದುವರಿಸಿದರೆ ಇವರಲ್ಲಿ ಅನೇಕರು ಮುಂದೆ ಒಳ್ಳೆ ಲೇಖಕರಾಗುತ್ತಾರೆ. ಒಂದು ವೇಳೆ ಮುಂದುವರಿಸದೆ ಇಷ್ಟಕ್ಕೇ ನಿಲ್ಲಿಸಿದರೂ, ಈ ಕೃತಿಗಳು ಸ್ವಯಂಪೂರ್ಣವಾಗಿ ಓದುಗರಿಗೆ ಆನಂದ ಕೊಡು ತ್ತವೆ. ನಿಮ್ಮಂತಹ ಸಹಾನುಭೂತಿಯುಳ್ಳ ಅಧ್ಯಾಪಕ ಸಿಕ್ಕಿರುವಂತೆ ಸಹಾನು ಭೂತಿಯ ವಾಚಕರು ಸಿಕ್ಕಿದರೆ, ಇವರಿಂದ ಇನ್ನೂ ಅನೇಕ ಕೃತಿಗಳು ಬರುವು

ದರಲ್ಲಿ ಸಂದೇಹವಿಲ್ಲ. ಗುರುಶಿಷ್ಯರ ಪ್ರೇಮವೂ ಮಧುರಬಾಂಧವ್ಯವೂ ಹೀಗೆ ಬೆಳೆಯಲಿ.

ರುಚಿರುಚಿಯಾದ ನಾನಾ ಬಗೆಯ ಹಣ್ಣುಗಳು ತಟ್ಟೆಯಲ್ಲಿದ್ದರೂ, ರಸಜ್ಞ ತನ್ನ ಅಭಿರುಚಿಗೆ ತಕ್ಕಂತೆ ತನಗೆ ಬೇಕಾದುದನ್ನು ಆರಿಸಿಕೊಳ್ಳುತ್ತಾನೆ. ಹಾಗೆ ನಾನು ಈ ರಸಪೂರ್ಣ ಫಲಸಂಗ್ರಹದಿಂದ ಅನುಕ್ರಮವಾಗಿ "ತರಗತಿಯ ಕಿಟಕಿಯಿಂದಾಚೆ", "ಮದುವೆ ಮನೆಯ ಸಂಗೀತ", "ಕಾಂಪೌಂಡ್ ಗೋಡೆ" ಇವುಗಳನ್ನು ಆರಿಸಿಕೊಳ್ಳುತ್ತೇನೆ.

**—ಗೊರೂರು ರಾಮಸ್ವಾಮಯ್ಯಂಗಾರ್**

§

ಈ ಬರವಣಿಗೆಗಳು ಅಚ್ಚಿನ ಮೂಲಕ ಹಾದು ಈ ಪುಸ್ತಕದ ಸುಂದರ ರೂಪವನ್ನು ತಾಳಿ ಬರುವುದಕ್ಕೂ ಮುಂಚೆ ನಾವಿಬ್ಬರೂ ಇವುಗಳಲ್ಲಿ ಒಂದೆರಡನ್ನು ಓದಿದ ಜ್ಞಾಪಕ ಈಗ ಬರುತ್ತದೆ. ತಮಗೆ ತಮ್ಮ ವಿದ್ಯಾರ್ಥಿಗಳಲ್ಲಿ ಎಷ್ಟು ಮಮತೆ, ಎಂಥ ಅಭಿಮಾನ, ಎಂಥ ಮೆಚ್ಚಿಗೆ ಮತ್ತು ಈ ಮಮತೆ, ಈ ಅಭಿಮಾನ, ಈ ಮೆಚ್ಚಿಗೆಗೆ ಅವರೂ ಹೇಗೆ ಸತ್ಪಾತ್ರರು ಎಂಬುದನ್ನು ನಾನು ಆಗ ಅರಿತುಕೊಂಡೆ. ಈ ವಿದ್ಯಾರ್ಥಿಗಳ ಈಗಿನ ದೆಸೆಗೂ ನಾನು ವಿದ್ಯಾರ್ಥಿಯಾಗಿದ್ದಾಗ ನಾನಿದ್ದ ದೆಸೆಗೂ ಹೋಲಿಸಿಕೊಂಡು, ಇವರು ಪುಣ್ಯಶಾಲಿಗಳೆಂದುಕೊಂಡೆ. ಈಗಿನ ಕಾಲದ ಹುಡುಗರು ಎಲ್ಲದರಲ್ಲೂ ನಮ್ಮನ್ನು ಮೀರಿಸುವಂತಿದ್ದಾರೆ. ಇದಕ್ಕಿಂತ ಹರ್ಷಪ್ರದವಾದ ವಿಚಾರ ಮತ್ತಾವುದಿದೆ? ಬರವಣಿಗೆ ಕುಶಲವಾಗಿರುವುದಲ್ಲದೆ ರಸವತ್ತಾಗಿಯೂ ಇದೆ. ಇಂಗ್ಲಿಷಿನಲ್ಲಿ ಈ ಮಟ್ಟದ ಬರವಣಿಗೆಯನ್ನು ಇಷ್ಟು ಸಹಜತೆಯಿಂದ ಚಿತ್ರಿಸಲು ಈ ವಯಸ್ಸು ಮತ್ತು ವಿದ್ಯೆಯ ಮಟ್ಟದ ವಿದ್ಯಾರ್ಥಿಗಳಿಗೆ ಯಾವ ಕಾಲದಲ್ಲಾದರೂ ಸಾಧ್ಯವಾಗಿತ್ತೆ —ಎನ್ನಿಸುತ್ತವೆ ಈ ಲೇಖಗಳು. ನನ್ನ ಮನಃಪೂರ್ವಕವಾದ ಅಭಿನಂದನೆಗಳನ್ನು ಈ ಎಲ್ಲ ಬರಹಗಾರರಿಗೂ ನನ್ನ ಪರವಾಗಿ ತಾವು ಸಲ್ಲಿಸಬೇಕೆಂದು ಪ್ರಾರ್ಥಿಸುತ್ತೇನೆ. ಒಂದು ಸಲಹೆಯನ್ನು ಕೊಡುವುದಾದರೆ, ವಿಜ್ಞಾನದ ವಿಷಯವಾಗಿ ಲೇಖನಗಳು ನಿಮ್ಮ ಹೊತ್ತಗೆಯಲ್ಲಿ ಒತ್ತೊತ್ತಾಗಿ ಬರುತ್ತಿರಲಿ ಎಂದು ಹೇಳಬಯಸುತ್ತೇನೆ. ನಮ್ಮ ದೈನಂದಿನ ಜೀವನಕ್ಕೆ ಸಂಬಂಧಪಟ್ಟ

ವೈಜ್ಞಾನಿಕ ವಿಷಯಗಳ ಮೇಲೆ ವಿದ್ಯಾರ್ಥಿಗಳು ತಮ್ಮ ಸ್ವಂತ ಅನುಭವಕ್ಕೆ ಬಂದ ಸಂಗತಿಗಳನ್ನು ಕುರಿತು ಬರೆದರೆ ಕನ್ನಡದಲ್ಲಿ ವೈಜ್ಞಾನಿಕ ವಿದ್ಯೆಯ ವಾತಾವರಣ ಹುಟ್ಟಿ, ಆ ಕ್ಷೇತ್ರದಲ್ಲಿ ನಮ್ಮ ಭಾಷೆ ತನ್ನ ಪ್ರಭುತ್ವವನ್ನು ಸ್ಥಾಪಿಸಲು ಸಾಧ್ಯವಾದೀತು. ಇತಿ ಶಂ.

—ಪ್ರ. ತಿ. ನ.

§

"College Baravanige" is a praiseworthy effort. It endorses the hopes we formed 20-30 years ago of possibilities of development in Kannada writing. The essays show a lively play of the mind on themes around us, and they also show a growing sense of word-power. On the whole they are delightful.

I am sure more serious subjects will come to be taken up if the publication work is continued. And the test of a language's fitness to survive is its capacity to express both precisely and concisely the complex ideas of the contemporary world. This capacity can grow only when writers come forward to handle topics of science and *Sastra.* When one sets about to narrate a story or describe a scene, one is free to choose one's words from among a plenty, and use any number of such words, in depicting a situation or concocting a dialogue. It is the *thing* that presents the real difficulty here more than the language. On the other hand it is when we have to enunciate a theory or analyse an argument that our resources in expression are put to test. I shall be eager to learn how your students will react to this challenge.

You know I hate superstition, and I would not have any one make a fetish of our old rules of grammar. But

can we forget, may we go so far as to forget, that grammar is to language what mathematics is to science, a means to clearness and accuracy in understanding and expression? This remark of mine does not imply that I have detected any serious violation of grammar in these delightful sketches. It is not at all so. My remark has reference to some recent styles of writing in general; and I am particularly concerned about new word-forms. While I am not at all anxious to be counted a purist, I would certainly plead against unnecessary malformations and the easy acceptance of popular corruptions. We all recognise and respect a quality called 'elegance' even though we are not able to define those words. I wish your students would always cultivate their sense of delicacy and dignity in the use of language. Let me repeat that this is not a criticism of the writing before me, but a general plea for continued care in the exercise of a gift that sometimes misleads us by seeming easy and ready.

My warmest congratulations to you and your contributors. May their talents and powers grow by the grace of God and may the good cause of "College Baravanige' prosper.

—*D. V. Gundappa*

ಬಿ. ಬಿ. ಡಿ. ಪವರ್ ಪ್ರೆಸ್, ಅರಳೇಪೇಟೆ, ಬೆಂಗಳೂರು ಸಿಟಿ.

# ಬೆಂಗಳೂರು ಸೆಂಟ್ರಲ್ ಕಾಲೇಜ್
# ಕರ್ನಾಟಕ ಸಂಘದ ಪ್ರಕಟನೆಗಳು

---

೧. **ಶ್ರೀ ಕೈಲಾಸಂ ಅವರ ಸ್ಮರಣೆ** — ರೂ. ೨/೪
ಶ್ರೀ ಕೆ. ಸಿ. ಅಯ್ಯರ್ ಬರೆದದ್ದು.

೨. **ಕರ್ನಾಟಕ ಮಾಲವಿಕಾಗ್ನಿಮಿತ್ರ ನಾಟಕಂ** — ರೂ. ೧/೧೨
ಆಸ್ಥಾನ ವಿದ್ವಾನ್ ಪ್ರೊ. ಶಂ. ಸುಬ್ರಹ್ಮಣ್ಯ ಶಾಸ್ತ್ರಿಗಳ ಅನುವಾದ.

೩. **ಮೊನ್ನ ವನ್ನ** (ಮೂರು ಅಂಕಗಳ ನಾಟಕ) — ರೂ. ೨/-
ಬೆಲ್ಜಿಯಂ ದೇಶದ ಮಾರಿಸ್ ಮ್ಯಾಟರ್‌ಲಿಂಕ್ ಮಹಾಕವಿಯ ನಾಟಕದ ಅನುವಾದ. ಶ್ರೀ ಎಸ್. ವಿ. ಶಾಸ್ತ್ರೀ ಅವರು ಮಾಡಿದ್ದು.

೪. **ನಾಗನ ಪದಗಳು** — ರೂ. ೧/೪
ಶ್ರೀ ಜಿ. ಪಿ. ರಾಜರತ್ನಂ ಬರೆದವು. 'ರತ್ನನ ಪದಗಳು' ಜಾತಿಯವು.

೫. **ಬಾಲ ಸರಸ್ವತಿ** (೩೬ ಬೇರೆ ಬೇರೆ ಕೃತಿಗಳು) — ರೂ. ೨/೮
ಸೆಂಟ್ರಲ್ ಕಾಲೇಜ್ ಕರ್ನಾಟಕ ಸಂಘದ ಸದಸ್ಯರಿಂದ.

೬. **ನಮ್ಮ ನಮ್ಮವರು** (೬೬ ಬೇರೆ ಬೇರೆ ಕೃತಿಗಳು) — ರೂ. ೨/೮
ಮೈಸೂರು ವಿಶ್ವವಿದ್ಯಾನಿಲಯದ ಇಂಟರ್ ವಿದ್ಯಾರ್ಥಿಗಳಿಂದ.

೭. **ಚಿನ್ನದ ದೋಸೆ ಮತ್ತು ಇತರ ಕಥೆಗಳು** — ಹನ್ನೆರಡಾಣೆ
ಸಂಘದ ಸದಸ್ಯರು ಸಂಗ್ರಹಿಸಿದ ಎಂಟು ಜಾನಪದ ಕಥೆಗಳು.

೮. **ಶಕ್ತಿ** (ಸಚಿತ್ರ) — ರೂ. ೩/-
ಶ್ರೀ ಆರ್. ಎಲ್. ನರಸಿಂಹಯ್ಯ ಅವರ ವಿಜ್ಞಾನ ಗ್ರಂಥ.

೯. **ಮಕ್ಕಳ ಮಾತು** (ಕಾಲೇಜ್ ಬರವಣಿಗೆ) — ರೂ. ೧/-

೧೦. **ಪಚ್ಚೆಯ ತೆನೆ** (ಕಾಲೇಜ್ ಬರವಣಿಗೆ) — ರೂ. ೧/-

೧೧. **ಗಂಧದ ಹುಡಿ** (ಕಾಲೇಜ್ ಬರವಣಿಗೆ) — ರೂ. ೧/-

---

**ಕರ್ನಾಟಕ ಸಂಘ, ಸೆಂಟ್ರಲ್ ಕಾಲೇಜ್, ಬೆಂಗಳೂರು**